ಸಂಪುಟ: 13 Volume | ಸಂಚಿಕೆ: 341 Issue | ಪುಟಗಳು 08 Pages | ಗುರುವಾರ 05 ಮಾರ್ಚ್ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

**ಬೆಳಗು**

ಕ್ರೀಡೆಯಲ್ಲಿ ಕೆಲವೊಮ್ಮೆ ನೀವು ಅಪಾಯಗಳನ್ನು ಆಹ್ವಾನಿಸಲೇಬೇಕು. ಆದರೆ ವಾಸ್ತವದ ಅಪಾಯಗಳನ್ನು ಎದುರಿಸಿ, ಹುಚ್ಚು ಅಪಾಯಗಳನ್ನಲ್ಲ.

–ಸರ್ಗಿ ಬುಬ್ಕಾ

ಮಹಿಳಾ ಮತ್ತು ಮಕ್ಕಳ ಗ್ರಾಮ ಸಭೆ 6
ಪಾದಯಾತ್ರಿಗಳಿಗೆ ಉಚಿತ ಆರೋಗ್ಯ ಸೇವೆ 7
ಆಧುನಿಕ ಪರೀಕ್ಷೆ ಮೂಲಕ ಕ್ಯಾನ್ಸರ್ ಗುಣ 8

**ಮಲ್ಲಮ್ಮ ನುಡಿ**

**ಯುಗಾದಿ ವಿಶೇಷಾಂಕ- 2026**

ಸದಾ ಹೊಸತನಕ್ಕೆ ಹೆಸರಾದ ಪ್ರತಿಷ್ಠಿತ ಪ್ರಾದೇಶಿಕ ಮಲ್ಲಮ್ಮನುಡಿ ದಿನಪತ್ರಿಕೆಯು ಈ ಬಾರಿ ಯುಗಾದಿ ವಿನೂತನ ವಿಶೇಷಾಂಕ–2026 ಹೊರತರಲಿದೆ. ಇದರ ಸಿದ್ಧತೆಯು ಈಗಾಗಲೇ ಆರಂಭವಾಗಿದೆ. ಇದರ ಪ್ರಯುಕ್ತ ವಿಶೇಷ ಸಂಚಿಕೆಗಾಗಿ ಲೇಖಕರಿಂದ ಬರಹಗಳನ್ನು ಆಹ್ವಾನಿಸುತ್ತಿದೆ.

**ಲೇಖಕರು ಪಾಲಿಸಬೇಕಾದ ಸೂಚನೆಗಳು**

- ನನ್ನೂರು ಹಲವು ವೈಶಿಷ್ಟ್ಯಗಳ ತವರು: 200 ಪದ ಮಿತಿ
- ನನ್ನ ಜೀವನದ ಟರ್ನಿಂಗ್ ಪಾಯಿಂಟ್: 200 ಪದಮಿತಿ
- ನಾನು ಪ್ರೀತಿಸಿದೆ. ಆದರೆ ಆಕೆಗೆ ಹೇಳಲೇ ಇಲ್ಲ, ಸ್ವ ಅನುಭವ: 200 ಪದ ಮಿತಿ
- ಕಥೆಗಳು: 600 ಪದಮಿತಿ
- ಯಾವುದೇ ವಿಷಯ ಕುರಿತ ಲಲಿತ ಪ್ರಬಂಧ: 300 ಪದ
- ಕವನ 24 ಸಾಲು ಮೀರದಿರಲಿ.

► ಲೇಖನಗಳನ್ನು ಕಳುಹಿಸಲು ಅಂತಿಮ ದಿನಾಂಕ: 5–03–2026

► ಬರಹಗಳ ಆಯ್ಕೆಯಲ್ಲಿ ಸಂಚಿಕೆ ಸಂಪಾದಕರ ತೀರ್ಮಾನವೇ ಅಂತಿಮ.

ಈ ಮೇಲ್: mallammanudi@gmail.com



ಬೀದರ್‌ನಲ್ಲಿ ನಡೆಯಲಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಗಡಿ ಭಾಗದ ಸಮಸ್ಯೆಗಳ ಬಗ್ಗೆ ಆಯೋಜಿಸುವ ಗೋಷ್ಠಿಯಲ್ಲಿ ಭಾಗವಹಿಸುವಂತೆ ಗಡಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಅವರನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಆಹ್ವಾನಿಸಿದರು. ಗಡಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತಿಹಳ್ಳಿ ಹಾಜರಿದ್ದರು.



ರಾಕೇಶ್ ಪಾಟೀಲ್, ಗಣೇಶ್ ಪಾಟೀಲ್, ಶ್ರೀನಾಥ್ ದೇವಣಿ, ಹುಲೆಪ್ಪ ದೇವಣಿ, ಆನಂದ್ ಕುಂಬಾರ, ಉಮೇಶ್ ಜಮಗಿ, ಚನು ಪಾಟೀಲ್, ಪ್ರವೀಣ್ ದೇವಣಿ, ಪ್ರಶಾಂತ್ ದೇವಣಿ, ರೇವಣಸಿದ್ಧ ದೇವಣಿ. ಈರಪ್ಪ ಹಡಪದ್, ರವಿ ಗುಲಶೆಟ್ಟಿ ಅವರು ಮಾಜಿ ಸಚಿವ ರಾಜಶೇಖರ್ ಪಾಟಿಲ್ ಜೊತೆಗೂಡಿ ಹುಮನಾಬಾದ್‌ನಲ್ಲಿ ಹೋಳಿ ಆಚರಿಸಿದ್ದು ಹೀಗೆ.

## ಹುದ್ದೆ ಭರ್ತಿಗೆ ಬಿಜೆಪಿ ರಾಜ್ಯಾಧ್ಯಕ್ಷ ಒತ್ತಾಯ

- ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು




ಒಳ ಮೀಸಲಾತಿಯನ್ನೂ ಪರಿಗಣಿಸಿ ಯುವಜನತೆಗೆ ಉದ್ಯೋಗಸೃಷ್ಟಿಮಾಡಬೇಕು. ನ್ಯಾಯಾಲಯದ ಕುಂಟುನೆಪ ಕೊಡಬಾರದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ಎಚ್ಚರಿಕೆ ನೀಡಿದ್ದಾರೆ. ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಾಧ್ಯಮಗಳ ಜತೆ ಮಾತನಾಡಿ, ಇಲ್ಲವಾದರೆ ಬಿಜೆಪಿ ಉಗ್ರ ಹೋರಾಟಕ್ಕೆ ಇಳಿಯುವುದು ಅನಿವಾರ್ಯವಾದೀತು. ಮೀಸಲಾತಿ ಪ್ರಮಾಣವನ್ನು ಶೇ .50ರಿಂದ ಶೇ. 56ಕ್ಕೆ ಏರಿಸಿದ್ದಾರೆ. ನೀವು 50 ಸಾವಿರ ಖಾಲಿ ಹುದ್ದೆ ಭರ್ತಿ ಮಾಡುತ್ತೀರಾ ಅಥವಾ 1 ಲಕ್ಷ ಹುದ್ದೆ ಭರ್ತಿ ಮಾಡುವಿರಾ ಎಂಬುದು ನಿಮಗೆ ಬಿಟ್ಟದ್ದು. ಎಲ್ಲ ಖಾಲಿ ಹುದ್ದೆ ಭರ್ತಿ ಮಾಡಿ ಎಂಬ ಆಗ್ರಹ ನಮ್ಮದು ಎಂದಿದ್ದಾರೆ.

## ಇವಿ ಕ್ಷೇತ್ರ ಪ್ರಗತಿಗೆ ಕೇಂದ್ರ ಉತ್ತೇಜನ

- ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯದಲ್ಲಿ ಎಲೆಕ್ಟ್ರಿಕ್ ವಾಹನ ಕ್ಷೇತ್ರದ ಅಭಿವೃದ್ಧಿ ಹಾಗೂ ಅದಕ್ಕೆ ಪೂರಕ ವ್ಯವಸ್ಥೆಯನ್ನು ಸೃಷ್ಟಿಸುವ ದಿಸೆಯಲ್ಲಿ ಕೇಂದ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, ಕರ್ನಾಟಕ ಕೈಗಾರಿಕೆ ಮತ್ತು ವಾಣಿಜ್ಯ ಮಂಡಳಿಯ ಅಧ್ಯಕ್ಷ, ಪದಾಧಿಕಾರಿ ಮತ್ತು ಕೈಗಾರಿಕೋದ್ಯಮಿಗಳ ಜತೆ ಸಭೆ ನಡೆಸಿದ್ದಾರೆ. ನಗರದ ಎಚ್ ಎಂಟಿ ಭವನದಲ್ಲಿರುವ ಸಚಿವರ ಕಚೇರಿಯಲ್ಲಿ ನಡೆದ ಈ ಸಭೆಯಲ್ಲಿ; ರಾಜ್ಯದಲ್ಲಿ ಎಲೆಕ್ಟ್ರಿಕ್ ವಾಹನ ಕ್ಷೇತ್ರದ ವಿಸ್ತರಣೆಗೆ ಇರುವ ವಿಪುಲ ಅವಕಾಶಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಲಾಗಿದೆ. ಈಗಾಗಲೇ ಮಂಡ್ಯ ಜಿಲ್ಲೆಯಲ್ಲಿ500



ಕೋಟಿ ವೆಚ್ಚದಲ್ಲಿ ಜಾಗತಿಕ ಮಟ್ಟದ ಆಟೋಮೊಟಿವ್ ರಿಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ ಪರೀಕ್ಷಾ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗಿದೆ. ಈ ಸಂಬಂಧ ರಾಜ್ಯ ಸರ್ಕಾರಕ್ಕೆ, ಅದರಲ್ಲಿಯೂ ಮುಖ್ಯಮಂತ್ರಿಗಳಿಗೆ ಸ್ವತಃ ನಾನೇ ಪತ್ರ ಬರೆದಿದ್ದೇನೆ ಎಂದಿದ್ದಾರೆ.

# ಎಡ ಬಲ ಹೈ ವಿಲವಿಲ

### ಒಳಮೀಸಲು ಜಾರಿಗಾಗಿ ಹಿರಿಯ ನಾಯಕರ ನಡುವೆ ಭಿನ್ನಾಭಿಪ್ರಾಯ | ಕಾಂಗ್ರೆಸ್ ವರಿಷ್ಠರ ಅಂಗಳದಲ್ಲಿ ಸಮಸ್ಯೆ

- ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಒಳಮೀಸಲು ಬಗ್ಗೆ ಎಡಗೈ ಮತ್ತು ಬಲಗೈ ನಾಯಕರ ನಡುವೆ ಜಟಾಪಟಿ ತೀವ್ರಗೊಂಡಿದೆ. ಸಮಸ್ಯೆ ಗಂಭೀರವಾದ ಹಿನ್ನೆಲೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಬಲಗೈ ಹಾಗೂ ಎಡಗೈ ಸಮುದಾಯದ ನಾಯಕರು ಭೇಟಿ ಮಾಡಿದ್ದಾರೆ. ಈ ವೇಳೆ ಕೆಲವೊಂದು ಬೇಡಿಕೆಗಳನ್ನು ಮುಂದಿಟ್ಟಿರುವುದು ತಿಳಿದು ಬಂದಿದೆ.

**ಅಭಿಪ್ರಾಯ ಹಂಚಿಕೆ:** ಸಚಿವ ಕೆ ಎಚ್ ಮುನಿಯಪ್ಪ, ಆರ್ ಬಿ ತಿಮ್ಮಾಪುರ, ಮಾಜಿ ಸಚಿವ ಎಚ್. ಆಂಜನೇಯ, ಶಾಸಕ ನೆಲಮಂಗಲ ಶ್ರೀನಿವಾಸ್, ಧರ್ಮಸೇನಾ ಭೇಟಿ ಅವರು ಭೇಟಿ ಮಾಡಿ ಈ ಕುರಿತು ಚರ್ಚಿಸಿದ್ದಾರೆ. ಇದಕ್ಕೂ ಮುನ್ನ ಸಚಿವ ಡಾ. ಎಚ್ ಸಿ ಮಹಾದೇವಪ್ಪ ಹಾಗೂ ಡಾ. ಜಿ ಪರಮೇಶ್ವರ್ ಭೇಟಿ ಮಾಡಿ ತಮ್ಮ ಅಭಿಪ್ರಾಯವನ್ನು ವಿನಿಮಯ ಮಾಡಿಕೊಂಡಿದ್ದಾರೆ.

**ಯಾವುದೇ ಸಮಸ್ಯೆ ಇಲ್ಲ:** ದಲಿತ ನಾಯಕತ್ವ ವಿಚಾರಕ್ಕೂ ಒಳ ಮೀಸಲಾತಿಗೂ ಯಾವುದೇ ಸಮಸ್ಯೆ ಇಲ್ಲ. ಯಾವ ಹಿನ್ನಡೆಯೂ ಇಲ್ಲ. ನಮ್ಮ ನಾಯಕ ಪರಮೇಶ್ವರ್, ಮುನಿಯಪ್ಪ ಹಾಗೂ ಮಹದೇವಪ್ಪ ಅವರು ಇದ್ದಾರೆ. ನೀವು ನನ್ನನ್ನು ನಾಯಕ ಎಂದು ಒಪ್ಪಿಕೊಳ್ಳುವುದಾದರೆ ನಾನು ರೆಡಿ ಇದ್ದೇನೆ ಎಂದು ಸಚಿವ ಪ್ರಿಯಾಂಕ್ ವಿವರ ನೀಡಿದ್ದಾರೆ.



### ಗೃಹ ಸಚಿವ ಕಚೇರಿಯಲ್ಲಿ ಚರ್ಚೆ

ಖರ್ಗೆ ಅವರನ್ನು ಭೇಟಿ ಆದ ಬಳಿಕ ಗೃಹ ಸಚಿವ ಪರಮೇಶ್ವರ್ ಜೊತೆಗೆ ದಲಿತ ಎಡಗೈ ಸಮುದಾಯದ ನಾಯಕರು ಚರ್ಚೆ ನಡೆಸಿದ್ದಾರೆ. ಸದಾಶಿವನಗರದ ಪರಮೇಶ್ವರ್ ಸರ್ಕಾರಿ ನಿವಾಸದಲ್ಲಿ ಚರ್ಚೆ ನಡೆಸಿದ್ದು, ಪರಮೇಶ್ವರ್ ಗೃಹ ಕಚೇರಿಗೆ ಭೇಟಿ ನೀಡಿರುವ ಸಚಿವ ಮುನಿಯಪ್ಪ, ಸಚಿವ ತಿಮ್ಮಾಪುರ, ಮಾಜಿ ಸಚಿವ ಆಂಜನೇಯ ಶಾಸಕ ಶ್ರೀನಿವಾಸ್ ಎಲ್. ಹನುಮಂತಯ್ಯ, ಸಮುದಾಯದ ಮುಖಂಡರಾದ ಧರ್ಮಸೇನ ಗೌತಮ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

### ಎಡಗೈ ಡಿಮ್ಯಾಂಡ್?

ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಾಗ ಪರಿಶಿಷ್ಟ ಜಾತಿಗೆ ಇರುವ ಶೇ 15 ರಷ್ಟು ಮೀಸಲಾತಿಯಲ್ಲಿ ಒಳಮೀಸಲಾತಿ ಅನ್ವಯಿಸುವ ಕುರಿತಾಗಿ ತೀರ್ಮಾನ ಕೈಗೊಳ್ಳಬೇಕು. ಒಳ ಮೀಸಲಾತಿ ಅಳವಡಿಸದೇ ನೇಮಕಾತಿ ಪ್ರಕ್ರಿಯೆ ಆರಂಭಿಸಿದರೆ ಅದು ಎಡಗೈ ಸಮುದಾಯಕ್ಕೆ ಅನ್ಯಾಯ ಮಾಡಿದಂತೆ ಎಂಬುವುದು ಆಗ್ರಹವಾಗಿದೆ. ಪರಿಶಿಷ್ಟ ಜಾತಿಯ ಮೀಸಲಾತಿಯಲ್ಲಿ ಶೇ 15 ರಿಂದ 17 ಕ್ಕೆ ಏರಿಕೆ ಮಾಡಲಾಗಿದೆ.

### ಸಚಿವ ಸಂಪುಟದತ್ತ ಚಿತ್ತ

ಏತನ್ಮಧ್ಯೆ ಸಚಿವರು ಶಾಸಕರು ಅಡ್ವೊಕೇಟ್ ಜನರಲ್ ಜೊತೆಗೆ ಮಾತುಕತೆ ನಡೆಸಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರ ಜೊತೆಗೂ ಮಾತುಕತೆ ನಡೆಸಿದ್ದಾರೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಸಿ ಆದೇಶ ಪರಿಷ್ಕರಣೆ ಮಾಡುವ ಬಗ್ಗೆ ಅವರು ಭರವಸೆ ನೀಡಿದ್ದಾರೆ. ಹಾಗಾಗಿ ಸಮುದಾಯದ ಪರವಾಗಿ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ ಎಂದು ಸಚಿವರು ನಿರೀಕ್ಷೆ ವ್ಯಕ್ತಪಡಿಸಿದ್ದಾರೆ.

### ಸಂಘಟನೆಯ ಬೇಡಿಕೆ?

ಸರ್ಕಾರದ ನಡೆಗೆ ಮಾದಿಗ ಸಂಘಟನೆಗಳು ವಿರೋಧ ಸೂಚಿಸಿವೆ. ಎಸ್ ಸಿ ಒಳಮೀಸಲಾತಿಯನ್ನು ಜಾರಿಗೊಳಿಸದೆ ವಿವಿಧ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ನಿರ್ಧಾರಕ್ಕೆ ಮಾದಿಗ ಸಂಘಟನೆಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ. ಈ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಅವರಿಗೆ ಪತ್ರವನ್ನು ಬರೆದು ತಮ್ಮ ಆಕ್ಷೇಪವನ್ನು ವ್ಯಕ್ತಪಡಿಸಿದೆ.

### AICC ಅಂಗಳಲ್ಲಿ ಮೀಸಲು

ಒಳಮೀಸಲು ವಿಚಾರ ಇದೀಗ ಎಐಸಿಸಿ ಅಂಗಳಕ್ಕೂ ತಲುಪಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸಚಿವರಾದ ಡಾ.ಜಿ.ಪರಮೇಶ್ವರ್, ಡಾ. ಎಚ್.ಸಿ.ಮಹಾದೇವಪ್ಪ ಭೇಟಿ ಮಾಡಿ ಚರ್ಚಿಸಿದ್ದಾರೆ. ಎಡಗೈ ಸಮುದಾಯದ ನಾಯಕರ ವಿರೋಧದ ಹಿನ್ನೆಲೆಯಲ್ಲಿ ಸಿಎಂ ನಿವಾಸದಲ್ಲಿ ನಡೆದ ಸಭೆಯ ಬಗ್ಗೆ ನಾಯಕರು ಮಾಹಿತಿ ನೀಡಿದ್ದಾರೆ.

## ನೆರಳು ಕೊಡುವ 267 ಮರಕ್ಕೆ ಕೊಡಲಿ..?

- ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಬಿಸಿಲೂರು ಖ್ಯಾತಿಯ ಬಳ್ಳಾರಿ ನಗರ ಮತ್ತೆ ಸುದ್ದಿಯಲ್ಲಿದೆ. ನೆರಳು ಅರಸಿ ಬರುವವರಿಗೆ ಆಶ್ರಯ ನೀಡುತ್ತಿದ್ದ ವೃಕ್ಷಗಳಿಗೆ ಕೊಡಲಿ ಪೆಟ್ಟು ಬೀಳುವ ಆತಂಕದಟ್ಟವಾಗಿದೆ. ರಸ್ತೆ ವಿಸ್ತರಣೆ ನೆ ಪದಲ್ಲಿ ಎರಡು ದಶಕಗಳಿಂದ ಬೆಳೆದು ನಿಂತಿರುವ ಮರಗಳ ಕಡಿತಲೆಗೆ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಅರಣ್ಯ ಇಲಾಖೆಗೆ ಪತ್ರ ಬರೆದಿರುವುದು ಪರಿಸರ ಪ್ರೇಮಿಗಳ ಕೆಂಗಣ್ಣಿಗೆ ಗುರಿಯಾಗಿದೆ.

ಬಳ್ಳಾರಿ ನಗರದಲ್ಲಿ 2024–25 ನೇ ಸಾಲಿನ ಅಪೆಂಡಿಕ್ಸ್ ಇ–ಯೋಜನೆಯಡಿ ರಸ್ತೆ ಅಭಿವೃದ್ಧಿಗಾಗಿ ಒಟ್ಟು 267 ಮರಗಳನ್ನು ತೆರವಿಗೆ ಅನುಮತಿ ಕೋರಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಅರಣ್ಯ ಇಲಾಖೆಗೆ ಪತ್ರ ಬರೆದಿರುವುದೇ ಪರಿಸರ ಪ್ರೇಮಿಗಳ ಆತಂಕಕ್ಕೆ ಕಾರಣವಾಗಿದೆ. ವಿದ್ಯಾನಗರದಿಂದ ಕೊಳಗಲ್ಲುರಸ್ತೆವರೆಗಿನ 1.90 ಕಿ.ಮೀ. ಅಭಿವೃದ್ಧಿಗೆ; ಬಸವೇಶ್ವರ ನಗರದ 2ನೇ ಮುಖ್ಯರಸ್ತೆಯಿಂದ ಸುಷ್ಮಾ ಸ್ವರಾಜ್ ಕಾಲೊನಿವರೆಗಿನ ರಸ್ತೆ ಪ್ರಗತಿಗಾಗಿ ಮರಗಳ ತೆರವಿಗೆ ಅನುಮತಿ ವಿನಂತಿಸಲಾಗಿದೆ.

## ಸಮಾಜಕ್ಕೆ ಕತ್ತರಿಯಲ್ಲ, ಸೂಜಿಬೇಕು

- ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಇಂದು ಸಾಮಾಜಿಕ ಬೆಸುಗೆಯನ್ನು ಕತ್ತರಿಸುವ ಕತ್ತರಿಗಳು ಜನಸಮುದಾಯದ ಪ್ರಜ್ಞೆಯನ್ನು ರೂಪಿಸುತ್ತಿವೆ. ಇಂಥಾ ಹೊತ್ತಲ್ಲಿ ಸಮಾಜವನ್ನು ಪರಸ್ಪರ ಹೊಲಿಯುವ ಸೂಜಿಗಳ ಅಗತ್ಯವಿದೆ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅಭಿಪ್ರಾಯಪಟ್ಟಿದ್ದಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವ ವಿದ್ಯಾನಿಲಯ ಮತ್ತು ಬೆಂಗಳೂರು ವಿಶ್ವ ವಿದ್ಯಾನಿಲಯ




ಆಯೋಜಿಸಿದ್ದ ಮಾಧ್ಯಮ ಹಬ್ಬ–2026 ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ಅರಳುವ ಹೂವಿನ ಒಳಗೆ ಮಕರಂದ ಬೆರೆತಿರುವ ಹಾಗೆ ಅರಳುವ ಪತ್ರಕರ್ತ/ಯ ಒಳಗೆ ಸಾಮಾಜಿಕ ಪ್ರಜ್ಞೆ ಬೆರೆತಿರಬೇಕು ಎಂದಿದ್ದಾರೆ.

## ಕನಸಿನ ಕಾಮನಬಿಲ್ಲು ಹೋಳಿ



- ಮಲ್ಲಮ್ಮ ನುಡಿ ವಾರ್ತೆ ಹಳಿಯಾಳ


ಕನಸುಗಳಿಗೆ ಬಣ್ಣ ತುಂಬುವ ಕಾಮನಹಬ್ಬ ಹೋಳಿ. ಈ ಹಬ್ಬವು ವೈವಿಧ್ಯಮಯ ಸಂಸ್ಕೃತಿ ಮತ್ತು ಸೌಹಾರ್ದತೆಯ ಸಂಕೇತವಾಗಿರುವ ವಿಶೇಷ ಹಬ್ಬವಾಗಿದೆ. ಬದುಕಿನ ಬಣ್ಣಗಳನ್ನು ನಮ್ಮ ಆತ್ಮೀಯರೊಂದಿಗೆ ಹಂಚಿಕೊಳ್ಳುವ, ಪ್ರೀತಿ ಮತ್ತು ಸ್ನೇಹವನ್ನು ರಂಗುಗಳ ಮೂಲಕ ವ್ಯಕ್ತಪಡಿಸುವ ಪವಿತ್ರ ಸುದಿನ ಇದಾಗಿದೆ. ಈ ನಿಮಿತ್ತ ಇಂದು ಪತ್ರಿಕಾ ಮಾಧ್ಯಮ ಮಿತ್ರರು, ಆರಕ್ಷಕ ಸಿಬ್ಬಂದಿ ಹಾಗೂ ಸಾರ್ವಜನಿಕರೊಂದಿಗೆ ಮಾನ್ಯ ಶಾಸಕರು ಹೋಳಿ ಹಬ್ಬದ ಸಂಭ್ರಮಾಚರಣೆಯಲ್ಲಿ ಭಾಗವಹಿಸಿ, ಬಾಂಧವ್ಯವನ್ನು ಬೆಸೆಯುವ ಬಣ್ಣಗಳ ನಡುವೆ ಪರಸ್ಪರ ಶುಭಾಶಯಗಳನ್ನು ತಿಳಿಸಿದ್ದಾರೆ. ಹೋಳಿಯ ವರ್ಣರಂಜಿತ ಬಣ್ಣಗಳು ಜೀವನದ ಅನೇಕ ಭಾವನೆಗಳು ಮತ್ತು ಅನುಭವಗಳನ್ನು ಪ್ರತಿಬಿಂಬಿಸುತ್ತವೆ. ಸಮಸ್ತ ಜನರ ಬದುಕು ಸದಾ ಸಂತೋಷ, ಶಾಂತಿ, ಪ್ರೀತಿಯ ಬಣ್ಣಗಳಿಂದ ಕಂಗೊಳಿಸಲಿ. ಹೋಳಿ ದಹನವು ಎಲ್ಲರ ನಕಾರಾತ್ಮಕತೆ ಮತ್ತು ದುಷ್ಟಶಕ್ತಿಗಳನ್ನು ದೂರ ಮಾಡಿ, ವರ್ಣರಂಜಿತ ಜೀವನಪಥವನ್ನು ಸದಾ ಬೆಳಕಿನಿಂದ ತುಂಬಿಸಲೆಂದು ಶಾಸಕರು ಶುಭ ಹಾರೈಸಿದರು.

# ಈ ಸಲ ಆಗುತ್ತಾ ಸಿಂಧನೂರು ಜಿಲ್ಲೆ

- ಮಲ್ಲಮ್ಮ ನುಡಿ ವಾರ್ತೆ ವೀರೇಶ ಹೊಸಳ್ಳಿ, ಸಿಂಧನೂರು

ಸಿಂಧನೂರು ಜಿಲ್ಲೆಯಾಗುತ್ತಾ...? ಬಹುನಿರೀಕ್ಷಿತ ಜನರ ಕನಸು ಕನಸಾಗಿಯೇ ಉಳಿಯಿತ್ತಾ? ಇಂತದ್ದೊಂದು ಮಹತ್ವದ ಪ್ರಶ್ನೆಗೆ ಸರ್ಕಾರ ಉತ್ತರಿಸಬೇಕಿದೆ. ರಾಜಕಾರಣಿಗಳು, ವಿವಿಧ ಸಂಘ–ಸಂಸ್ಥೆಗಳು ಸೇರಿ ನಾಲ್ಕೈದು ಬಾರಿ ಸಭೆಗಳು ನಡೆಸಿದ್ದು ಬಿಟ್ಟರೆ ಇಲ್ಲಿಯವರೆಗೂ ಸಿಂಧನೂರು ಜಿಲ್ಲೆಯನ್ನಾಗಿ ಮಾಡುವುದಕ್ಕೆ ಯಾವುದೇ ವಿಶೇಷ ಹೋರಾಟಕ್ಕೂ ಮನ್ನಣೆ ಸಿಕ್ಕಿಲ್ಲ ಎಂದು ಸಾರ್ವಜನಿಕರು ವಿಷಾದ ವ್ಯಕ್ತಪಡಿಸುತ್ತಿದ್ದಾರೆ.

ಸಿಂಧನೂರು ತಾಲೂಕು ಭತ್ತದ ನಾಡು ಮತ್ತು ಏಳು ಸಾವಿರ ಜವಳಗೇರಾ ಸಿಎಸಿಎಫ್ ಫಾರ್ಮ್ ಹೌಸ್ ಹೊಂದಿದ್ದು, ಏಷ್ಯಾ ಖಂಡದಲ್ಲಿ ಅತಿ ಹೆಚ್ಚು ಟ್ರ್ಯಾಕ್ಟರ್ ಮಾರಾಟ ಮತ್ತು ಅಧಿಕ ಶಿಕ್ಷಣ ಸಂಸ್ಥೆಗಳು ಜೊತೆ ವಿವಿಧ ಖಾಸಗಿ ಆಸ್ಪತ್ರೆಗಳನ್ನು ಹೊಂದಿದೆ. ಇಷ್ಟು ಬೃಹತ್ ವಿಶೇಷ ಹೊಂದಿರುವ ಸಿಂಧನೂರು ತಾಲೂಕು ತನ್ನದೇ ಹೆಸರು ಮಾಡಿ ದೊಡ್ಡ ವಾಣಿಜ್ಯ ನಗರವಾಗಿ ಬೆಳೆಯುತ್ತಿದೆ. ಈ ಕಾರಣಕ್ಕೆ ಸಿಂಧನೂರು ಜಿಲ್ಲೆಯನ್ನಾಗಿ ಮಾಡುವುದಕ್ಕೆ, ಭೌಗೋಳಿಕ ಮಾಹಿತಿ ಪದ್ಧತಿ ಪ್ರಕಾರ, ತನಿಖೆ ನಡೆಸಿದರೂ ತಾಲೂಕ ಮೊದಲನೇ ಸ್ಥಾನ ಪಡೆದುಕೊಳ್ಳುತ್ತದೆ ಎನ್ನುವುದು ಕೆಲ ವಿಶ್ಲೇಷಕರು ಅಭಿಪ್ರಾಯವಾಗಿದೆ.




ತುಂಗಭದ್ರಾ ಜಲಾಶಯ ಈ ಭಾಗದ ರೈತರು ಜೀವನಾಡಿಯಾಗಿರುವ ನದಿ ಹರಿಯುತ್ತಿದ್ದರೂ ಈ ಭಾಗದ ರೈತರು ನೀರು ಹೊಲಗಳಿಗೆ ಸರಿಯಾದ ಸಮಯಕ್ಕೆ ತಲುಪುತ್ತಿಲ್ಲ. ಹೆಸರಿಗೆ ನೂರು ಟಿಎಂಸಿ ನೀರು ಹೊಂದಿರುವ ನದಿಗಳಿಗೆ ವೃಥಾ ಹರಿದು ಹೋಗುತ್ತದೆ. ಬೇಸಿಗೆ ಕಾಲದಲ್ಲಿ ಕುಡಿಯುವ ನೀರು ಜಾನುವಾರುಗಳ ಕೊರತೆಯಿಂದಾಗಿ ಸಮಸ್ಯೆಗಳು ಸುರಿಮಳೆಯನ್ನೇ ತಾಲೂಕಿನ ಜನರು ಎದುರಿಸುತ್ತಿದ್ದಾರೆ.

ಲಭ್ಯವಿರುವ ನೀರನ್ನು ಹೇಗೆ ಸದ್ಬಳಕೆ ಮಾಡಿಕೊಳ್ಳಬೇಕು ಎಂಬ ಇಲ್ಲಿನ ನಾಯಕರಗಲ್ಲಾಲಿ ಮತ್ತು ಆಡಳಿತ ಸರ್ಕಾರಕ್ಕಾಗಲಿ ಎಲ್ಲೂ ಕಾಣಿಸುತ್ತಿಲ್ಲ. ಏಳೆಂಟು ವರ್ಷಗಳ ಕಳೆದರೂ ನವಲಿ ಸಮಾನಾಂತರ ಜಲಾಶಯ ಪ್ರತಿ ವರ್ಷವೂ ಡಿಪಿಆರ್‌ನಲ್ಲಿ ಸಮಸ್ಯೆಗಳಲ್ಲಿ ಕಳೆದುಹೋಗುತ್ತವೆಯೇ ಹೊರತು ಇಲ್ಲಿಯವರೆಗೂ ಯಾವ ಸರ್ಕಾರದಿಂದ ಒಟ್ಟಾರೆ ಯೋಜನೆ ಜಾರಿಗೆ ಬಾರದೇ ಯೋಜನೆಗಳ ವೆಚ್ಚವೂ ಹೆಚ್ಚುತ್ತದೆಯೇ ಹೊರತು ಯಾವುದೇ ಕಾರ್ಯ ರೂಪಕ್ಕೆ ಬರುತ್ತಿಲ್ಲಎಂದು ಜನ ದೂರುತ್ತಿದ್ದಾರೆ.

### ಈ ಬಜೆಟ್‌ನಲ್ಲಿ ಜಿಲ್ಲೆಯಾಗಿ ಘೋಷಣೆ..?

ಈ ಬಜೆಟ್‌ನಲ್ಲಿ ಜಿಲ್ಲೆಯಾಗಿ ಘೋಷಣೆ ಎಂದು ಜನರ ನಿರೀಕ್ಷಿಸುತ್ತಿದ್ದಾರೆ. ನವಲಿ ಸಮಾನಾಂತರ ಜಲಾಶಯ ಸಿಂಧನೂರು ಜಿಲ್ಲೆಯನ್ನಾಗಿ ಮಾಡುವ ನಿರೀಕ್ಷೆಯಿದೆ. ಇಂಜಿನೀರಿಂಗ್, ಮೆಡಿಕಲ್, ಪಾಲಿಟೆಕ್ನಿಕ್, ಕಾಲೇಜುಗಳು ಸರ್ಕಾರಿ ಆಸ್ಪತ್ರೆಯ ಡಾಕ್ಟರ್‌ಗಳು. ಸಿಬ್ಬಂದಿ ವರ್ಗ ಹಾಗೂ ಔಷಧಗಳ ಕೊರತೆ, ತಾಲೂಕಿನಲ್ಲಿ ಕೊಂದು ಕೊರತೆಗಳು ಸಮಸ್ಯೆಗಳು ಸೇರಿದಂತೆ ಇತರರು ಯೋಜನೆಗಳು ಸೇರಿದಂತೆ ಅನುದಾನ ಘೋಷಿಸಬೇಕೆಂದು ಜನರು ಬೇಡಿಕೆ ಜನಪ್ರತಿನಿಧಿಗಳು ಸರಕಾರದ ಮೇಲೆ ಒತ್ತಡವಾಗಿದೆ.

**ರಾಜ್ಯ ಸರ್ಕಾರವು ಮೀಸಲಾತಿಯನ್ನು ಸರಿಯಾದ ರೀತಿಯಲ್ಲಿ ಜಾರಿ ಮಾಡದೆ ಗೊಂದಲ ಸೃಷ್ಟಿಸಿದೆ. ಎಸ್‌ಸಿ. ಎಸ್‌ಟಿ ಹಾಗೂ ಹಿಂದುಳಿದ ಸಮುದಾಯಕ್ಕೆ ಅನ್ಯಾಯ ಮಾಡುತ್ತಿದೆ: ಬಿ ಶ್ರೀರಾಮುಲು ಮಾಜಿ ಸಚಿವ**

# ಸಂಭ್ರಮದಿಂದ ಹೋಳಿ ಹಬ್ಬ



• ಮಲ್ಲಮ್ಮ ನುಡಿ ವಾರ್ತೆ ಬೀದರ

ಬುಧುವಾರ ಶಮಶಿರನಗರ ಗ್ರಾಮದಲ್ಲಿ ಪ್ರತಿ ವರ್ಷದಂತೆ ಈ ವರ್ಷ ಕೂಡ ಹೋಳಿ ಹಬ್ಬದವನ್ನು ಸಂಭ್ರಮದಿಂದ ಗ್ರಾಮದ ಯುವಕರು, ಬಣ್ಣದೋಕಳಿಯಲ್ಲಿ ಮಿಂದೆದ್ದರು.ಪುಟಾಣಿ ಮಕ್ಕಳು ಪಿಚಕಾರಿಗಳ ಮೂಲಕ ದಾರಿ ಹೋಕರಿಗೆತಮ್ಮ ಗೆಳೆಯರಿಗೆ ಬಣ್ಣ ಎರಚಿ ಸಂಭ್ರಮಿಸಿದರು. ಬೊಬ್ಬೆ ಮೂಲಕ ಪರಸ್ಪರ ಬಣ್ಣ ಎರುಚಿ ಸಂಭ್ರಮಿಸಿದರು.

ಇದೇ ಸಂದರ್ಭದಲ್ಲಿ ರಾಜಕುಮಾರ್ ಗುನ್ನಳ್ಳಿ, ಸಾಯಿನಾಥ್ ಪಟೇಲ್, ಲಿಂಗರಾಜ್ ಗುನ್ನಳ್ಳಿ, ರಮೇಶ್ ಜಮಾದಾರ್, ಶರಣಯ್ಯ ಸ್ವಾಮಿ, ಬಸವರಾಜ್ ಸ್ವಾಮಿ, ಸಿದ್ದಪ್ಪ ತೋರಣ ,ಸತೀಶ್ ದನ್ಗರ್ ,ಭೀಮ್ ಶೆಟ್ಟಿ ಜಮಾದಾರ್, ಗಿರಿ ಪಾಟೀಲ್ ನಾಗರಾಜ ನೀಲಕಂಠ ಸ್ವಾಮಿ, ಸೇರಿದಂತೆ ಪ್ರಮುಖರು ವಿವಿಧರೀತಿಯ ಬಣ್ಣಗಳನ್ನು ತಮ್ಮ ಮುಖಕ್ಕೆ, ಮೈಮೇಲೆ ಹಚ್ಚಿಕೊಂಡು ಒಬ್ಬರಿಗೊಬ್ಬರು ಗುರುತು ಸಿಗದಂತೆ ಕಂಡು ಬಂತು.



ಬೀದರ ತಾಲೂಕಿನ ಕಂಗನ ಕೋಟ ಗ್ರಾಮದಲ್ಲಿ ವಿವೇಕಾನಂದ ಯುವ ಸಂಘದ ಗೆಳೆಯರ ಬಳಗದಿಂದ ಹೋಳಿ ಹಬ್ಬವನ್ನು ಸಂಭ್ರಮದಿಂದ ಆಚರಣೆ ಮಾಡಲಾಯಿತು, ಈ ಸಂಧರ್ಭದಲ್ಲಿ ಪ್ರಮುಖರಾದ ಅರವಿಂದ, ಸೋಮಣ್ಣ, ಉದಯ ಓತಿ, ಸಚಿನ್ ಮಲಷೆಟ್ಟಿ,ಕೇದಾರನಾಥ ಶಂಭು, ಭದ್ರೇಶ, ಮಹೇಶ, ಸಂತೋಷ ಓತಿ, ಯುವರಾಜ್, ಸಂದೀಪ್ ಸುಮಿತ್ ಸಿದ್ದಲಿಂಗ ತೋರಣೆ ಆನಂದ ಸೇರಿದಂತೆ ಅನೇಕ ಭಾಗವಹಿಸಿದರು.

# ಲಕ್ಷ್ಮಿ ದೇವಿಯ ವಿಗ್ರಹ ಪ್ರಾಣ ಪ್ರತಿಷ್ಠಾಪನೆ



• ಮಲ್ಲಮ್ಮ ನುಡಿ ವಾರ್ತೆ ಬೀದರ

ತಾಲೂಕಿನ ಕಂಗನಕೋಟ ಗ್ರಾಮದಲ್ಲಿ ಗ್ರಾಮ ದೇವತೆ ಶ್ರೀ ಲಕ್ಷ್ಮಿ ದೇವಿಯ ನೂತನ ವಿಗ್ರಹ ಪ್ರಾಣ ಪ್ರತಿಷ್ಠಾಪನಾ ಮಹೋತ್ಸವ ಇದೇ ಮಾರ್ಚ್ 6ರಂದು ನಡೆಯಲಿದೆ. ಮಾರ್ಚ್ 2ರಿಂದಲೇ ಪೂಜಾ ವಿಧಿವಿಧಾನಗಳು ಆರಂಭಗೊಂಡಿದ್ದು, ಐದು ದಿನಗಳವರೆಗೆ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ.

ಮಲ್ಲಿಕಾರ್ಜುನ ಗುರುಜಿಯವರ ತಂಡದ ನೇತೃತ್ವದಲ್ಲಿ ವಿವಿಧ ಪೂಜೆಗಳು ನಡೆಯುತ್ತಿದ್ದು,ನಾಲ್ಕನೇ ದಿನ ಗ್ರಾಮದ ಬೀದಿ ಬೀದಿಗಳಲ್ಲಿ ಶ್ರೀ ಲಕ್ಷ್ಮಿ ದೇವಿಯ ಭವ್ಯ ಮೆರವಣಿಗೆ ನಡೆಯಲಿದೆ. ಐದನೇ ದಿನ ತಿರುಪತಿಯ ಪ್ರಸಿದ್ಧ ಪುರೋಹಿತರಿಂದ ಯಜ್ಞ, ಹೋಮ, ಹವನ ಸೇರಿದಂತೆ ಅನೇಕ ಪೂಜಾ ವಿಧಿವಿಧಾನಗಳೊಂದಿಗೆ ವಿಗ್ರಹ ಪ್ರತಿಷ್ಠಾಪನೆ ನೆರವೇರಿಸಲಾಗುತ್ತದೆ. ನಂತರ ಸನಾತನ ಧರ್ಮದ ಧರ್ಮಧ್ವಜಾರೋಹಣವೂ ನಡೆಯಲಿದೆ.

ವೇದಿಕೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶೈಲೇಂದ್ರ ಕೆ ಬೆಲ್ದಾಳೆ, ಪ.ಪೂ. ಶ್ರೀ ರಾಜೇಶ್ವರ ಶಿವಾಚಾರ್ಯರು (ತಡೋಳಾ) ಹಾಗೂ ಶ್ರೀ ಗಣೇಶಾನಂದ ಮಹಾರಾಜರು ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಲಿದ್ದಾರೆ.

ಈ ಪುಣ್ಯಕಾರ್ಯಕ್ಕೆ ಸಹಕರಿಸಿದ ಮಹಾದಾನಿಗಳನ್ನು ಪರಮಪೂಜ್ಯರಿಂದ ಸನ್ಮಾನಿಸಲಾಗುತ್ತದೆ. ರಾತ್ರಿ 8 ಗಂಟೆಯಿಂದ ಪ್ರಖ್ಯಾತ ಕಲಾವಿದರಿಂದ ಸಂಗೀತ ಕಾರ್ಯಕ್ರಮವೂ ಜರುಗಲಿದೆ.

ಗ್ರಾಮದ ಹಿರಿಯರ ಸಂಕಲ್ಪದಂತೆ ಸಕಲ ವಿಧಿವಿಧಾನಗಳೊಂದಿಗೆ ಈ ಪ್ರತಿಷ್ಠಾಪನೆ ನಡೆಯುತ್ತಿದ್ದು, ಸಕಲ ಗ್ರಾಮಸ್ಥರು ಹಾಗೂ ಭಕ್ತಾದಿಗಳು ಭಾಗವಹಿಸಿ ಶ್ರೀ ಲಕ್ಷ್ಮಿ ದೇವಿಯ ಕೃಪೆಗೆ ಪಾತ್ರರಾಗಬೇಕೆಂದು ಕಾರ್ಯಕ್ರಮದ ನೇತೃತ್ವ ವಹಿಸಿರುವ ಮಲ್ಲಿಕಾರ್ಜುನ ನೀಲಪನೋರ ಮತ್ತು ಬಸವರಾಜ ಭುಳ್ಳಾ (ವಕೀಲರು) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾ9 ರಿಂದ ಶ್ರೀ ಬೀರಲಿಂಗೇಶ್ವರ ದೇವರ ಮೂರ್ತಿ ಪ್ರಾಣ ಪ್ರತಿಷ್ಠಾಪನಾ ಮಹೋತ್ಸವ

ಮಲ್ಲಮ್ಮ ನುಡಿ ವಾರ್ತೆ

ಬೀದರ್ ಮಾ 04: ನಗರದ ಕುಂಬಾರವಾಡಾ ಮುಖ್ಯರಸ್ತೆಯಲ್ಲಿ ನೂತನವಾಗಿ ನಿರ್ಮಿಸಲಾದ ಮಂದಿರದಲ್ಲಿ ಶ್ರೀ ಬೀರಲಿಂಗೇಶ್ವರ ದೇವರ ಮೂರ್ತಿ ಪ್ರಾಣ ಪ್ರತಿಷ್ಠಾಪನೆ, ಕಳಸಾರೋಹಣ ಹಾಗೂ ಸಭಾ ಭವನ ಮತ್ತು ಈರಕಾರ ಭವನಗಳ ಉದ್ಘಾಟನಾ ಸಮಾರಂಭವು ಮಾರ್ಚ್ 6 ರಿಂದ 8 ರವರೆಗೆ ಅತ್ಯಂತ ವೈಭವದಿಂದ ಜರುಗಲಿದೆ.



ಮಾರ್ಚ್ 6 ರಂದು ಶುಕ್ರವಾರ ಬೆಳಿಗ್ಗೆ 7:15 ಕ್ಕೆ ನಗರದ ಮಹಾತ್ಮಾ ಬೊಮ್ಮಗೊಂಡೇಶ್ವರ ವೃತ್ತದಿಂದ ಕುಂಬಾರವಾಡದ ಶ್ರೀ ಬೀರಲಿಂಗೇಶ್ವರ ಮಂದಿರದವರೆಗೆ ಶ್ರೀ ಬೀರಲಿಂಗೇಶ್ವರ, ಶ್ರೀ ಮಾಳಿಂಗರಾಯ ಹಾಗೂ ಮಹಾತ್ಮಾ ಬೊಮ್ಮಗೊಂಡೇಶ್ವರ ಮೂರ್ತಿಗಳ ಭವ್ಯ ಮೆರವಣಿಗೆ ಜರುಗಲಿದೆ. ಮೆರವಣಿಗೆಗೆ ದೇವಸ್ಥಾನ ಟ್ರಸ್ಟ್ ನ ಅಧ್ಯಕ್ಷರು ಚಾಲನೆ ನೀಡುವರು. ದಿವ್ಯ ಸಾನಿಧ್ಯವನ್ನು ಬೀರಲಿಂಗೇಶ್ವರ ಮಠ ಗೌರ ನ ಶ್ರೀ ಬೀರಪ್ಪ ಮುತ್ಯಾ, ಯಲ್ಲಾಲಿಂಗ ಮಠ ಔದತಪುರ ನ ಮಚ್ಚೆಂದ್ರನಾಥ ಮುತ್ಯಾ ಹಾಗೂ ಬೀರಲಿಂಗೇಶ್ವರ ಪಟ್ಟದ ದೇವರು ಮಠ ಉಚ್ಚಾ ದ ಗೋಪಾಲ ಮುತ್ಯಾ ವಹಿಸುವರು. ಮೆರವಣಿಗೆಯಲ್ಲಿ 108 ಜನ ಕುಂಭ ಹೊತ್ತ ಮಹಿಳೆಯರು ಹೆಜ್ಜೆ ಹಾಕಲಿದ್ದಾರೆ ಹಾಗೂ ಡೊಳ್ಳು, ತಮಟೆ ತಂಡಗಳು ಗಮನ ಸೆಳೆಯಲಿವೆ.

ಬೆಳಿಗ್ಗೆ 10:15 ರಿಂದ ಗಣಪತಿ ಪೂಜೆ, ಪುಣ್ಯ ವಾಚನ, ರಕ್ಷಾ ಬಂಧನ, ಸಕಲ ದೇವತಾ ಅವ್ಹಾನ ಪೂಜೆ, ಧಾನ್ಯಾಧಿವಾಸ, ಹವನ, ಮಹಾಮಂಗಳಾರತಿ, ತೀರ್ಥ ಪ್ರಸಾದ ಕಾರ್ಯಕ್ರಮ ನಡೆಯಲಿವೆ. ಮಧ್ಯಾಹ್ನ 1 :15 ಕ್ಕೆ ಮಹಾ ಪ್ರಸಾದ, ಘೃತಮಾರಿ ಮಲ್ಲಮ್ಮ ಸತ್ಸಂಗದಿಂದ ಭಜನೆ 4:15 ಕ್ಕೆ ಪೂಜ್ಯ ಗುರುಗಳಿಂದ ಪ್ರವಚನ ಸಂಜೆ 6 ಗಂಟೆಗೆ ಮಲ್ಲಿಕಾರ್ಜುನ ರಾಂಪುರೆ ಹಾಗೂ ಸಂಗಡಿಗರಿಂದ ಭಜನೆ ಕಾರ್ಯಕ್ರಮ ಹಾಗೂ ನಂತರ ಪ್ರಸಾದ ವಿತರಣೆ ನಡೆಯಲಿದೆ.

ಎರಡನೇ ದಿನವಾದ ಶನಿವಾರ ಮಾರ್ಚ್ 7 ರಂದು ಬೆಳಿಗ್ಗೆ 8:00 ಗಂಟೆಯಿಂದಲೇ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾಗಲಿವೆ. ಅಂದು ಆವಾಹಿತ ದೇವತಾ ಪೂಜೆ, ಜಲಾಧಿವಾಸ, ಹವನ ಮತ್ತು ಸ್ಥಾಪನ ವಿಧಿಗಳು ನೆರವೇರಲಿದ್ದು, ನಂತರ ಮಹಾಮಂಗಳಾರತಿ ಹಾಗೂ ತೀರ್ಥ ಪ್ರಸಾದ ವಿನಿಯೋಗವಿರುತ್ತದೆ. ಮಧ್ಯಾಹ್ನ 1:15ಕ್ಕೆ ಮಹಾಪ್ರಸಾದ ವಿತರಣೆ ನಡೆಯಲಿದ್ದು, ಶಿವಾಜಿನಗರದ ಮಹಿಳಾ ಸತ್ಸಂಗದಿಂದ ಭಜನೆ ಜರುಗಲಿದೆ. ಸಂಜೆ 4:15ಕ್ಕೆ ಪೂಜ್ಯ ಗುರುಗಳಿಂದ ಪ್ರವಚನ ಹಾಗೂ ಸಂಜೆ 6:00 ಗಂಟೆಯಿಂದ ಗುರುದತ್ತ ಧ್ಯಾನ ಮಂದಿರ ಸತ್ಸಂಗ ತಂಡದಿಂದ ಭಜನಾ ಕಾರ್ಯಕ್ರಮದೊಂದಿಗೆ ಎರಡನೇ ದಿನದ ಸಡಗರ ಮುಕ್ತಾಯಗೊಳ್ಳಲಿದೆ.

ಮಾರ್ಚ್ 08 ರಂದು ಪ್ರಾಣ ಪ್ರತಿಷ್ಠಾಪನೆ ಹಾಗೂ ಭವನಗಳ ಉದ್ಘಾಟನೆ : ಮೂರನೇ ದಿನವಾದ ಭಾನುವಾರ ಅತ್ಯಂತ ಪ್ರಮುಖವಾಗಿದ್ದು, ಬೆಳಿಗ್ಗೆ 5:00 ಗಂಟೆಗೆ ಶ್ರೀ ಬೀರಲಿಂಗೇಶ್ವರ, ಶ್ರೀ ಮಾಳಿಂಗರಾಯ ಹಾಗೂ ಮಹಾತ್ಮ ಬೊಮ್ಮಗೊಂಡೇಶ್ವರ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ನೆರವೇರಲಿದೆ. ಬೆಳಿಗ್ಗೆ 8:45ಕ್ಕೆ ಭವ್ಯ ಕಳಸಾರೋಹಣ ಹಾಗೂ ನಂತರ ಪ್ರವಚನ ಕಾರ್ಯಕ್ರಮವಿರುತ್ತದೆ. ಬೆಳಿಗ್ಗೆ 11:15ಕ್ಕೆ ರಾಜ್ಯಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಮಾನ್ಯ ಶ್ರೀ ಹೆಚ್. ಎಂ. ರೇವಣ್ಣ ಅವರಿಂದ ಶ್ರೀ ಬೀರಲಿಂಗೇಶ್ವರ ಮೂರ್ತಿ ಪೂಜೆ, ನೂತನ ಭವನಗಳ ಉದ್ಘಾಟನೆ ಮತ್ತು ಸನ್ಮಾನ ಸಮಾರಂಭ ಜರುಗಲಿದೆ. ಸಂಜೆ 4:00 ಗಂಟೆಯಿಂದ ಮಲ್ಲಿಕಾರ್ಜುನ ರಾಂಪುರೆ ತಂಡದ ಭಜನೆ, ಡೊಳ್ಳು ಕುಣಿತ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಈ ಮೂರು ದಿನಗಳ ಮಹೋತ್ಸವ ಸಂಪನ್ನಗೊಳ್ಳಲಿದೆ.

## ಹುಮನಾಬಾದ ಎಲ್ಲೆಡೆ ಹೋಳಿ ಸಂಭ್ರಮ

# ಮಾಜಿ ಸಚಿವರೊಂದಿಗೆ ಬಣ್ಣಗಳಲ್ಲಿ ಮಿಂದ್ದೆದ್ದ ಯುವಕರು

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ



ಹೋಳಿ ಹಬ್ಬದ ಪ್ರಯುಕ್ತ ನಗರದ ಮಾಜಿ ಸಚಿವರಾದ ರಾಜಶೇಖರ ಪಾಟೀಲ್ ಅವರ ಗೃಹ ಕಛೇರಿಯಲ್ಲಿ ಬುಧವಾರ ಮಾಜಿ ಸಚಿವರಾದ ರಾಜಶೇಖರ ಪಾಟೀಲ್ ಅವರೊಂದಿಗೆ ಯುವಕರು ಪರಸ್ಪರ ಬಣ್ಣ ಎರಚಿ ಬಣ್ಣಗಳಲ್ಲಿ ಮಿಂದ್ದೆದ್ದು ಸಂಭ್ರಮಿಸಿದರು.

ಮಾಜಿ ಸಚಿವರ ಗೃಹ ಕಛೇರಿ ಆವರಣದಲ್ಲಿ ಪರಸ್ಪರ ಬಣ್ಣ ಎರಚಿಕೊಂಡು ಸಂಭ್ರಮಿಸಿದ ಯುವಕರು, ಮಾಜಿ ಸಚಿವರ ಜತೆಗೂಡಿ ತಮಟೆ ವಾದ್ಯಗಳಿಗೆ ಕುಣಿದು ಕುಪ್ಪಳಿಸಿದರು.

## ನಶಾ ಮುಕ್ತ ಭಾರತ ಅಭಿಯಾನ: ವಾಕಥಾನ್‌ಗೆ ಸಚಿವರಿಂದ ಚಾಲನೆ

• ಮಲ್ಲಮ್ಮ ನುಡಿ ವಾರ್ತೆರಾಯಚೂರು

ರಾಯಚುರು ಜಿಲ್ಲಾ ವ್ಯಾಪ್ತಿಯ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕಕ್ಕೆ ಸಂಯೋಜನೆಗೊಳಪಟ್ಟಿರುವ ಕಾಲೇಜುಗಳ ಸಂಘ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ದಿಶಾಭೋದ್ ಫೌಂಢೇಶನ್ ಮತ್ತು ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಚಾಲನೆ ನೀಡುವರು.


ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಪೀಠಾಧಿಪತಿಗಳಾದ ಪರಮಪೂಜ್ಯ 108 ಶ್ರೀ ಸುಬುಧೇಂದ್ರ ತೀರ್ಥರು ಕಾರ್ಯಕ್ರಮದ ಸಾನ್ನಿಧ್ಯ ವಹಿಸುವರು. ಸಣ್ಣನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಹಾಗೂ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಭಾರತ ಸರ್ಕಾರದ ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ ನಿರೀಕ್ಷಕರಾದ ವಿಕಾಸ್ ಸಿಂಗ್, ದಿಶಾಭೋದ್ ಪೌಂಡೇಶನ್ ಡಾ.ಹರ್ಷ ಹರ್ದಾರ್, ಎಸ್.ಪಿ.ಚಿದಾನಂದ್ ಸೇರಿದಂತೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿಕಾರಿಗಳು, ಸಿಬ್ಬಂದಿಗಳ ವರ್ಗ, ಸೆನೆಟ್, ಸಿಂಡಿಕೇಟ್, ಅಕೆಡೆಮಿಕಲ್ ಕೌನ್ಸಿಲ್ ಸದಸ್ಯರು ಹಾಗೂ ರಾಯಚೂರು ಜಿಲ್ಲಾ ವ್ಯಾಪ್ತಿಯ ವಿಶ್ವವಿದ್ಯಾಲಯದ ಸಂಯೋಜನೆಗೊಳಪಟ್ಟಿರುವ ಕಾಲೇಜುಗಳ ಆಡಳಿತ ಮಂಡಳಿ, ಅಧ್ಯಕ್ಷರು, ಪ್ರಾಂಶುಪಾಲರು ಮತ್ತು ಸಿಬ್ಬಂದಿಗಳು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.



ಹಮನಾಬಾದ ಪಟ್ಟಣದಲ್ಲಿ ಹೋಳ್ಳಿಹಬ್ಬದ ಅಂಗವಾಗಿ ಬುಧವಾರ ರಂದು ಬೆಳಿಗ್ಗೆ ಡಾ, ಪಾಪರೆಡ್ಡಿಮಂಡಾರವರಮೊಮ್ಮಕ್ಕಳು ಪರಸ್ಪರವಾಗಿ ಬಣ್ಣ ಎರಚುವ ಮೂಲಕ ಹೋಳಿಹಬ್ಬವನ್ನು ಆಚರಿಸಿದರು. (ಮಲ್ಲಮ್ಮ ನುಡಿ ಚಿತ್ರ)

# ಸಡಗರ ಸಂಭ್ರಮದಿಂದ ಹೋಳಿ ಹಬ್ಬ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ



ತಾಲೂಕಿನಲ್ಲಿ ಹೋಳಿ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು.ಯುವಕರು ಪರಸ್ಪರ ಬಣ್ಣ ಹಚ್ಚಿಕೊಂಡು ಸಂಭ್ರಮಿಸುತ್ತಿರುವುದು ಹಬ್ಬದ ಉತ್ಸಾಹವನ್ನು ಹೆಚ್ಚಿಸುತ್ತದೆ.

ಬೆಳಗ್ಗೆ ಇಂದು ಯುವಕರು ಬಣ್ಣ ಎರಚ್ಚುವ ಆಟಕ್ಕೆ ಚಾಲನೆ ನೀಡಿದರು. ಯುವಕರಿಗೆ ಅಷ್ಟೇ ಸೀಮಿತವಾಗದ ಹೋಳಿ ಹಬ್ಬ ಗಲ್ಲಿ ಗಲ್ಲಿ ಮಹಿಳೆಯರು ಯುವತಿಯರು ಎಲ್ಲರೂ ಪರಸ್ಪರ ಬಣ್ಣ ಹಚ್ಚಿ ಸಂಭ್ರಮಿಸಿದರು.

ಈ ಹೋಳಿ ಕೇವಲ ಬಣ್ಣಗಳಾಟವಲ್ಲ, ಇದು ಕೆಟ್ಟದ್ದರ ಮೇಲೆ ಒಳ್ಳೆಯದರ ವಿಜಯವನ್ನು ಸಾರುವ ಸಾಂಸ್ಕೃತಿಕ ಹಬ್ಬವಾಗಿದೆ.ಜಾತಿ, ಮತ ಎಂಬ ಭೇದವಿಲ್ಲದೆ ಎಲ್ಲರೂ ಒಂದಾಗಿ ಬಣ್ಣ ಎರಚುವ ಮೂಲಕ ಈ ಹಬ್ಬವು ಸಾಮರಸ್ಯ ಮತ್ತು ಸೌಹಾರ್ದತೆಯನ್ನು ಸಾರುತ್ತದೆ.

ಚಳಿಗಾಲ ಮುಗಿದು ವಸಂತ ಋತುವಿನ ಆಗಮನವನ್ನು ಈ ಹಬ್ಬದ ಮೂಲಕ ಬರಮಾಡಿಕೊಳ್ಳಲಾಗುತ್ತದೆ. ಪ್ರಕೃತಿಯಲ್ಲಿ ಹೊಸ ಚೈತನ್ಯ ತುಂಬುವ ಸಮಯವಿದು.



ಕಮಲನಗರ ತಾಲೂಕಿನ ಖೇಡ್ ಗ್ರಾಮದಲ್ಲಿ ಹೋಳಿ ಹಬ್ಬ ನಿಮಿತ್ಯ ಬಣ್ಣ ಬಣ್ಣದ ರಂಗು ಎರಚಿ ಹೋಳಿ ಹಬ್ಬವನ್ನು ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ರಾಮಶೆಟ್ಟಿ ದಾನಾ, ರಾಜಕುಮಾರ್ ದಾನಾ ,ಓಂಕಾರ್ ಮಾನಕಾರ್ ಅಮಿತ್ ಕಾಕನಾಳೆ, ನೀಲಕಂಠ ಹೂಗಾರ್, ಸಂಗಮೇಶ ಮಾನಕಾರ್, ಸಾಗರ ಕಿವಡೆ, ಮಲ್ಲೇಶ್ ಪಾರಾ, ಗುರು ಹೂಗಾರ್, ಅನಿಲ್ ಬಿರಾದಾರ, ರವಿ ಪಾರಾ ,ಸೋಮನಾಥ ಮಾನಕಾರ್, ಅಭಿಷೇಕ ಬಚ್ಚಣ್ಣ ಅನೇಕರು ಉಪಸ್ಥಿತರಿದ್ದರು

## ಸಂಪಾದಕೀಯ



ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349

# ಕೋಳಿಕಾರರ ನೆರವಿಗೆ ಸರ್ಕಾರ ಮುಂದೆ ಬರಲಿ

ರಾಜ್ಯದ ಗ್ರಾಮೀಣ ಆರ್ಥಿಕತೆಯಲ್ಲಿ ಕೋಳಿ ಸಾಕಾಣಿಕೆ ಮಹತ್ವದ ಪಾತ್ರ ವಹಿಸುತ್ತದೆ. ಅನೇಕ ಕುಟುಂಬಗಳು ಕೋಳಿ ಸಾಕಾಣಿಕೆಯನ್ನು ಅವಲಂಬಿಸಿಕೊಂಡು ಜೀವನ ಸಾಗಿಸುತ್ತಿವೆ. ಕಡಿಮೆ ಬಂಡವಾಳದಲ್ಲಿ ಆರಂಭಿಸಬಹುದಾದ ಈ ಉದ್ಯಮವು ರೈತರಿಗೆ ಹಾಗೂ ಗ್ರಾಮೀಣ ಯುವಕರಿಗೆ ಉತ್ತಮ ಆದಾಯದ ಮೂಲವಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಆಹಾರ ಧಾನ್ಯಗಳ ಬೆಲೆ ಏರಿಕೆ, ಔಷಧಿ ಮತ್ತು ಸಾಕಾಣಿಕೆ ವೆಚ್ಚ ಹೆಚ್ಚಳದಿಂದ ಕೋಳಿಕಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಕೋಳಿ ಆಹಾರ, ಔಷಧಿ ಹಾಗೂ ವಿದ್ಯುತ್ ವೆಚ್ಚ ಹೆಚ್ಚಾಗಿರುವುದು ಸಾಕಾಣಿಕೆದಾರರಿಗೆ ಭಾರವಾಗುತ್ತಿದೆ. ಮಾರುಕಟ್ಟೆಯಲ್ಲಿ ಕೋಳಿ ಮತ್ತು ಮೊಟ್ಟೆಯ ಬೆಲೆ ಸ್ಥಿರವಾಗಿಲ್ಲದ ಕಾರಣ ಸಾಕಾಣಿ–ಕೆದಾರರಿಗೆ ನಷ್ಟ ಎದುರಾಗುತ್ತಿದೆ.

ಕೆಲವೊಮ್ಮೆ ರೋಗಬಾಧೆಯಿಂದ ಸಾವಿರಾರು ಕೋಳಿಗಳು ಸಾಯುವ ಪರಿಸ್ಥಿತಿ ಎದುರಾಗುತ್ತದೆ. ಇದರಿಂದ ಸಣ್ಣ ಮತ್ತು ಮಧ್ಯಮ ಮಟ್ಟದ ಸಾಕಾಣಿಕೆದಾರರು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಸರ್ಕಾರ ಕೋಳಿಕಾರರ ನೆರವಿಗೆ ಮುಂದೆ ಬರಬೇಕು. ಕೋಳಿ ಆಹಾರಕ್ಕೆ ಸಹಾಯಧನ ನೀಡುವುದು, ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ ಒದಗಿಸುವುದು, ರೋಗಬಾಧೆ ತಡೆಗಟ್ಟಲು ಪಶುವೈದ್ಯಕೀಯ ಸೇವೆಗಳನ್ನು ಬಲಪಡಿಸುವುದು ಅತ್ಯಂತ ಅಗತ್ಯವಾಗಿದೆ. ಜೊತೆಗೆ ಕೋಳಿ ಮತ್ತು ಮೊಟ್ಟೆಗಳಿಗೆ ನ್ಯಾಯಸಮ್ಮತ ಬೆಲೆ ದೊರಕುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು.

ಗ್ರಾಮೀಣ ಉದ್ಯೋಗ ಸೃಷ್ಟಿಗೆ ಕೋಳಿ ಸಾಕಾಣಿಕೆ ಉತ್ತಮ ಮಾರ್ಗವಾಗಿದೆ. ಆದ್ದರಿಂದ ಈ ಕ್ಷೇತ್ರವನ್ನು ಉತ್ತೇಜಿಸಲು ಸರ್ಕಾರ ವಿಶೇಷ ಯೋಜನೆಗಳನ್ನು ಜಾರಿಗೆ ತರಬೇಕು. ಕೋಳಿಕಾರರ ಸಂಕಷ್ಟಗಳನ್ನು ಅರಿತು ಅವರಿಗೆ ಅಗತ್ಯ ನೆರವು ನೀಡಿದಾಗ ಮಾತ್ರ ಈ ಕ್ಷೇತ್ರ ಮತ್ತಷ್ಟು ಬೆಳವಣಿಗೆ ಕಾಣಲು ಸಾಧ್ಯವಾಗುತ್ತದೆ.

## ಮಹಿಳೆಯರಿಗೆ ಕ್ರೀಡಾಕೂಟ ಆಯೋಜನೆ ಮಾರ್ಚ್ 8ಕ್ಕೆ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬೀದರ ರವರ ಸಹಯೋಗದಲ್ಲಿ ಮಾರ್ಚ.8 ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಾರ್ಚ.8 ರಂದು ಬೆಳಿಗ್ಗೆ 8:30 ಗಂಟೆಯಿಂದ ಜಿಲ್ಲಾ ನೆಹರು ಕ್ರೀಡಾಂಗಣದಲ್ಲಿ ಮಹಿಳೆಯರ ಕ್ರೀಡಾಕೂಟವನ್ನು ಆಯೋಜಿಸಲಾಗಿರುತ್ತದೆ.

18 ರಿಂದ 29 ವರ್ಷದ ಮಹಿಳೆಯರ ಕ್ರೀಡಾ ಸ್ಪರ್ಧೆ: ವಾಲಿಬಾಲ್, ಕಬಡ್ಡಿ, ಹಗ್ಗ ಜಗ್ಗಾಟ, ಲೇಮನ್ ಸ್ಪೂನ್, ಗುಂಡು ಎಸೆತ, 100 ಮತ್ತು 200 ಮೀಟರ್ ಓಟ, ಖೋ ಖೋ.

30 ವರ್ಷ ಮೇಲ್ಪಟ್ಟ ಮಹಿಳೆಯರ ಕ್ರೀಡಾ ಸ್ಪರ್ಧೆ: ಥ್ರೋ ಬಾಲ್, ಹಗ್ಗ ಜಗ್ಗಾಟ, ಮ್ಯೂಜಿಕಲ್ ಚೇರ್, ಶಟಲ್ ಬ್ಯಾಡ್ಮಿಂಟನ್ ಸಿಂಗಲ್, ಚಕ್ರ ಎಸೆತ, 100 ಮತ್ತು 200 ಮೀಟರ್ ಓಟ.

ಕ್ರೀಡಾಕೂಟದಲ್ಲಿ ಭಾಗವಹಿಸುವ ಎಲ್ಲಾ ಮಹಿಳೆಯರಿಗೆ ಪ್ರಮಾಣ ಪತ್ರ ಹಾಗೂ ವಿಜೇತರಿಗೆ ಟ್ರೋಫಿ ಮತ್ತು ಮೆಡಲ್ ವಿತರಿಸಲಾಗುವುದು. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿ ಕ್ರೀಡಾಕೂಟವನ್ನು ಯಶಸ್ವಿಗೊಳಿಸುವಂತೆ ಬೀದರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪುರುಷೋತ್ತಮ ಬಿಳಿಮಲೆ ಬೀದರ್ ಜಿಲ್ಲಾ ಪ್ರವಾಸ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಬೆಂಗಳೂರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಅವರು ಮಾರ್ಚ.6 ರಿಂದ 8 ರವರೆಗೆ ಬೀದರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುತ್ತಾರೆ.

ಮಾರ್ಚ.6 ರಂದು ಬೆಳಿಗ್ಗೆ 5 ಗಂಟೆಗೆ ಬೆಂಗಳೂರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಸ್ಟಾರ್ ಏರ್ ಎಸ್5–159

ವಿಮಾನದ ಮೂಲಕ ಹೊರಟು ಬೆಳಿಗ್ಗೆ 7.35 ಗಂಟೆಗೆ ಬೀದರ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ಬೆಳಿಗ್ಗೆ 11.30ಕ್ಕೆ ಸರ್ಕಾರಿ ಅತಿಥಿ ಗೃಹದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಬೀದರ ಜಿಲ್ಲಾ ಜಾಗೃತಿ ಸಮಿತಿ ಸದಸ್ಯರೊಂದಿಗೆ ಚರ್ಚೆ ನಂತರ ವಾಸ್ತವ್ಯ ಮಾಡಲಿದ್ದಾರೆ.

ಮಾರ್ಚ್.7 ರಂದು ರಸ್ತೆ ಮೂಲಕ ಡಿ.ವಿ.ವಾಹನದಲ್ಲಿ ಕಮಲಾಪುರ ಮಾರ್ಗವಾಗಿ ಕಲಬುರಗಿಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಜೆ 5.30ಕ್ಕೆ ಬೀದರಗೆ ಆಗಮಿಸಿ ಸಕಾರಿ ಅತಿಥಿ ಗೃಹದಲ್ಲಿ ವಾಸ್ತವ್ಯ ಮಾಡಲಿದ್ದಾರೆ.

ಮಾರ್ಚ.8 ರಂದು ಬೆಳಿಗ್ಗೆ 7 ಗಂಟೆಗೆ ಬೀದರ ವಿಮಾನ ನಿಲ್ದಾಣದಿಂದ ಸ್ಟಾರ್ ಏರ್ ಎಸ್5–160 ವಿಮಾನದ ಮೂಲಕ ಹೊರಟು ಬೆಂಗಳೂರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿ

ನಂತರ ರಸ್ತೆ ಮೂಲಕ ಕೇಂದ್ರ ಸ್ಥಾನಕ್ಕೆ ತೆರಳಲಿದ್ದಾರೆಂದು ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಗದ್ಗುರು ಶ್ರೀ ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಕಾರ್ಯಕ್ರಮ



- **ಮಲ್ಲಮ್ಮ ನುಡಿ ವಾರ್ತೆ ಬೀದರ**

ಬೀದರ್ ತಾಲೂಕಿನ ಶಮಶಿರನಗರ ನಂದಿ ಬಸವೇಶ್ವರ ದೇವಸ್ಥಾನದಲ್ಲಿ ಶ್ರೀ ರೇವಣಸಿದ್ಧೇಶ್ವರ ಕಲಾ ಸಾಂಸ್ಕೃತಿಕ ಸೇವಾ ಸಂಘದ ಬಾವಗಿ ವತಿಯಿಂದ ಜಗದ್ಗುರು ಶ್ರೀ ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವದ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಆಚರಿಸಲಾಯಿತು ,

ಜಗದ್ಗುರು ರೇಣುಕಾಚಾರ್ಯರು ವಿರಶೈವ ಧರ್ಮ ಸ್ಥಾಪಕರಷ್ಟೆ ಅಲ ಜಗತ್ತಿನ ಮೋಟ್ಟ ಮೊದಲು ಸಾಮಾಜಿಕ ಹರಿಕಾರರು ,

ಮಾನವನನ್ನುಮಹಾದೇವನನ್ನಾಗಿಸಿದ, ಗುರುವಿನ ಗುರು, ಮಹಾಗುರು, ಪರಮಗುರು, ಆದಿ ಜಗದ್ಗುರು ರೇವಣಸಿದ್ಧೇಶ್ವರವರು ಎಂದು ಅಧ್ಯಕ್ಷರಾದ ಶ್ರೀ ಶಾಂತಕುಮಾರ್ ಸ್ವಾಮಿ ನುಡಿದರು,

ಶ್ರೀ ರೇಣುಕಾಚಾರ್ಯರು ತಮ್ಮ ದಿವ್ಯ ಉಪದೇಶಗಳ ಮೂಲಕ ವಿಶ್ವಬಂಧುತ್ವ,ಪ್ರೀತಿ,ಪರೋಪಕಾರ ಹಾಗೂ ಮಾನವೀಯತೆಯ ಮಹಾ ಮೌಲ್ಯಗಳನ್ನು ಸಾರಿದರು

ಶ್ರೀರೇಣುಕಾಚಾರ್ಯರುಬೋಧಿಸಿದ ಧರ್ಮದ ಹಾದಿಯನ್ನುಅನುಸರಿಸಿ, ನಾವು ಸಹಾನುಭೂತಿ, ಸಹಕಾರ ಹಾಗೂ ಸೇವಾ ಮನೋಭಾವದ ಮೂಲಕ ಮಾನವೀಯತೆಯನ್ನುಎತ್ತಿ ಹಿಡಿಯೋಣ ಎಂದು ಮುಖಂಡರಾದ ಶಿವರಾಜ್ ಪಾಟೀಲ್ ಹೇಳಿದರು,

ಈ ಸಂಧರ್ಭದಲ್ಲಿ ಚನಮಲಯ್ಯ ಸ್ವಾಮಿ ವಿರಶೆಟ್ಟಿಪಾಟಿಲ್ ವಿಶ್ವನಾಥಯ್ಯ ಸ್ವಾಮಿ ಶರಣಯ್ಯ ಸ್ವಾಮಿ ನಾಗೇಶ ಭುಳ್ಳಸೊಮನಾಥ್ಮ್ಯಲುರ ದೊಳಪ್ಪ ತೊರಣ ರಾಜಕುಮಾರ್ ಗುನಳೀ ರಾಜಕುಮಾರ್ ಸುತಾರ ಸುಭಾಷ್ ಕೋಳ್ಳಿ ಮಲಪ್ಪ ದನಗರ ಭೀಮಶೆಟ್ಟಿ ಸೇರಿ ಅನೇಕರು ಹಾಜರಿದ್ದರು

# ದೇವಿಯರಿಗೆ ಕೋಸಂಬರಿ ಪ್ರಸಾದ ಸಮರ್ಪಣೆ



- **ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ**

ಪಟ್ಟಣದ ಪ್ರಮುಖ ಗ್ರಾಮಗಳಲ್ಲಿ ಮೂರು ವರ್ಷಕ್ಕೊಮ್ಮೆ ಜರಗುವ ಗ್ರಾಮದೇವಿಯರ ಜಾತ್ರೆಯಲ್ಲಿ ಭಕ್ತರಿಂದ ಕೋಸಂಬರಿ ಪ್ರಸಾದ ವಿತರಿಸಲಾಯಿತು.

ಇ ಸಂಧರ್ಬದಲ್ಲಿ ಮಾತನಾಡಿದ ಸಂಗ್ರಾಮಸೇನೆಯ ತಾಲೂಕಾ ಘಟಕದ ಅಧ್ಯಕ್ಷ ಸಾತಪ್ಪ ಕುಂಕೂರ ಸ್ಕಂದ ಪುರಾಣದಲ್ಲಿ ಶಕ್ತಿ ದೇವಿಯರು ಉಗ್ರ ರೂಪ ತಾಳಿದಾಗ ಅವರನ್ನು ಶಾಂತಗೊಳಿಸಲು ಕೋಸಂಬರಿ ಪಾನಕ ನೈವಿದ್ಯ ಸಮರ್ಪಣೆ ಮಾಡುವುದರ ಮೂಲಕ ಸಂತೈಸಲಾಯಿತು ಎನ್ನುವ ಭಗ್ಗೆ ಉಲ್ಲೇಖವಿದೆ ಇದರಿಂದ ಸುಮಂಗಲಿಯರಿಗೆ ಗಂಡನ ಆರೋಗ್ಯ ಐಯ್ವರ್ಯ ಹೆಚ್ಚಾಗುವದು ಎನ್ನುವುದು ಬಲವಾದ ನಂಬಿಕೆ ಇದೆ ಮತ್ತು ಇದರಲ್ಲಿ ಆಯರ್ವೆದದ ಔಷದಕೂಡ ಇದೆ ಆದ್ದರಿಂದ ಚೈತ್ರ ಮಾಸದಲ್ಲಿ ಹೆಚ್ಚಾಗಿ ಕೋಸಂಬರಿ ಪಾನಕ ಬಳಕೆ ಮಾಡಲಾಗುತ್ತದೆ ಎಂದರು.

ಸಚಿವರ ಆಪ್ತಕಾರ್ಯಧರ್ಶಿ ಹರಿಶಂಕರಮಠದ ಮಾತನಾಡಿ ಯುವಕರು ಜಾತ್ರೆಯಲ್ಲಿ ಇ ರೀತಿಯ ಕಾರ್ಯಗಳನ್ನುಕೈಗೊಂಡಿರುವುದು ಶ್ಲಾಘನೀಯವಾಗಿದೆ ಎಂದರು.

ಇ ಸಂಧರ್ಬದಲ್ಲಿ ಗ್ಯಾರಂಟಿ ಯೋಜನೆಯ ಜಿಲ್ಲಾದ್ಯಕ್ಷ ಎಸ.ಆರ್ ಪಾಟೀಲ, ಜಾತ್ರಾ ಕಮಿಟಿ ಅಧ್ಯಕ್ಷ ಸುಧೀರ ಬೋಳಾರ,ಸಾಯಿನಾಥ ಂಖು ಲ್ಲಾ ಪೂ ರ ಕ ರ , ಬಾ ಳು ಖಾನಾಪೂರ,ರಾಕೇಶಅಳಗವಾಡಿ,ಬಾಬು ಅಂಚಟಗೇರಿ,ಕುಮಾರಖಂಡೆಕರ,ಸಂಗ್ರಾಮ ಸೇನೆ ಉಪಾದ್ಯಕ್ಷ ಮಹಾಂತೇಶ ಹುಲ್ಲಂಬಿ,ಹನುಮಂತಪಾಚಂಗೆ,ಹನಮಂತ ಹರಿಜನ,ಮಹಾಂತೇಶತಹಶಿಲ್ದಾರ,ಸುಭಾಸ ಕಂಪಲಿಕೊಪ್ಪ,ಯಲ್ಲಪ್ಪ ಕಂಪ್ಲಿಕೊಪ್ಪ ಸುರೇಶ ದೇವಿಕೊಪ್ಪ,ಮಂಜುನಾಥ ದೇವಿಕೊಪ್ಪ,ಮಹಾಜನಬಿರಾಮಾಪೂರ, ಮಾರುತಿ ಸಾಲಿ,ಬಸವರಾಜ ಬೇಗೂರ ಶೆಟ್ಟರ, ಸುಮಂಗಲಾ ಬೇಗೂರ ಶೇಟ್ಟರ, ಉಮೇಶ ಜೋಶಿ, ವರ್ಷಾ ಜೋಶಿ.ಇದ್ದರು.

# ನೋಂದಣಿಗೆ ಸೂಚನೆ

ರಾಯಚೂರು ವಿಕಲಚೇತನರಿಗೆ ಸಂಬಂಧಪಟ್ಟ ಚಟುವಟಿಕೆಗಳು/ ಕೇಂದ್ರಗಳಾದ ವಿಶೇಷ ಶಾಲೆಗಳು, ಫಿಜಿಯೋ ಥೆರಪಿ ಕೇಂದ್ರಗಳು, ತರಬೇತಿ ಕೇಂದ್ರಗಳು, ವಸತಿ ನಿಲಯಗಳು ಸೇರಿದಂತೆ ಇನ್ನಿತರ ಕೇಂದ್ರಗಳನ್ನು ನಡೆಸುತ್ತಿರುವ ಸಂಸ್ಥೆಗಳು ವಿಕಲಚೇತನರ ಹಕ್ಕುಗಳ ಅಧಿನಿಯಮ ಕಾಯ್ದೆ 2016ರಡಿ ಕಡ್ಡಾಯವಾಗಿ ಸೇವಾ ಸಿಂಧು ಆನ್‌ಲೈನ್ ತಂತ್ರಾಂಶದಲ್ಲಿ ನೋಂದಣಿ ಮಾಡಿಕೊಳ್ಳಬೇಕೆಂದು ಕೋರಲಾಗಿದೆ.

ಹಿರಿಯ ನಾಗರಿಕರಿಗೆ ಸಂಬಂಧಪಟ್ಟ ಚಟುವಟಿಕೆಗಳು/ ಕೇಂದ್ರಗಳನ್ನು ನಡೆಸುತ್ತಿರುವ ಸಂಸ್ಥೆಗಳು ಹಿರಿಯ ನಾಗರಿಕರ ಸಂರಕ್ಷಣಾ ಕಾಯ್ದೆ 2007ರಡಿ ಕಡ್ಡಾಯವಾಗಿ ಸೇವಾ ಸಿಂಧು ಆನ್‌ಲೈನ್ ತಂತ್ರಾಂಶದಲ್ಲಿ ನೋಂದಣಿ ಮಾಡಿಕೊಳ್ಳತಕ್ಕದ್ದು. ಈ ಕಾಯ್ದೆಗಳನ್ವಯ ನೋಂದಣಿ ಮಾಡಿಸಿಕೊಳ್ಳದೇ ಇದ್ದಲ್ಲಿ ಅಂತಹ ಸಂಸ್ಥೆಗಳ ಮೇಲೆ ನಿಯಮಾನುಸಾರ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು.

# ಕಾನೂನು ಕ್ರಮ ಜರುಗಿಸುವಂತೆ ಸಹಾಯಕ ನಿಬಂಧಕರಿಂದ ಪ್ರಸ್ತಾವನೆ

- **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಜಿಲ್ಲೆಯ ಹುನಗುಂದ, ಇಲಕಲ್ಲ ಹಾಗೂ ಮುಧೋಳ ತಾಲೂಕಿನ ಹಾಲು ಉತ್ಪಾದಕರ ಸಹಕಾರ ಸಂಘಗಳು ಉಪನಿಯಮದನುಸಾರ ನಿಯಮಿತವಾಗಿ ಉದ್ದೇಶಿತ ಕಾರ್ಯ ನಿರ್ವಹಿಸದೇ ಸ್ಥಗಿತಗೊಂಡಿರುತ್ತವೆ. ಆಡಳಿತ ಮಂಡಳಿಗೆ ಚುನಾವಣೆ, ವಾರ್ಷಿಕ ಮಹಾಸಭೆ ಹಾಗೂ ಲೆಕ್ಕಪಶೋಧನೆ ಮಾಡಿಸಿರುವದಿಲ್ಲ. ಈ ಹಿನ್ನಲೆಯಲ್ಲಿ ರಾಜ್ಯ ಸಹಕಾರ ಸಂಘಗಳ ಕಾಯ್ದೆ 1959, ಕಲಂ 72(2)ರ ಪ್ರಕಾರ ಕಾನೂನು ಕ್ರಮ ಜರುಗಿಸುವಂತೆ ಸಹಾಯಕ ನಿಬಂಧಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆ ಪರಿಶೀಲಿಸಲಾಗಿ ಸಹಕಾರ ಸಂಘಗಳು ಉದ್ದೇಶಿತ ಕಾರ್ಯನಿರ್ವಹಿಸದೇ ಸ್ಥಗಿತಗೊಂಡಿರುವದರಿಂದ ಸದರಿ ಸಹಕಾರಿ ಸಂಘಗಳನ್ನು ಸಮಾಪನೆಗೊಳಿಸುವ ಕುರಿತಂತೆ ಏನಾದರೂ ತಕರಾರುಗಳಿದ್ದಲ್ಲಿ ಅಥವಾ ಸಂಘದ ವ್ಯವಹಾರಗಳನ್ನು ಉಪನಿಯಮದ ಮೇರೆಗೆ ಮುಂದುವರಿಸಿಕೊಂಡು ಹೋಗುವ ಬಗ್ಗೆ ತಮ್ಮ ಅಭಿಪ್ರಾಯವನ್ನು ನೋಟಿಸ್ ಪ್ರಕಟಣೆ ದಿನಾಂಕದಿಂದ 7 ದಿನಗಳ ಒಳಗಾಗಿ ಲಿಖಿತ ಹೇಳಿಕೆಯನ್ನು ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ, ಜಿಲ್ಲಾ ಆಡಳಿತ ಭವನ, ಕೊಠಡಿ ಸಂ.138, ನವನಗರ, ಬಾಗಲಕೋಟೆ ಇವರಿಗೆ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

ಹಾಲು ಉತ್ಪಾದಕರ ಸಹಕಾರ ಸಂಘಗಳ ವಿವರ ಇಂತಿದೆ. ಹಾಲು ಉತ್ಪಾದಕರ ಸಹಕಾರ ಸಂಘ, ಸೂಳೇಭಾವಿ, ಕೃಷ್ಣಾಪೂರ, ಬೊಮ್ಮನಗಿ, ನಾಗರಾಳ, ಶಿರೂರ, ಇಂಗಳಗಿ, ಕೌಜಗನೂರ, ಓಂಕಾರ ವಿವಿದೋದ್ದೇಶಗಳ ಸಹಕಾರ ಸಂಘ, ಮುಗಳಖೋಡ, ಗಂಗಾಪರಮೇಶ್ವರಿ ವಿವಿದೋದ್ದೇಶಗಳ ಸಹಕಾರ ಸಂಘ ಮುಧೋಳ ಹಾಗೂ ಭಾರತ ವಿವಿದೋದ್ದೇಶಗಳ ಸಹಕಾರ ಸಂಘ ಮುಧೋಳ.

# 11 ಕ್ಕೆ ಜನಸಂಪರ್ಕ ಸಭೆ

- **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಮಾರ್ಚ 11 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30 ವರೆಗೆ ಬಾಗಲಕೋಟೆ ತಾಲೂಕಾ ಪಂಚಾಯತ ಕಾರ್ಯಾಲಯದಲ್ಲಿ ಜನಸಂಪರ್ಕ ಸಭೆಯನ್ನು ಆಯೋಜಿಸಿದ್ದಾರೆ.

ಸಾರ್ವಜನಿಕರಿಗೆ ಸರಕಾರಿ ಕಚೇರಿಗಳಲ್ಲಿ ಅಧಿಕೃತ ಕೆಲಸಗಳನ್ನು ಮಾಡಿಕೊಡುವಲ್ಲಿ ವಿನಾಕಾರಣ ವಿಳಂಬ ಹಾಗೂ ಇನ್ನಿತರ ತೊಂದರೆ ಆಗಿದ್ದರೆ ಅಂತಹ ಅಧಿಕಾರಿ ಮತ್ತು ನೌಕರರ ವಿರುದ್ದ ಸಾರ್ವಜನಿಕರು ಸಭೆಗೆ ಹಾಜರಾಗಿ ತಮ್ಮ ಲಿಖಿತ ದೂರುಗಳನ್ನು ಸಲ್ಲಿಸಿದಲ್ಲಿ ಸ್ಥಳದಲ್ಲಿ ಪರಿಹಾರ ಕಂಡುಕೊಳ್ಳಬಹುದಾದ ದೂರುಗಳನ್ನು ಸ್ಥಳೀಯ ಅಧಿಕಾರಿಗಳ ಸಹಕಾರದೊಂದಿಗೆ ಇತ್ಯರ್ಥಪಡಿಸಲಾಗುತ್ತದೆ. ಇತ್ಯರ್ಥವಾಗದೇ ಇದ್ದಲ್ಲಿ ಅಂತ ದೂರುಗಳನ್ನು ನಮೂನೆ ನಂ.1 ಮತ್ತು 2ರಲ್ಲಿ ಸ್ವೀಕರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಪೊಲೀಸ್ ಅಧೀಕ್ಷಕರು (9364062510), ಪೊಲೀಸ್ ಉಪಾದೀಕ್ಷಕರು (9364062558), ಪೊಲೀಸ್ ನಿರೀಕ್ಷಕರು–1 (9364062641), ಪೊಲೀಸ್ ನಿರೀಕ್ಷಕರು–2 (936406242), ಪೊಲೀಸ್ ನಿರೀಕ್ಷಕರು–3 (9364062643) ಮತ್ತು ಬಾಗಲಕೋಟೆ ಲೋಕಾಯುಕ್ತ ಕಚೇರಿ ದೂಸಂ.08354–236200, 295170ಗೆ ಸಂಪರ್ಕಿಸುವಂತೆ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರತಿ ಐದು ವರ್ಷಕ್ಕೊಮ್ಮೆ ಜರಗುವ ಮಿಶ್ರಿಕೋಟಿ ಗ್ರಾಮದೇವಿಯರ ಜಾತ್ರೆ



ಮಿಶ್ರೀಕೊಟಿ ಗ್ರಾಮದೇವಿಯರ ಜಾತ್ರೆಯಲ್ಲಿ ಮೆರವಣಿಗೆಯಲ್ಲಿ ಪಾಲ್ಗೊಂಡ ಭಕ್ತರ ಸಮೋಹ

- **ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ**

ತಾಲೂಕಿನ ಮಿಶ್ರಿಕೋಟಿ ಗ್ರಾಮದಲ್ಲಿ ಪ್ರತಿ ಐದು ವರ್ಷಕ್ಕೊಮ್ಮೆ ಜರಗುವ 9 ದಿನ ನಡೆಯುವ ಶ್ರೀ ಗ್ರಾಮದೇವಿಯರ ಜಾತ್ರೆ ಪ್ರಾರಂಬಗೊಂಡಿತು

ಗ್ರಾಮದ ಹೊಸ ಬಸ್ ನಿಲ್ದಾಣ ಪಕ್ಕದ ಚೌತಮನೆ ಕಟ್ಟೆಯಲ್ಲಿ, ದೇವಿಯರನ್ನು ಕಿಲ್ಲೆ ಓಣಿ ಗ್ರಾಮದೇವಿ ದೇವಸ್ಥಾನದಿಂದ ಭವ್ಯ ಮೆರವಣಿಗೆ ಭಂಡಾರ (ಹೋನ್ನಾಟ) ಸಹಿತ ಡೊಳ್ಳು ಕುಣಿತ, ಕರಡಿ ಮಜಲು, ಜಗ್ಗಲಗಿ, ಜಾಂಜು, ಮಕ್ಕಳು ಹಾಗೂ ಮಹಿಳೆಯರಿಂದ ಕೋಲಾಟ ಮೂಲಕ ತಂದು ಪ್ರತಿಷ್ಠಾಪಿಸಲಾಯಿತು.

ಮೆರವಗೆಣಿಯಲ್ಲಿ ಐದು ವರ್ಷಕೊಮ್ಮೆ ಜರುಗುವ

ಜಾತ್ರೆ 1/03/2026ರಿಂದ 9/03/2026ರವರೆಗೆ ಅದೂರಿಯಾಗಿ ಜರಗಲಿದ್ದು ಹಿಂದಿನ ಪದ್ಧತಿಯಂತೆ ದೇವಿಯರಿಗೆ ಭಕ್ತಿಯಿಂದ ಜಾತ್ರಾ ಪದ್ದತಿಗಳನ್ನು ನೆರವೇರಿಸಿಲಾಗುವುದು ಎಂದು ಜಾತ್ರಾಕಮಿಟಿ ಅಧ್ಯಕ್ಷರು ತಿಳಿಸಿದರು.

ಗ್ರಾಮದೇವಿಯರಮೂರ್ತಿಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಪ್ರಮುಖ ಗ್ರಾಮದ ಗುರು ಹಿರಿಯರು ಸುತ್ತಮುತ್ತಲಿನ ಗ್ರಾಮಸ್ಥರು ಭಾಗಿಯಾಗಿದ್ದರು 9 ದಿನ ಮಹಾ ಪ್ರಸಾದ ಸೇವೆ ಇದೆ ಎಂದು ಜಾತ್ರಾ ಉತ್ಸವ ಸಮಿತಿಯವರು ತಿಳಸಿದರು.

# ಜೆ ಎಸ್ ಡಬ್ಲ್ಯೂ ದೃಷ್ಟಿ ಯೋಜನೆಯಿಂದ 250 ಜನರಿಗೆ ಉಚಿತ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ




- **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ತಾಲೂಕಿನ ತೋರಣಗಲ್ಲು ಜಿಂದಾಲ್ ಸಂಜೀವನಿ ಆಸ್ಪತ್ರೆಮತ್ತು ಜೆ ಎಸ್ ಡಬ್ಲ್ಯೂ ಫೌಂಡೇಶನ್ ಸಹಯೋಗದ ದೃಷ್ಟಿಯೋಜನೆಯಡಿ ಈ ಹಣಕಾಸು ವರ್ಷದಲ್ಲಿ ಒಟ್ಟು 250 ಜನರಿಗೆ ಉಚಿತ ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆ ನೆರವೇರಿಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಹಾಗೂ ದೃಷ್ಟಿ ತಪಾಸಣಾ ಶಿಬಿರಗಳನ್ನು ಆಯೋಜಿಸಿ ಶಿಫಾರಸ್ಸು ಕಾರ್ಡ್ ಪಡೆದ ರೋಗಿಗಳಿಗೆ ಆಸ್ಪತ್ರೆಯಲ್ಲಿ ಆಹಾರ, ವಸತಿ ಸೇರಿದಂತೆ ಎಲ್ಲಾ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಲಾಯಿತು.

ಕಣ್ಣಿನ ಪೊರೆ ಚಿಕಿತ್ಸೆಗೆ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಎಬಿ ಸ್ಕ್ಯಾನ್ (ಂಃ ಖಛಿಚಿಟ) ತಂತ್ರಜ್ಞಾನವನ್ನು ಬಳಸಲಾಗುತ್ತಿದ್ದು, ಇದು ಶೇಕಡಾ 100% ರಷ್ಟು ನಿಖರ ಫಲಿತಾಂಶಗಳನ್ನು ನೀಡುತ್ತದೆ. ಚಿಕಿತ್ಸೆ ಪಡೆದ ಎಲ್ಲಾ ರೋಗಿಗಳು ಬಡತನ ರೇಖೆಗಿಂತ ಕೆಳಗಿನ (ಬಿಪಿಎಲ್) ಕುಟುಂಬಗಳಿಗೆ ಸೇರಿದವರಾಗಿದ್ದು, ಚಿಕಿತ್ಸೆಯ ಸಂಪೂರ್ಣ ವೆಚ್ಚವನ್ನು ಜೆ ಎಸ್ ಡಬ್ಲ್ಯೂ ಫೌಂಡೇಶನ್ ಭರಿಸಿದೆ.

ಎಲ್ಲಾ ಶಸ್ತ್ರಚಿಕಿತ್ಸೆಗಳನ್ನು ನೇತ್ರತಜ್ಞ ಡಾಕ್ಟರ್ ಭರತ್ ವಾರಕನಹಳ್ಳಿ ಮತ್ತು ತಂಡ ನೆರವೇರಿಸಿದ್ದು ಚಿಕಿತ್ಸೆ ಪಡೆದ ಕಂದಕೂರು ಗ್ರಾಮದ ಪವಾಡೆಪ್ಪ ಮತ್ತು ಈರಮ್ಮ ಹಾಗು ಇತರರು ಸಂತಸ ವ್ಯಕ್ತಪಡಿಸಿ "ನಾವು ದಿನಗೂಲಿ ಮಾಡಿ ಜೀವನ ನಡೆಸುತ್ತಿದ್ದು, ಹಣದ ಕೊರತೆಯಿಂದ ಕಣ್ಣಿನ ಪೊರೆ ಚಿಕಿತ್ಸೆ ಮಾಡಿಸಲಾಗಲಿಲ್ಲ, ಜೆ ಎಸ್ ಡಬ್ಲ್ಯೂ ನಮಗೆ ಉಚಿತವಾಗಿ ಚಿಕಿತ್ಸೆ ಒದಗಿಸಿದ್ದು ಆದಷ್ಟು ಬೇಗ ಚೇತರಿಸಿಕೊಂಡು ಮತ್ತೆ ಕೆಲಸಕ್ಕೆ ಹೋಗುವ ಸಂತಸ ಮತ್ತು ಕೃತಜ್ಞತೆಯನ್ನು ವ್ಯಕಪಡಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ಜನರಿಗೆ ದೃಷ್ಟಿ ಮರುಕಳಿಸಿ ಅವರ ಜೀವನಮಟ್ಟವನ್ನು ಉತ್ತಮಗೊಳಿಸಲು ಜಿಂದಾಲ್ ಸಂಜೀವಿನಿ ಆಸ್ಪತ್ರೆ ಹಾಗೂ ಜೆ ಎಸ್ ಡಬ್ಲ್ಯೂ ಕಾರ್ಯವು ಸಾರ್ವಜನಿಕರಿಂದ ಮೆಚ್ಚುಗೆ ಪಡೆದಿದೆ. ಸಮಾರೋಪ ಸಮಾರಂಭದಲ್ಲಿ ವೈದ್ಯಕೀಯ ಸೇವೆಗಳ ಮುಖ್ಯಸ್ಥ ಡಾ. ಸನ್ನಿ ಈಯಪ್ಪನ್, ಜೆ ಎಸ್ ಡಬ್ಲ್ಯೂ ಫೌಂಡೇಶನ್ ದಕ್ಷಿಣ ವಲಯ ಮುಖ್ಯಸ್ಥ ಪೆದ್ದಣ್ಣ ಬೀಡಲಾ, ಆಸ್ಪತ್ರೆ ಸೌಕರ್ಯಗಳ ನಿರ್ದೇಶಕ ಮಂಜುನಾಥ್, ರಾಘವೇಂದ್ರ, ಶಿಲ್ಪಾ ಮುತ್ತು ಕೃಷ್ಣ ಹಾಗೂ ತಂಡದ ಸದಸ್ಯರು ಇದ್ದರು

# ಮಸ್ಕಿ : ಹಳೆಯ ನಿಲ್ದಾಣದಲ್ಲಿ ಬಸ್‌ಗಳ ನಿಲುಗಡೆಗೆ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ ಮಸ್ಕಿ

ಪಟ್ಟಣದ ಹಳೆಯ ಬಸ್ ನಿಲ್ದಾಣದಲ್ಲಿ ಮೊದಲಿನಂತೆ ಸಾರಿಗೆ ಬಸ್ ನಿಲುಗಡೆ ಮಾಡಬೇಕು ಎಂದು ಆಗ್ರಹಿಸಿ ಸ್ಥಳೀಯ ವ್ಯಾಪಾರಿಗಳು ಹಾಗೂ ಸಾರ್ವಜನಿಕರು ಶಾಸಕ ಆರ್.ಬಸನಗೌಡ ತುರುವಿಹಾಳ ಅವರಿಗೆ ಮನವಿ ಸಲ್ಲಿಸಿ ಆಗ್ರಹಿಸಿದರು.

ಪುರಸಭೆ ಸದಸ್ಯ ಮಂಜುನಾಥ್ ನಂದಿಹಾಳ ಮಾತನಾಡಿ, ಹಳೆಯ ನಿಲ್ದಾಣದಲ್ಲಿ ಹಲವಾರು ದಶಕಗಳಿಂದ ಬಸ್‌ಗಳನ್ನು ನಿಲ್ಲಿಸಲಾಗುತ್ತಿತ್ತು. ಮಸ್ಕಿಯ ಹಳೆ ಬಸ್ ನಿಲ್ದಾಣಕ್ಕೆ 200 ವರ್ಷಗಳ ಇತಿಹಾಸವಿದೆ. ಇದೀಗ ಏಕಾಏಕಿ ಅಶೋಕ ವೃತ್ತಕ್ಕೆ ಬಸ್ ನಿಲ್ದಾಣ ಸ್ಥಳಾಂತರ ಮಾಡಲಾಗಿದೆ. ಇದರಿಂದ ಶಾಲಾ ಮಕ್ಕಳಿಗೆ, ಮಹಿಳೆಯರಿಗೆ, ವಯೋವೃದ್ಧರಿಗೆ ತೊಂದರೆಯಾಗುತ್ತಿದೆ.

ಈ ಸಮಸ್ಯೆ ಸಂಬಂಧಿಸಿದಂತೆ ತಾಲ್ಲೂಕು ಆಡಳಿತ ಹಾಗೂ ಸಾರಿಗೆ ಅಧಿ ಕಾರಿಗಳು ಕೂಡಲೇ ಹಳೆಯ ಬಸ್ ನಿಲ್ದಾಣದಲ್ಲಿ ಬಸ್ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ಪುನಃ ಹಳೆ ಬಸ್ ನಿಲ್ದಾಣದಲ್ಲಿ ಬಸ್‌ಗಳನ್ನು ನಿಲ್ಲಿಸಿ ಸಾರ್ವಜನಿಕರಿಗೆ ಪ್ರಯಾಣೀಕರಿಗೆ ಅನುಕೂಲ ಮಾಡಿ ಕೊಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕರವೇ ತಾಲೂಕ ಅಧ್ಯಕ್ಷರು ಆರ್.ಕೆ.ನಾಯಕ, ಮಹೇಶ್ ನಂದಿಹಾಳ, ಬಸವರಾಜ ಬಾಳೇಕಾಯಿ, ಸಂತೋಷ್ ಬಳೆಗಾರ, ಕೇಶವ್ ಮೂರ್ತಿ ದಾಸರ, ಉಮಣ್ಣ ಹಳ್ಳಿ, ಮಲ್ಲಯ್ಯ ಬಾರಕೇರ್, ಟಿ.ವಿ.ಅಂಗಡಿ ಸ್ವಾಮಿ, ಬಸವರಾಜ್ ಸಜ್ಜನ್ ಹಾಗೂ ಇತರರು ಇದ್ದರು.

# ಚಂದ್ರ ಗ್ರಹಣ : ದೇವಾಲಯದಲ್ಲಿ ಭಜನೆ

ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ತಾಲೂಕಿನ ಡಿಗ್ಗಿ ಗ್ರಾಮದ ಆರಾಧ್ಯ ದೇವಾ ಶ್ರೀ ಮಡಿವಾಳೇಶ್ವರ ದೇವಾಲಯದಲ್ಲಿ ಮಂಗಳವಾರ ಚಂದ್ರ ಗ್ರಹಣದ ಅಂಗವಾಗಿ ವಿಶೇಷ ಭಜನೆ ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.ಗ್ರಾಮದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಭಕ್ತಿಭಾವದಿಂದ ಗ್ರಹಣ ಕಾಲದಲ್ಲಿ ದೇವರ ನಾಮಸ್ಮರಣೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ದೇವಾಲಯ ಟ್ರಸ್ಟ್‌ನ ಅಧ್ಯಕ್ಷರಾದ ದೇವೇಂದ್ರ ಪಾಟೀಲ, ಚಂದ್ರ ಗ್ರಹಣದ ಧಾರ್ಮಿಕ ಹಾಗೂ ವೈಜ್ಞಾನಿಕ ಮಹತ್ವದ ಕುರಿತು ಮಾಹಿತಿ ನೀಡಿದರು.ಗ್ರಹಣ ಕಾಲವು ಅಧ್ಯಾತ್ಮಿಕ ಸಾಧನೆಗೆ ಪ್ರಶಸ್ತವಾದ ಸಮಯ. ಈ ಅವಧಿಯಲ್ಲಿ ಜಪ, ತಪ ಮತ್ತು ಭಜನೆ ಮಾಡುವುದರಿಂದ ಮನಸ್ಸಿಗೆ ಶಾಂತಿ ದೊರೆಯುತ್ತದೆ ಎಂದು ಹೇಳಿದರು.

ನಂತರ ಭಜನಾ ಮಂಡಳಿಯ ಅಧ್ಯಕ್ಷರಾದ ಯುವರಾಜ ಚಾಂಡೇಶ್ವರೆ ಮಾತನಾಡಿ,ನಮ್ಮ ಸಂಸ್ಕೃತಿಯಲ್ಲಿ ಭಜನೆಗೆ ವಿಶೇಷ ಸ್ಥಾನವಿದೆ. ಗ್ರಹಣದಂತಹ ಸಂದರ್ಭಗಳಲ್ಲಿ ಸಾಮೂಹಿಕವಾಗಿ ಭಜನೆ ಮಾಡುವುದರಿಂದ ಗ್ರಾಮದಲ್ಲಿ ಸಕಾರಾತ್ಮಕ ಶಕ್ತಿ ನೆಲೆಸುತ್ತದೆ ಎಂದು ಹೇಳಿದರು.



ದೇವಾಲಯದ ಗರ್ಭಗುಡಿಯ ಮುಂದೆ ಕುಳಿತು ಹಿರಿಯರಿಂದ ಮಧುರವಾದ ಭಜನೆ.ಹಾರ್ಮೋನಿಯಂ ಮಾಸ್ಟರ ಯುವರಾಜ ಚಾಂಡೇಶ್ವರೆ, ತಬಲಾ ಮಾಸ್ಟರ ನಾಗಯ್ಯ ಸ್ವಾಮಿ ಮತ್ತು ಅಕ್ಕನ ಬಳಗ ಹಾಗೂ ಅಣ್ಣನ ಬಳಗದವರು ತಾಳಗಳ ಸಾಥ್‌ನೊಂದಿಗೆ ಭಜನೆ ಕಾರ್ಯಕ್ರಮ ನೆರವೇರಿತು. ಈ ಸಂದರ್ಭದಲ್ಲಿ ಅರ್ಚಕ ಚಂದ್ರಕಾಂತ ಸ್ವಾಮಿ, ಮಹದಯ್ಯ ಸ್ವಾಮಿ, ಟ್ರಸ್ಟ್ ಹಿರಿಯ ಸದಸ್ಯರಾದ ಶಿವಕುಮಾರ ರಾಂಪುರೆ, ಕಾಶೀನಾಥ ಬಿರಾದಾರ, ಧನರಾಜ ಬಿ. ರಾಂಪುರೆ, ಪರಮೇಶ ರಾಂಪುರೆ ಹಾಗೂ ಮಹಿಳಾ ಪ್ರಮುಖರಾದ ನೀಲಮ್ಮ ಬಿರಾದಾರ, ಕಾಶಿಬಾಯಿ ಪಂಚಾಳ, ಮಲ್ಲಮ್ಮ ಬಿರಾದಾರ, ಪಾರಮ್ಮ ಚಾಂಡೇಶ್ವರೆ, ಉಷಾ ಬಿರಾದಾರ, ಶ್ರೀದೇವಿ ಹರಪಾಳೆ, ರತನ್ಮ ಬಿರಾದಾರ, ಮಹಾದೇವಿ ಬಿರಾದಾರ ಸೇರಿದಂತೆ ಅನೇಕರು ಇದ್ದರು.

# ವಿಶೇಷ ಬಸ್ಸುಗಳ ಕಾರ್ಯಾಚರಣೆ

- **ಮಲ್ಲಮ್ಮ ನುಡಿ ವಾರ್ತೆ ರಾಯಚೂರು**

ಮಾರ್ಚ 16ರಿಂದ ಮಾರ್ಚ 20ರವರೆಗೆ ಯುಗಾದಿ ಹಬ್ಬದ ಪ್ರಯುಕ್ತ ಶ್ರೀಶೈಲಂ ಶ್ರೀಮಲ್ಲಿಕಾರ್ಜುನ ಜಾತ್ರಗೆ ರಾಯಚೂರು ವಿಭಾಗದ ವ್ಯಾಪ್ತಿಯಲ್ಲಿ ಬರುವ ರಾಯಚೂರು, ಲಿಂಗಸೂಗುರು, ಸಿಂಧನೂರು, ಮಾನವಿ, ದೇವದುರ್ಗ, ಮಸ್ಕಿ ಘಟಕಗಳಿಂದ 280 ವಿಶೇಷ ಬಸ್ಸುಗಳ ಕಾರ್ಯಾಚರಣೆಯನ್ನು ಆರಂಭಿಸಲಾಗಿದೆ.

ಮಾರ್ಚ್ 16 ರಿಂದ 20ರವರೆಗೆ ಶ್ರೀಶೈಲಂ ಜಾತ್ರೆ ನಡೆಯುತ್ತಿದೆ. ಅಲ್ಲದೆ ಮಾರ್ಚ್ 19 ರಂದು ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ರಥೋತ್ಸವ ಜರುಗಲಿದೆ. ರಾಯಚೂರು–ಕರ್ನೂಲ್–ಶ್ರೀಶೈಲ್, ಸಿಂಧನೂರು–ಆದೋನಿ–ಶ್ರೀಶೈಲ್, ಸಿಂಧನೂರು–ರಾಯಚೂರು–ಕರ್ನೂಲ್–ಶ್ರೀಶೈಲ್, ಲಿಂಗಸುಗೂರು–ಮಸ್ಕಿ–ಸಿಂಧನೂರು–ಆದೋನಿ–ಶ್ರೀಶೈಲ್, ಮಾನವಿ–ಸಿಂಧನೂರು–ಕರ್ನೂಲ್–ಶ್ರೀಶೈಲ್, ಮಾನವಿ–ಸಿಂಧನೂರು–ಆದೋನಿ–ಶ್ರೀಶೈಲ್, ಮಸ್ಕಿ–ರಾಯಚೂರು–ಕರ್ನೂಲ್–ಶ್ರೀಶೈಲ್, ಮಸ್ಕಿ–ಸಿಂಧನೂರು–ಆದೋನಿ–ಶ್ರೀಶೈಲ್, ದೇವದುರ್ಗ–ರಾಯಚೂರು–ಕರ್ನೂಲ್–ಶ್ರೀಶೈಲ್ ಮಾರ್ಗವಾಗಿ ಬಸ್‌ಗಳು ಸಂಚಾರ ಮಾಡಲಿವೆ.

50 ಪ್ರಯಾಣಿಕರು ಲಭ್ಯವಿದ್ದಲ್ಲಿ ಅವರ ಸ್ವ–ಸ್ಥಳದಿಂದ ನೇರವಾಗಿ ಶ್ರೀಶೈಲಂಗೆ ಬಸ್ಸು ವ್ಯವಸ್ಥೆಯನ್ನು ಒದಗಿಸಲಾಗುವುದು. ಹಾಗೂ ಪ್ರಯಾಣಿಕರು ಮಹಾನಂದಿಗೆ ಹೋಗುವುದಕ್ಕೆ ಇಷ್ಟಪಟ್ಟಲ್ಲಿ ನಿಗದಿತ ಟಿಕೇಟ್ ದರದಂತೆ ಬಸ್ ಸೌಲಭ್ಯ ಒದಗಿಸಲಾಗುತ್ತಿದ್ದು, ಶ್ರೀ ಶ್ರೀಶೈಲಂ ಹೋಗಿ ಬರುವ ಪ್ರಯಾಣಿಕರು, ಈ ವಿಷೇಶ ಬಸ್ಸುಗಳ ಸೌಕರ್ಯವನ್ನು ಪಡೆದುಕೊಳ್ಳುವಂತೆ ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ರಾಯಚೂರು–1ನೇ ಘಟಕ ಮೊಬೈಲ್ ಸಂ–ಖ್ಯೆ: 7760992363, ರಾಯಚೂರು–2ನೇ ಘಟಕ ಮೊಬೈಲ್ ಸಂ–ಖ್ಯೆ: 7760992364, ರಾಯಚೂರು–3ನೇ ಘಟಕ ಮೊಬೈಲ್ ಸಂಖ್ಯೆ: 7619351087, ಲಿಂಗಸುಗೂರು ಘಟಕ ಮೊಬೈಲ್ ಸಂಖ್ಯೆ: 7760992365, ಸಿಂಧನೂರು ಘಟಕ ಮೊಬೈಲ್ ಸಂಖ್ಯೆ: 7760992366, ಮಾನವಿ ಘಟಕ ಮೊಬೈಲ್ ಸಂಖ್ಯೆ: 7760992367, ದೇವದುರ್ಗ ಘಟಕ ಮೊಬೈಲ್ ಸಂಖ್ಯೆ: 7760992368, ಮಸ್ಕಿ ಘಟಕ ಮೊಬೈಲ್ ಸಂಖ್ಯೆ: 7760992361, ಕೇಂದ್ರ ಬಸ್ ನಿಲ್ದಾಣ ರಾಯಚೂರು ಮೊಬೈಲ್ ಸಂಖ್ಯೆ: 7760992370 ಅಥವಾ ವಿಭಾಗೀಯ ಸಂಚಾರ ಅಧಿಕಾರಿ ಮೊಬೈಲ್ ಸಂಖ್ಯೆ: 7760992352ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿಗಳಾದ ಚಂದ್ರಶೇಖರ್ ಎಂ.ಎಸ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 5ನೇ ಪಾಸ್ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ, ಊಟ, ವಸತಿ

- **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ**

ಹೆಣ್ಣುಮಕ್ಕಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕಾಗಿ ಬೀದರ್ ನಗರದಲ್ಲಿ ಅನುಭವಮಂಟಪ ಬಸವಕಲ್ಯಾಣದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಅನುಭವಮಂಟಪ ಸಂಸ್ಕೃತಿ ವಿದ್ಯಾಲಯ ಆರಂಭಿಸಿದ್ದಾರೆ. ಈ ವಿದ್ಯಾಲಯದ ಪ್ರವೇಶಕ್ಕಾಗಿ ಇದೇ ಮಾ.8 ರಂದು ಭಾನುವಾರ ಬೆಳಿಗ್ಗೆ 9 ಗಂಟೆಗೆ ಬೀದರ್‌ನ ವಿದ್ಯಾನಗರ ಮೈಲೂರು ಕ್ರಾಸ್



ಸಮೀಪದ ಡಾ. ಚನ್ನಬಸವ ಪಟ್ಟದ್ದೇವರು ಪ್ರಸಾದ ನಿಲಯದಲ್ಲಿ ಲಿಖಿತ ಪರೀಕ್ಷೆಗೆ ಹಾಜರಾಗಲು ತಿಳಿಸಲಾಗಿದೆ. ಈ ಪರೀಕ್ಷೆಯು 5ನೇ ತರಗತಿಯ ಪಠ್ಯ ಕ್ರಮದ ಇದ್ದು ಪ್ರಶ್ನೆ ಪತ್ರಿಕೆ 100 ಅಂಕಗಳ ಬಹು ಮಾದರಿಯಲ್ಲಿ ಇರುತ್ತವೆ. ಪರೀಕ್ಷೆಗೆ ಬರುವಾಗ ವಿದ್ಯಾರ್ಥಿ ಆಧಾರ ಕಾರ್ಡ್ ಝೆರಾಕ್ಸ ಪ್ರತಿ, ಮತ್ತು ಎರಡು ಪಾಸ್‌ಪೋರ್ಟ್ ಸೈಜ್ ಭಾವಚಿತ್ರ ತಪ್ಪದೆ ತರಬೇಕು.

ಈ ವಿದ್ಯಾಲಯದಲ್ಲಿ 20 ಹೆಣ್ಣುಮಕ್ಕಳಿಗೆ ಮಾತ್ರ ಅವಕಾಶ ಇರುತ್ತದೆ. ವಿದ್ಯಾರ್ಥಿನಿಯು 5ನೇ ತರಗತಿ ಪಾಸಾಗಿರಬೇಕು. ಶಿಕ್ಷಣದ ಮಾಧ್ಯಮ ಕನ್ನಡವಾಗಿರುತ್ತದೆ. ಶಾಲೆಯ ಪಠ್ಯದ ಜತೆಗೆ ಬಸವಾದಿ ಶರಣ ಸಂಸ್ಕೃತಿಯ ವಿಶೇಷ ಅಧ್ಯಯನವನ್ನು ಮಾಡಿಸಲಾಗುತ್ತದೆ. ಆಯ್ಕೆಯಾದ ವಿದ್ಯಾರ್ಥಿನಿಯರಿಗೆ 6ನೇ ತರಗತಿಯಿಂದ 10ನೇ ತರಗತಿವರೆಗೆ ಉಚಿತವಾಗಿ ಶಿಕ್ಷಣ, ಊಟ ಮತ್ತು ವಸತಿ ನೀಡಲಾಗುವುದು. ಆಸಕ್ತ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ 8050964650/ 9448358029 /9449625773 / 9972642252 /8904638908 ಕ್ಕೆ ಸಂಪರ್ಕಿಸಲು ಶ್ರೀಮಠದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಉರ್ದು ವಿಷಯಕ್ಕೆ 16 ವಿದ್ಯಾರ್ಥಿಗಳು ಗೈರು

ರಾಯಚೂರು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯಿಂದ 2026ರ ಮಾರ್ಚ್ 04ರ ಬುಧವಾರ ಉರ್ದು ಹಾಗೂ ಸಂಸ್ಕೃತ ವಿಷಯದ ಪರೀಕ್ಷೆಗಳು ನಡೆದವು.

ಜಿಲ್ಲೆಯ 43 ಪರೀಕ್ಷೆ ಕೇಂದ್ರ್ರಗಳಲ್ಲಿ ನಡೆದ ಉರ್ದು ವಿಷಯದ ಪರೀಕ್ಷೆಗೆ 311 ನೋಂದಣೆಯಾಗಿದ್ದು, 295 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 16 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ. ಸಂಸ್ಕೃತ ವಿಷಯದಲ್ಲಿ ಒಟ್ಟು 252 ನೋಂದಣಿಯಾಗಿದ್ದು, 252 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಿಯಾಗಿದ್ದು, ಸಂಸ್ಕೃತ ವಿಷಯದಲ್ಲಿ ಯಾವುದೇ ವಿದ್ಯಾರ್ಥಿಗಳು ಗೈರು ಹಾಜರಿ ಇರುವುದಿಲ್ಲ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಭಾರಿ ಉಪನಿರ್ದೇಶಕರಾದ ಸೋಮಶೇಖರಪ್ಪ ಹೊಕ್ರಾಣಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಫಾಲ್ಗುಣ ಬುದ್ಧ ಪೂರ್ಣಿಮೆ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯಾದಗಿರಿ ನಗರದ ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಸಂಜೆ ಫಾಲ್ಗುಣ ಮಾಸದ ವಿಶೇಷ ಪೂರ್ಣಿಮೆಯನ್ನು ಉಪಾಸಕರ ಜೊತೆಗೂಡಿ ಪಂಚಶೀಲ ಪಠಣವನ್ನು ಅರ್ಥಪೂರ್ಣ ಮೂಲಕ ಆಚರಣೆ ಮಾಡಲಾಯಿತು. ತಥಾಗತ ಗೌತಮ ಬುದ್ಧರ ಮೂರ್ತಿಗೆ ಪುಷ್ಪಾರ್ಚನೆ ಜೊತೆಗೆ ಸಾಮೂಹಿಕವಾಗಿ ವಂದನೆಯನ್ನು ಸಲ್ಲಿಸಿ, ಮೂಢನಂಬಿಕೆ (ಮೌಢ್ಯತೆ )ವಿರುದ್ಧ ಜಾಗೃತಿ ಮೂಡಿಸಲಾಯಿತು. ಬೀದರ್ ನ ಧಮ್ಮಚಾರಿ ವಿಷ್ಣು ಹುಡುಗಿಕರ್, ಶಂಕರ್ ರಾವ್ ಕೊಂಡೆ ರಣಧೀರ ಕನಗನಹಳ್ಳಿ, ಗ್ರಾಮ ಪಂಚಾಯತ್ ಸದಸ್ಯ ಗೌತಮ್ ಕ್ರಾಂತಿ, ಬೌದ್ಧ ಧಮ್ಮದಲ್ಲಿ ಬರುವ ಪ್ರತಿಯೊಂದು ಹುಣ್ಣಿಮೆಗಳ ಆಚಾರಣೆ, ಪ್ರಾಮುಖ್ಯತೆಯನ್ನು ಹಾಗೂ ಗೌತಮ ಬುದ್ಧರ ಮಹತ್ವದ ಧರ್ಮೋಪದೇಶದ ಇತಿಹಾಸವನ್ನು ನೀಡಿದರು. ಈ ಸಂಧರ್ಭದಲ್ಲಿ ಉಪಾಸಕರಾದ ದೇವಿಂದ್ರಪ್ಪ ಈಟೆ, ಶಂಕರ್ ರಾವ್ ಕೊಂಡೆ, ಸುರೇಶ್ ಬೊಮ್ಮನ್, ವಿಷ್ಣು ಹುಡುಗಿಕರ್, ರಣಧೀರ ಕನಗನಹಳ್ಳಿ, ಕಾಶಿನಾಥ್ ನಾಟೇಕರ್, ಗ್ರಾಮ ಪಂಚಾಯತ್ ಸದಸ್ಯ ಗೌತಮ್ ಕ್ರಾಂತಿ, ಮರಿಲಿಂಗಪ್ಪ ಕೊಲ್ಲೂರು, ಶಿವುಕುಮಾರ ಬೆಳಗುಂದಿ, ನಾಗು ಕ್ಯಾತನಾಳ, ಮೋನೆಶ್ ಗಿರಿಯಪ್ಪನೋರ್, ಧನರಾಜ್ ಗಿರಿಯಪ್ಪನೋರ್, ಗೀರೀಶ್ ಚಟ್ಟೇರಕರ್ ಭಾಗವಹಿಸಿದ್ದರು.

ಚಂದ್ರಕಾಂತ ಚಲುವಾದಿ ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.

# ಕೆಂಭಾವಿಯಲ್ಲಿ ರಂಗೇರಿದ ಹೋಳಿ ಹಬ್ಬದ ಸಂಭ್ರಮ

• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ



ಬಣ್ಣಗಳ ಹಬ್ಬ ಎಂದೇ ಖ್ಯಾತಿಯಾಗಿರುವ 'ಹೋಳಿ' ಹಬ್ಬವನ್ನು ಕೆಂಭಾವಿ ಪಟ್ಟಣ ಸೇರಿದಂತೆ ವಲಯದಾದ್ಯಂತ ಬುಧವಾರ ಅತ್ಯಂತ ಸಡಗರ–ಸಂಭ್ರಮದಿಂದ ಆಚರಿಸಲಾಯಿತು. ಜಾತಿ–ಮತ, ಬೇಧವಿಲ್ಲದೆ ಸರ್ವರೂ ಒಂದಾಗಿ ರಂಗದೋಕುಳಿಯಲ್ಲಿ ಮಿಂದೆದ್ದರು.

ಮಂಗಳವಾರ ರಾತ್ರಿ ಸಂಪ್ರದಾಯಬದ್ಧವಾಗಿ ಕಾಮದಹನ ನೆರವೇರಿಸಿದ ನಂತರ, ಬುಧವಾರ ಮುಂಜಾನೆಯಿಂದಲೇ ಪಟ್ಟಣದಲ್ಲಿ ಬಣ್ಣದ ಎರಚಾಟ ಶುರುವಾಯಿತು. ಯುವಕರು ಗುಂಪು ಗುಂಪಾಗಿ ಸೇರಿ, ಭಾಜಾ ಭಜಂತ್ರಿಗಳ ತಾಳಕ್ಕೆ ಹೆಜ್ಜೆ ಹಾಕುತ್ತಾ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದರು. ಗೆಳೆಯರ ಬಳಗದವರು ಒಬ್ಬರಿಗೊಬ್ಬರು ಬಣ್ಣ ಹಚ್ಚಿ, ಹಾಸ್ಯ–ಕೀಟಲೆ ಮಾಡುತ್ತಾ ರಂಗಿನಾಟವಾಡಿದರು.

ಕೇವಲ ಯುವಕರಿಗಷ್ಟೇ ಸೀಮಿತವಾಗದ ಈ ಹಬ್ಬದಲ್ಲಿ ಹಿರಿಯರು ಮತ್ತು ಮಹಿಳೆಯರು ಸಹ ತಮ್ಮ ಆಪ್ತ ವಲಯದಲ್ಲಿ ಪರಸ್ಪರ ಬಣ್ಣ ಹಚ್ಚಿ ಸಂಭ್ರಮ ಹಂಚಿಕೊಂಡರು.

ಮಕ್ಕಳು ತಮ್ಮ ಓಣಿಗಳಲ್ಲಿಯೇ ಪಿಚಕಾರಿ ಹಿಡಿದು ಬಣ್ಣ ಸಿಡಿಸುತ್ತಾ ಕುಣಿದು ಕುಪ್ಪಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಗೆಳೆಯರ ಬಳಗದ ಗುಡದಯ್ಯ ದಾವಣಗೇರಿ ಅವರು, ಹಬ್ಬದ ಮಹತ್ವವನ್ನು ಹೀಗೆ ವಿವರಿಸುತ್ತಾ, ಹಿಂದೂಗಳ ಪ್ರಮುಖ ಹಬ್ಬಗಳಲ್ಲಿ ಒಂದಾದ ಹೋಳಿಯು ಉತ್ತರ ಭಾರತ ಸೇರಿದಂತೆ ಇಡೀ ದೇಶದಲ್ಲಿ ಸೌಹಾರ್ದತೆಯ ಪ್ರತೀಕವಾಗಿ ಆಚರಿಸಲ್ಪಡುತ್ತದೆ.

ವರ್ಷದ ಕೊನೆಯ ಹಬ್ಬವಾದ ಇದಕ್ಕೆ ತನ್ನದೇ ಆದ ಪೌರಾಣಿಕ ಹಿನ್ನೆಲೆ ಇದೆ. ಬಂಧು–ಮಿತ್ರರೆಲ್ಲರೂ ಒಟ್ಟಾಗಿ ಸೇರಿ ಬಣ್ಣಗಳ ಮೂಲಕ ಕೀಟಲೆ, ಹಾಸ್ಯ ಮಾಡುತ್ತಾ ಸಂಭ್ರಮಿಸುವುದು ನಮ್ಮ ಸಂಪ್ರದಾಯದ ಭಾಗವಾಗಿದೆ ಎಂದರು. ಗ್ರಾಮೀಣ ಭಾಗದ ಮನೆ–ಮನೆಗಳಿಂದ ಬಂದ ನೆಂಟರಿಷ್ಟರು ಹಬ್ಬಕ್ಕೆ ಮತ್ತಷ್ಟು ಕಳೆ ನೀಡಿದ್ದರು.

ಒಟ್ಟಾರೆಯಾಗಿ ಕೆಂಭಾವಿ ವಲಯವು ರಂಗು ರಂಗಿನ ಬಣ್ಣಗಳಿಂದ ಕಂಗೊಳಿಸುತ್ತಿತ್ತು.

# ವಡಗೇರಾ ತಾಲೂಕಿನಾದ್ಯಂತ ಸಂಭ್ರಮದ ಹೋಳಿ ಹಬ್ಬ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ವಡಗೇರಾ ತಾಲೂಕಿನ ತುಮಕೂರು ಗ್ರಾಮ ಸೇರಿದಂತೆ ವಡಗೇರಾ ತಾಲೂಕಿನಾದ್ಯಂತ ಹೋಳಿ ಹಬ್ಬದ ಪ್ರಯುಕ್ತ ಯುವಕರು ಪರಸ್ಪರ ಬಣ್ಣವನ್ನು ಹಚ್ಚುವುದರ ಮೂಲಕ ಅತ್ಯಂತ ಸಡಗರ ಸಂಭ್ರಮದಿಂದ ಹೋಳಿ ಹಬ್ಬವನ್ನು ಆಚರಿಸಿದರು. ತಾಲೂಕಿನ ವಿವಿಧ ಗ್ರಾಮಗಳ ಮಹಿಳೆಯರು ಮಕ್ಕಳು ಯುವಕರು ಸ್ನೇಹಿತರಿಗೆ ಪರಸ್ಪರ ಬಣ್ಣ ಎರಚುವ ಮೂಲಕ ಕುಣಿದು ಕುಪ್ಪಳಿಸಿದರು. ಗ್ರಾಮೀಣ ಭಾಗದಲ್ಲಿ ಮಂಗಳವಾರ ರಾತ್ರಿ ಕಾಮದಹನ ಮಾಡುವ ಮೂಲಕ ಬುಧವಾರ ಬೆಳಿಗ್ಗೆಯಿಂದಲೇ ಯುವಕರು ಹಲಿಗೆ ತಮಟೆ ಬಾರಿಸುತ್ತಾ ಮಧ್ಯಾಹ್ನದವರೆಗೆ ಸ್ನೇಹಿತರೊಂದಿಗೆ ಸೇರಿ ಬಣ್ಣದಾಟವಾಡಿ ಸಂಭ್ರಮಿಸಿದರು. ಹೋಳಿ ಹಬ್ಬದ ಹಿನ್ನೆಲೆಯಲ್ಲಿ ತಾಲೂಕಿನ ಗ್ರಾಮೀಣ ಭಾಗದಲ್ಲಿ ಬೆಳಿಗ್ಗೆಯಿಂದಲೇ ಅಂಗಡಿ ಮುಂಗಟ್ಟುಗಳು ಬಂದ್ ಆಗಿದ್ದವು ಹೋಳಿ ಹಬ್ಬದ ನಿಮಿತ್ಯ ವಡಗೇರಾ ಪೊಲೀಸ್ ಠಾಣೆ ವತಿಯಿಂದ ಸೂಕ್ತ ಪೊಲೀಸ್ ಬಂದೋಬಸ್ತ್ ಕೈಗೊಂಡು ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತೆ ಕ್ರಮವಹಿಸಲಾಗಿತ್ತು.

# ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಪ್ರವಾಸೋದ್ಯಮ ಇಲಾಖೆಯಿಂದ 2025–26ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ–ಟಿ.ಎಸ್.ಪಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ಉದ್ಯಮಿದಾರರನ್ನು ಉತ್ತೇಜಿಸಲು ಒಂದು ತಿಂಗಳ ಉದ್ಯಮಶೀಲತೆ ತರಬೇತಿ ಪಡೆಯಲು ಹಾಗೂ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಮೊಬೈಲ್ ಕ್ಯಾಂಟಿನ್ ನಡೆಸಲು ಸಹಾಯಧನ ನೀಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕನಿಷ್ಠ ವಿದ್ಯಾರ್ಹತೆ 10 ನೇ ತರಗತಿ ಉತ್ತೀರ್ಣರಾಗಿರಬೇಕು. ವಯಸ್ಸು 20 ರಿಂದ 55 ವರ್ಷದೊಳಗಿರಬೇಕು. 1 ತಿಂಗಳ ತರಬೇತಿ ಕಾಲಾವಧಿಯಾಗಿದ್ದು, ಪರಿಶಿಷ್ಟ ಜಾತಿ–04 ಮತ್ತು ಪರಿಶಿಷ್ಟ ಪಂಗಡ–03 ಗುರಿ ನಿಗದಿಪಡಿಸಲಾಗಿದೆ.

ಘಟಕ ವೆಚ್ಚ:

ಮೊಬೈಲ್ ಕ್ಯಾಂಟೀನ್ ವಾಹನ ಖರೀದಿಸಲು ಇಲಾಖೆಯ ಸಹಾಯಧನ ಘಟಕ ವೆಚ್ಚದಲ್ಲಿ ಶೇ.70 ರಷ್ಟು ಗರಿಷ್ಠ ರೂ.05 ಲಕ್ಷ ನೀಡಲಾಗುತ್ತದೆ. ಫಲಾನುಭವಿಯ ವಂತಿಗೆ – ವಾಹನದ ಒಟ್ಟು ವೆಚ್ಚದ ಶೇ.05 ರಷ್ಟು. ಹಣಕಾಸು ಸಂಸ್ಥೆಗಳು, ಬ್ಯಾಂಕ್ ಸಾಲ – ವಾಹನದ ಒಟ್ಟು ವೆಚ್ಚದಲ್ಲಿ ಉಳಿದ ಮೊತ್ತ.

ಅರ್ಹತೆ:

ಅರ್ಜಿದಾರರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು. ಅಭ್ಯರ್ಥಿಗಳು ಲಘು ವಾಹನ ಚಾಲನಾ ಪರವಾನಗಿ ಪಡೆದಿರಬೇಕು. ನಗರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ ರೂ.02 ಲಕ್ಷ ಮೀರಿರಬಾರದು. ಗ್ರಾಮಾಂತರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ ರೂ.1.50 ಲಕ್ಷ ಮೀರಿರಬಾರದು. ಬಳ್ಳಾರಿ ಜಿಲ್ಲೆಯ ನಿವಾಸಿಯಾಗಿರಬೇಕು. ಅರ್ಜಿದಾರನು ಯಾವುದೇ ಸರ್ಕಾರಿ ಇಲಾಖೆಯಲ್ಲಿ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿರಬಾರದು. ಬೇಕಾದ ದಾಖಲೆ: ಪ್ರಕಟಣೆಗೊಂಡ 20 ದಿನಗಳ ಒಳಗಾಗಿ ನಿಗದಿಪಡಿಸಿದ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಇತ್ತೀಚಿನ ಭಾವಚಿತ್ರದೊಂದಿಗೆ ದ್ವಿಪ್ರತಿಯಲ್ಲಿ ಸಲ್ಲಿಸಬೇಕು. ಆಧಾರ್ ಕಾರ್ಡ್ ಪ್ರತಿ ಕಡ್ಡಾಯ. ಪ.ಜಾತಿ ಮತ್ತು ಪ.ಪಂಗಡಕ್ಕೆ ಸೇರಿರುವ ಬಗ್ಗೆ ತಹಶೀಲ್ದಾರರಿಂದ ಪಡೆದುಕೊಂಡಿರುವ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರದ ಪ್ರತಿ ಹಾಗೂ ಆದಾಯ ಪ್ರಮಾಣ ಪತ್ರದ ಪ್ರತಿ ಸಲ್ಲಿಸಬೇಕು.

ಖಾಯಂ ಲಘು ವಾಹನ ಚಾಲನಾ ಪರವಾನಗಿ ಪತ್ರದ ಪ್ರತಿ ಸಲ್ಲಿಸಬೇಕು. ವಿದ್ಯಾರ್ಹತೆಯ ಬಗ್ಗೆ ಕನಿಷ್ಠ ಎಸ್.ಎಸ್.ಎಲ್.ಸಿ ಯಲ್ಲಿ ಉತ್ತೀರ್ಣರಾಗಿರುವ ಅಂಕಪಟ್ಟಿಯ ಪ್ರತಿ. ಅರ್ಜಿದಾರನು ಯಾವುದೇ ಸರ್ಕಾರಿ ಇಲಾಖೆ, ನಿಗಮ, ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿರದ ಬಗ್ಗೆ ಸ್ವಯಂ ಪ್ರಮಾಣೀಕರಿಸಿ, ರೂ.100/–ರ ಬೆಲೆಯ ಛಾಪಾ ಕಾಗದ (ಅಫಿಡೇವಿಟ್) ದಲ್ಲಿ ನಮೂನೆ–3ರಲ್ಲಿ ಪ್ರಮಾಣ ಪತ್ರ ಸಲ್ಲಿಸುವುದು. ಅರ್ಜಿದಾರರ ವಾಸಸ್ಥಳ ದೃಢೀಕರಣದ ಜೆರಾಕ್ಸ್ ಪ್ರತಿ ಸಲ್ಲಿಸುವುದು. ಮೇಲಿನ ಎಲ್ಲಾ ದಾಖಲಾತಿಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.

# ಸಂಭ್ರಮದ ಹೋಳಿ ಹಬ್ಬ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯಾದಗಿರಿ ತಾಲೂಕಿನ ಮುಷ್ಟೂರು ಗ್ರಾಮ ಸೇರಿದಂತೆ ಯಾದಗಿರಿ ತಾಲೂಕಿನಾದ್ಯಂತ ಹೋಳಿ ಹಬ್ಬದ ಪ್ರಯುಕ್ತ ಯುವಕರು ಪರಸ್ಪರ ಬಣ್ಣವನ್ನು ಹಚ್ಚುವುದರ ಮೂಲಕ ಅತ್ಯಂತ ಸಡಗರ ಸಂಭ್ರಮದಿಂದ ಹೋಳಿ ಹಬ್ಬವನ್ನು ಆಚರಿಸಿದರು. ತಾಲೂಕಿನ ವಿವಿಧ ಗ್ರಾಮಗಳ ಮಹಿಳೆಯರು ಮಕ್ಕಳು ಯುವಕರು ಸ್ನೇಹಿತರಿಗೆ ಪರಸ್ಪರ ಬಣ್ಣ ಎರಚುವ ಮೂಲಕ ಕುಣಿದು ಕುಪ್ಪಳಿಸಿದರು.

ಗ್ರಾಮೀಣ ಭಾಗದಲ್ಲಿ ಮಂಗಳವಾರ ರಾತ್ರಿ ಕಾಮದಹನ ಮಾಡುವ ಮೂಲಕ ಬುಧವಾರ ಬೆಳಿಗ್ಗೆಯಿಂದಲೇ ಯುವಕರು ಹಲಿಗೆ ತಮಟೆ ಬಾರಿಸುತ್ತಾ ಮಧ್ಯಾಹ್ನದವರೆಗೆ ಸ್ನೇಹಿತರೊಂದಿಗೆ ಸೇರಿ ಬಣ್ಣದಾಟವಾಡಿ ಸಂಭ್ರಮಿಸಿದರು. ಹೋಳಿ ಹಬ್ಬದ ಹಿನ್ನೆಲೆಯಲ್ಲಿ ತಾಲೂಕಿನ ಗ್ರಾಮೀಣ ಭಾಗದಲ್ಲಿ ಬೆಳಿಗ್ಗೆಯಿಂದಲೇ ಅಂಗಡಿ ಮುಂಗಟ್ಟುಗಳು ಬಂದ್ ಆಗಿದ್ದವು ಹೋಳಿ ಹಬ್ಬದ ನಿಮಿತ್ಯ ಈ ಹಬ್ಬದಲ್ಲಿ ಗ್ರಾಮದ ಮುಖಂಡರಾದ ಶಿವರಾಯ ದೊಡ್ಡಮನಿ ದೇವು ಲಿಂಗೇರಿ ಹಳ್ಳೆಪ್ಪ ಗುಂಜನೂರ ಮಲ್ಲಪ್ಪ ದೊಡ್ಡಮನಿ ಸಾಬರೆಡ್ಡಿ ದೊಡ್ಡಮನಿ ಲಕ್ಷ್ಮೀಕಾಂತ ಲಿಂಗೇರಿ ದೇವು ದೊಡ್ಡಮನಿ ಮೌನೇಶ ದೊಡ್ಡಮನಿ ಶಿವು ದೊಡ್ಡಮನಿ ಮಲ್ಲು ದೊಡ್ಡಮನಿ ಮಹಾಂತೇಶ ದೊಡ್ಡಮನಿ ಮಲ್ಲು ಎಸ್ ದೊಡ್ಡಮನಿ ಉಪಸ್ಥಿತರಿದ್ದರು.

# ಧ್ವನಿ ಜಿಲ್ಲಾಧ್ಯಕ್ಷರಾಗಿ ಇಂಧುದರ ಸಿನ್ನೂರ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ, ಗುರುಮಠಕಲ್

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆ ರಾಜ್ಯಾಧ್ಯಕ್ಷರಾದ ಬಂಗ್ಲೆ ಮಲ್ಲಿಕಾರ್ಜುನ ಅವರು ಯಾದಗಿರಿ ಜಿಲ್ಲಾ ಘಟಕದ ನೂತನ ಜಿಲ್ಲಾಧ್ಯಕ್ಷರಾಗಿ ಇಂಧುದರ ಸಿನ್ನೂರ ಅವರನ್ನು ನೇಮಿಸಿ ಆದೇಶ ಹೊರಡಿಸಿದ್ದಾರೆ.

ಸಂಘಟನೆಯ ಬಲವರ್ಧನೆಗೆ ಜೊತೆಗೆ ಪತ್ರಕರ್ತರ ಮೂಲಭೂತ ಹಕ್ಕುಗಳು ಹಾಗೂ ಅವರ ಸಮಸ್ಯೆಗಳ ಪರಿಹಾರಕ್ಕಾಗಿ ಪರಿಣಾಮಕಾರಿಯಾಗಿ ಧ್ವನಿಯಾಗಲು ನೂತನ ಜಿಲ್ಲಾಧ್ಯಕ್ಷರಿಗೆ ಸೂಚನೆ ನೀಡಲಾಗಿದೆ.

ಈ ನೇಮಕಾತಿಯಿಂದ ಯಾದಗಿರಿ ಜಿಲ್ಲೆಯ ಪತ್ರಕರ್ತರಲ್ಲಿ ಸಂತೋಷದ ವಾತಾವರಣ ನಿರ್ಮಾಣವಾಗಿದೆ. ನಾವೆಲ್ಲರೂ ಧ್ವನಿ ಸಂಘಟನೆಯನ್ನು ಇನ್ನಷ್ಟು ಗಟ್ಟಿಗೊಳಿಸಲು ನೂತನ ಜಿಲ್ಲಾಧ್ಯಕ್ಷರೊಂದಿಗೆ ಕೈಜೋಡಿಸುವುದಾಗಿ ಗುರುಮಠಕಲ್ ತಾಲೂಕು ಅಧ್ಯಕ್ಷ ರವಿ ಬುರನೊಳ್ ಹರ್ಷ ವ್ಯಕ್ತಪಡಿಸಿದ್ದಾರೆ.

# ಸಡಗರ ಸಂಭ್ರಮದಿಂದ ಹೋಳಿ ಹಬ್ಬ



ಮುದಗಲ್ : ಪಟ್ಟಣದಲ್ಲಿ ಮಕ್ಕಳಿಂದ ಹಿಡಿದು ದೊಡ್ಡವರವರೆಗೂ ಇಷ್ಟಪಡುವ ರಂಗುರಂಗಿನ ಬಣ್ಣದ ಹಬ್ಬವಾಗಿರುವ ಹೋಳಿ ಹುಣ್ಣಿಮೆ ಸಡಗರ ಸಂಭ್ರಮದಿಂದ ಬುಧವಾರ ಆಚರಣೆ ಮಾಡಿದರು.

ಪಟ್ಟಣದ ವಿವಿಧ ಬಡಾವಣೆಯ ಮಕ್ಕಳು ಹಲಗೆ ಬಾರಿಸುತ್ತ, ಬಾಯಿ ಬಡಿದುಕೊಳ್ಳುತ್ತ ಅಣಕು ಶವಯಾತ್ರೆ ನಡೆಸಿ ಚಂದಾ ಸಂಗ್ರಹಿಸಿಕೊಂಡು ಮಂಗಳವಾರ ರಾತ್ರಿ ಕಾಮಣ್ಣ ಸುಡಲು ಯುವಕರು ತಡರಾತ್ರಿಯಲ್ಲಿ ಕಟ್ಟಿಗೆ ಒಂದೆಡೆ ಸಂಗ್ರಹ ಮಾಡಿ ರತಿ–ಕಾಮಣ್ಣ ಭಾವ ಚಿತ್ರದೊಂದಿಗೆ ಕಾಮದಹನ ಮಾಡಿದರು.

ಬೆಳಿಗ್ಗೆಯಿಂದಲೇ ಮಕ್ಕಳು, ಹಿರಿಯರು ಸೇರಿದಂತೆ ವಿವಿಧ ಬಡಾವಣೆಯಲ್ಲಿ ಹೋಳಿ ಸಂಭ್ರಮ ಗರಿಗೆದರಿತು. ಪಟ್ಟಣದ ಪುರಸಭೆ ರಂಗ ಮಂದಿರದ ಮುಂಭಾಗದಲ್ಲಿ ಬಣ್ಣದ ಓಕುಳಿಯೊಂದಿಗೆ ಒಟ್ಟಾಗಿ ಸೇರಿ ಪಟ್ಟಣದಲ್ಲಿ ಮಕ್ಕಳು ಗುಂಪು ಗುಂಪಾಗಿ ಬಾಯಿ ಬಡಿದುಕೊಳ್ಳುತ್ತ ಪದ್ಧತಿಯಂತೆ ಮೇಲೆ ಕಟ್ಟಿರುವ

ಗಡಿಗೆ ಹೊಡೆದರು. ಒಬ್ಬರಿಗೊಬ್ಬರು ಪರಸ್ಪರ ಬಣ್ಣ ಎರಚಿ ಹೋಳಿ ಸಂಭ್ರಮಿಸಿದರು. ಸ್ನೇಹಿತರ ಜತೆಗೂಡಿ ಬಾಡೂಟ ಸವಿದು ಸಂಭ್ರಮಿಸಿದರು.

# ರಾಧಾಕೃಷ್ಣ ದೊಡ್ಡಮನಿ ಆರೋಗ್ಯದಲ್ಲಿ ಚೇತರಿಕೆಗಾಗಿ ವಿಶೇಷ ಪೂಜೆ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಕಲಬುರಗಿ ಕ್ಷೇತ್ರದ ಸಂಸದರಾದ ರಾಧಾಕೃಷ್ಣ ದೊಡ್ಡಮನಿ ಅವರು ಅನಾರೋಗ್ಯ ಕಾರಣ ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದರಿಂದ ಹರಕೆ ತೀರಿಸಲು ಶ್ರೀಶೈಲ ಮಲ್ಲಿಕಾರ್ಜುನ ದೇವರ ಸನ್ನಿಧಿಗೆ ತೆರಳಿ ಹಿಂದುಳಿದ ವರ್ಗಗಳ

ಆಯೋಗದ ಮಾಜಿ ಸದಸ್ಯರಾದ ಶರಣಪ್ಪ ಡಿ ಮಾನೇಗಾರ ಅವರ ಅಭಿಮಾನ ಬಳಗ ವಿಶೇಷ ಪೂಜೆ ಸಲ್ಲಿಸಿದರು. ಸಂಸದರು ಆರೋಗ್ಯದಲ್ಲಿ ಹೆಚ್ಚಿನ ಸುಧಾರಣೆಯಾಗಿ ಜನಸೇವೆಗೆ ಮರಳಲಿ ಎಂದು ದೇವರಲ್ಲಿ ಅಭಿಮಾನಿಗಳು ಪ್ರಾರ್ಥಿಸಿದರು. ಸಂಸದರರಿಗೆ ಶಸ್ತ್ರಚಿಕಿತ್ಸೆಯ ವೇಳೆ ಶೀಘ್ರ ಗುಣಮುಖರಾಗಲಿ ಎಂದು ಹರಕೆ ಹೊತ್ತಿದ್ದರಿಂದ ಆರೋಗ್ಯ ಚೇತರಿಸಿಕೊಂಡ ಹಿನ್ನಲೆ ಇಂದು ಹರಕೆ ತೀರಿಸಿ ಭಗವಂತ ಅವರಿಗೆ ಇನ್ನಷ್ಟು ಚೈತನ್ಯ ನೀಡಿ ಕಾಪಾಡಲಿ,

ಜನಸೇವೆಯಲ್ಲಿ ಸಕ್ರೀಯವಾಗಿ ಕಾರ್ಯಕರ್ತರಿಗೆ ಮಾರ್ಗದರ್ಶನ ನೀಡಲಿ ಎಂದು ಅಭಿಮಾನಿಗಳು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಹಣಮಂತ ದೊಡ್ಡಮನಿ ಹಿಂದುಳಿದ ವರ್ಗದ ಸೈದಾಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ದೇವಪ್ಪ ಗೌಡ ರಾಚನಳ್ಳಿ , ಜಗದೀಶ್ ಸಜ್ಜನ್, ಯುವ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ತಿಮ್ಮಾರೆಡ್ಡಿ ಬೆಳಗುಂದ, ಯುವ ಕಾಂಗ್ರೆಸ್ ಗುರುಮಠಕಲ್ ಅಸೆಂಬ್ಲಿ ಉಪಾಧ್ಯಕ್ಷರಾದ ಪುಂಡಲಿಕ, ಮಂಜುನಾಥ ಮೇತ್ರಿ, ವೀರೇಶ್ ಸಜ್ಜನ್, ಮಣಿಕಂಠ ನಾಟೀಕರ, ಸಚಿನ್ ಪವಾರ್, ಭಾಸ್ಕರ್ ದೊಡ್ಡ ಸಂಬ್ರ ಇನ್ನಿತರರು ಉಪಸ್ಥಿತರಿದ್ದರು.

# ಯಮನೂರ ದೇವರ ಜಾತ್ರೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ನವನಗರದ ಬೈಪಾಸ್ ರಸ್ತೆಯ ಸೆಕ್ಟರ್ ನಂ.6ರ ಎದುರಿನ ಹಿಂದೂ ಮುಸ್ಲಿಂ ಭಾವೈಕ್ಯತೆಯ ಚಾಂಗದೇವ ಮಹಾರಾಜ(ಯಮನೂರ ದೇವರು)ರ ಜಾತ್ರೆ ಫೆ.7 ಮತ್ತು 8ರಂದು ನಡೆಯಲಿದೆ.

ಜಾತ್ರೆಯನ್ನು ಸಂಭ್ರಮದಿಂದ ಆಚರಿಸಲು ತೀರ್ಮಾನಿಸಿದ್ದು, ಈ ದೇವರನ್ನು ಹಿಂದೂ–ಮುಸ್ಲಿಂ ಬಾಂಧವರು ಯಾವುದೇ ಬೇಧ ಭಾವವಿಲ್ಲದೇ ಪೂಜಿಸುತ್ತಾರೆ. ಫೆ. 7ರಂದು ಗಂದಾಭಿಷೇಕ ನಡೆಯಲಿದ್ದು, ಫೆ. 8ರಂದು ರವಿವಾರ ಜಾತ್ರೆ ನಡೆಯಲಿದೆ.

ಭಕ್ತರು ಜಾತ್ರೆಗೆ ಆಗಮಿಸಿ, ಯಮನೂರ ದೇವರ ದರ್ಶನ ಪಡೆಯಬೇಕೆಂದು ದೇವಸ್ಥಾನದ ಮುಖ್ಯಪೂಜಾರಿ ಪ್ರಕಾಶ ಧೋಂಡಿಬಾ ಪವಾರ ಪ್ರಕಟಣೆಯಲ್ಲಿ ಕೋರಿದ್ದಾರೆ.

# ಜಿಲ್ಲಾ ಮಟ್ಟದ ವಿಕಸಿತ ಭಾರತ ಯುವ ಸಂಸತ್




• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯುವಜನರಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳು, ನಾಯಕತ್ವ ಗುಣಗಳು ಹಾಗೂ ರಾಷ್ಟ್ರ ನಿರ್ಮಾಣದ ಜವಾಬ್ದಾರಿಯ ಅರಿವು ಮೂಡಿಸುವ ಉದ್ದೇಶದಿಂದ ಜಿಲ್ಲಾ ಮಟ್ಟದ ವಿಕಸಿತ ಭಾರತ ಯುವ ಸಂಸತ್ □ 2026 ಕಾರ್ಯಕ್ರಮವನ್ನು ನಗರದ Don Bosco Degree College ನಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು. ಈ ಕಾರ್ಯಕ್ರಮವನ್ನು ಒಟ್ಟುಣಡಿಥಿ ಠಜಿ ಜಠಣ್ಣು ಂಜಿಜಿಚುಢಿ ಚಿಟಜ ಖಠಿಂಡಿಣ, ಖಜರುಠಟಿಚಿಟ ಆ–ಡಿಜಛಿಣಂಡಿಚಿಣಜ ಠಜಿ ಓಖಖ, ಹಾಗೂ ಒಜಡಿಚಿ ಜಣಾತಚಿ ಖಚಿಡಿಚಿಣ, ಯಾದಗಿರಿ ಇವರ ಸಹಯೋಗದಲ್ಲಿ ಡಾನ್ ಬಾಸ್ಕೋ ಪದವಿ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ (NSS) ಘಟಕದ ವತಿಯಿಂದ ಆಯೋಜಿಸಲಾಯಿತು.

ಯಾದಗಿರಿ ಜಿಲ್ಲೆಯ ವಿವಿಧ ಗ್ರಾಮಗಳಿಂದ ಆಗಮಿಸಿದ ಒಟ್ಟು 51 ಯುವ ಪ್ರತಿನಿಧಿಗಳು ಯುವ ಸಂಸತ್‌ನಲ್ಲಿ ಭಾಗವಹಿಸಿ ರಾಷ್ಟ್ರಾಭಿವೃದ್ಧಿ, ಸಾಮಾಜಿಕ ಸಮಸ್ಯೆಗಳು ಹಾಗೂ ಪ್ರಜಾಪ್ರಭುತ್ವದ ವಿಚಾರಗಳ ಕುರಿತು ಪರಿಣಾಮಕಾರಿ ಭಾಷಣಗಳನ್ನು ಮಾಡಿದರು.

ಕಾರ್ಯಕ್ರಮವನ್ನು ಪ್ರಾರ್ಥನಾ ಗೀತೆಯೊಂದಿಗೆ ಆರಂಭಿಸಲಾಯಿತು. ಬಳಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾದ ರೆವ. ಫಾ. ಥಾಮಸ್ ಕೂನನ್ ಅವರು ಸ್ವಾಗತ ಭಾಷಣ ಮಾಡಿ ಯುವಕರ ಸಕ್ರಿಯ ಭಾಗವಹಿಸುವಿಕೆಯ ಮಹತ್ವವನ್ನು ವಿವರಿಸಿದರು. ಉದ್ಘಾಟನಾ ಭಾಷಣ ಮಾಡಿದ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀ ಮರಿಯಪ್ಪ ಅವರು ಸಂವಿಧಾನ ಅರಿವು ಮತ್ತು ಜವಾಬ್ದಾರಿಯುತ ನಾಗರಿಕತ್ವದ ಅಗತ್ಯವನ್ನು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ಯುವಾಧಿಕಾರಿಗಳಾದ ಶ್ರೀ ಮಯೂರ್ ಕುಮಾರ್ ಅವರು ಯುವಕರು ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಬೇಕೆಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಶ್ರೀ ಚೆನ್ನಬಸವ ಮುದ್ಹೋಳ ಹಾಗೂ ಡಿಡಿಪಿಯು ಯಾದಗಿರಿ ಜಿಲ್ಲೆಯ ಶ್ರೀ ಪಂಡಿತ್ರಾವ್ ಪವಾರ್ ಅವರು ಉಪಸ್ಥಿತರಿದ್ದು ಯುವ ಸಂಸತ್ ಕಾರ್ಯಕ್ರಮವನ್ನು ಪ್ರಶಂಸಿಸಿದರು. ಡಾನ್ ಬಾಸ್ಕೋ ಸಂಸ್ಥೆಗಳ ನಿರ್ದೇಶಕರಾದ ರೆವ. ಫಾ. ಸಾಜಿ ಜಾರ್ಜ್ ಅವರು ಅಧ್ಯಕ್ಷೀಯ ಭಾಷಣ ಮಾಡಿ ಯುವಕರು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡುವ ಜವಾಬ್ದಾರಿಯನ್ನು ಹೊಂದಿರಬೇಕು ಎಂದು ತಿಳಿಸಿದರು.

ಯುವ ಸಂಸತ್ ಸ್ಪರ್ಧೆಯನ್ನು ಶ್ರೀ ಅಬ್ದುಲ್ ಶಫೀ ಜಿಲ್ಲಾ ಸಂಯೋಜಕರು ಸ್ಮೈಲ್ ಫೌಂಡೇಶನ್ ಯಾದಗಿರಿ, ಶ್ರೀ ಮೌನೇಶ ಪಾಟೀಲ ಜಿಲ್ಲಾ ಲಸಿಕಾ ಸಂಯೋಜಕರು ಆರೋಗ್ಯ ಇಲಾಖೆ ಯಾದಗಿರಿ, ಮೋನಪ್ಪ ಗಚ್ಚಿನಮನಿ ಸರಕಾರಿ ನಿವೃತ್ತ ಸಹಾಯಕ ಪ್ರಾಧ್ಯಾಪಕರು, ರೆವ. ಫಾ. ವಿವೇಕ್ (ಪ್ರಾಂಶುಪಾಲರು, ಪಿಯು ಕಾಲೇಜು, ಯಾದಗಿರಿ) ಹಾಗೂ ಶ್ರೀಮತಿ ಸಂತೋಷಿ ಜೋಶಿ (ಸ್ಥಾಪಕಿ ಮತ್ತು ಅಧ್ಯಕ್ಷರು, ತ್ರಿಶಾ ವೆಲ್ಫೇರ್ ಅಸೋಸಿಯೇಷನ್) ಅವರು ಮೌಲ್ಯಮಾಪನ ಮಾಡಿದರು. ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಸಂಸತ್ತಿನ ಮಾದರಿಯಲ್ಲಿ ಚರ್ಚೆ ನಡೆಸಿ ತಮ್ಮ ವಾಕ್ಚಾತುರ್ಯ, ಆತ್ಮವಿಶ್ವಾಸ ಹಾಗೂ ಸಾಮಾಜಿಕ ಜಾಗೃತಿಯನ್ನು ಪ್ರದರ್ಶಿಸಿದರು. ಕಠಿಣ ಮೌಲ್ಯಮಾಪನದ ನಂತರ ಐದು ಪ್ರತಿಭಾವಂತ ವಿದ್ಯಾರ್ಥಿಗಳನ್ನು ರಾಜ್ಯ ಮಟ್ಟದ ವಿಕಸಿತ ಭಾರತ ಯುವ ಸಂಸತ್‌ಗೆ ಆಯ್ಕೆ ಮಾಡಲಾಯಿತು. ಕಾರ್ಯಕ್ರಮದ ಯಶಸ್ಸಿಗೆ ಓಖಖ ಸ್ವಯಂಸೇವಕರು, ಉಪನ್ಯಾಸಕರು ಹಾಗೂ ಸಂಘಟನಾ ಸಮಿತಿಯವರ ಸಹಕಾರ ಪ್ರಮುಖವಾಗಿತ್ತು. ಯುವ ಸಂಸತ್ ಕಾರ್ಯಕ್ರಮವು ಯುವಜನರಲ್ಲಿ ಪ್ರಜಾಪ್ರಭುತ್ವದ ಅರಿವು ಬೆಳೆಸುವ ಮಹತ್ವದ ವೇದಿಕೆಯಾಗಿ ಪರಿಣಮಿಸಿತು.

# ಶಾಲಾ ಬಸ್‌ಗಳ ವಿಶೇಷ ತಪಾಸಣೆ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯಾದಗಿರಿ ಜಿಲ್ಲೆಯ ಶಾಲಾ ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಪ್ರಾದೇಶಿಕ ಸಾರಿಗೆ ಕಚೇರಿ ವತಿಯಿಂದ ಜಿಲ್ಲೆಯಾದ್ಯಂತ ಶಾಲಾ ಬಸ್‌ಗಳ ವಿಶೇಷ ತಪಾಸಣೆ ನಡೆಸಲಾಗಿದೆ ಎಂದು ಯಾದಗಿರಿ ಪ್ರಾದೇಶಿಕ ಸಾರಿಗೆ ಅಧಿಕಾರಿ ಅವರು ತಿಳಿಸಿದ್ದಾರೆ. ವಾಹನ ಮಾಲೀಕರು ಮೋಟಾರು ವಾಹನ ಕಾಯ್ದೆ 1988 ಕೇಂದ್ರ ಮೋಟಾರು ವಾಹನ ನಿಯಮಗಳು 1989ರ ಮಾನ್ಯ ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳನ್ನು ಶಾಲಾ ಬಸ್‌ಗಳ ದಾಖಲಾತಿಗಳನ್ನು ಪೂರ್ಣವಾಗಿ ಇಟ್ಟಿಕೊಳ್ಳಬೇಕು. ಈ ತಪಾಸಣೆ Motor Vehicles Act And Central Motor Vehicles Rules ಅನ್ವಯ **ಹಾಗೂ ಮಾನ್ಯ** supreme court of india ಮಾರ್ಗಸೂಚಿಗಳ ಪ್ರಕಾರ ಕೈಗೊಳ್ಳಲಾಗಿದೆ. ಈ ವಿಶೇಷ ತಪಾಸಣೆಯಲ್ಲಿ ಒಟ್ಟು 58 ಶಾಲಾ ಬಸ್ ಹಾಗೂ ಶಿಕ್ಷಣ ಸಂಸ್ಥೆಗಳ ವಾಹನಗಳನ್ನು ಪರಿಶೀಲಿಸಲಾಗಿದೆ, ನಿಯಮ ಉಲ್ಲಂಘನೆ ಕಂಡುಬಂದ ವಾಹನಗಳಿಗೆ ಚೆಕ್ ರಿಪೋರ್ಟ್ ಜಾರಿ ಮಾಡಿ ದಂಡ 6,49,100 ರೂ.ಗಳ ವಸೂಲಿಸಲಾಗಿದೆ.

ತಪಾಸಣೆಯಲ್ಲಿ ಕೆಳಕಂಡ ಅಂಶಗಳನ್ನು ವಿಶೇಷವಾಗಿ ಪರಿಶೀಲಿಸಲಾಗಿದೆ, ಮಾನ್ಯ ನೋಂದಣಿ ಪ್ರಮಾಣ ಪತ್ರ ಆರ್.ಸಿ ಕಾರ್ಡ್ ಹೊಂದಿರಬೇಕು, ಮಾನ್ಯ ಪಿಟ್ನೆಸ್ ಪ್ರಮಾಣ ಪತ್ರ, ಮಾನ್ಯ ವಿಮಾ ಪ್ರಮಾಣ ಪತ್ರ, ಮಾನ್ಯ ಪರವಾನಗಿ (ಠಿಜಡಿಟಿಣ), ಮೋಟಾರು ವಾಹನ ತೆರಿಗೆ ಪಾವತಿ ಸ್ಥಿತಿ, ಚಾಲಕರ ಮಾನ್ಯ ಚಾಲನಾ ಪರವಾನಗಿ ಹಾಗೂ ಬ್ಯಾಡ್ಜ್, ವೇಗ ನಿಯಂತ್ರಕ (speed Governor) ಮತ್ತು ಜಿಪಿಎಸ್ ಅಳವಡಿಕೆ, ಅಗ್ನಿಶಾಮಕ ಸಾಧನ, ಪ್ರಥಮ ಚಿಕಿತ್ಸೆ ಪಟ್ಟಿಗೆ ಹಾಗೂ ತುರ್ತು ನಿರ್ಗಮನದ್ವಾರ, ಸ್ಕೂಲ್ ಬಸ್ ಫಲಕ ಮತ್ತು ನಿಯಮಿತ ಬಣ್ಣ ವಿನ್ಯಾಸ, ಪ್ರಾಥಮಿಕ ಶಾಲಾ ಮಕ್ಕಳಿಗಾಗಿ ಸಹಾಯಕ ಸಿಬ್ಬಂದಿ ನೇಮಕ, ಅನುಮತಿತ ಆಸನ ಸಾಮರ್ಥ್ಯ ಹಾಗೂ ಮಕ್ಕಳ ಸುರಕ್ಷಣಾ ನಿಯಮಗಳ ಅನುಸರಣೆ ಮಾನ್ಯ ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳ ಅನ್ವಯ, ಯಾದಗಿರಿ ಜಿಲ್ಲೆಯ ಎಲ್ಲಾ ಶಾಲಾ ನಿರ್ವಹಣಾಧಿಕಾರಿಗಳು ಹಾಗೂ ವಾಹನ ಮಾಲೀಕರು ಮೋಟಾರು ವಾಹನ ಕಾಯ್ದೆ 1988, ಕೇಂದ್ರ ಮೋಟಾರು ವಾಹನ ನಿಯಮಗಳು 1989 ಮತ್ತು ಸಂಯೋಜಿಸಲಾದ ಮಾನ್ಯ ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು, ನಿಯಮ ಉಲ್ಲಂಘನೆ ಮಾಡಿದಲ್ಲಿ ಕಾನೂನು ಕ್ರಮ ಕೈಗೊಳ್ಳಬೇಕು. ಶಾಲಾ ಮಕ್ಕಳ ಸುರಕ್ಷತೆ ಅತ್ಯಂತ ಪ್ರಮುಖವಾದದ್ದು, ಈ ಸಂಬಂಧ ಮುಂದುವರಿದ ಅವಧಿಗಳಲ್ಲಿಯೂ ನಿಯಮಿತ ತಪಾಸಣೆಗಳನ್ನು ನಡೆಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಣ್ಣಗಳ ಹಬ್ಬ ಹೋಳಿ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಪಟ್ಟಣದಲ್ಲಿ ಬಣ್ಣಗಳ ಹಬ್ಬ ಹೋಳಿ ಹುಣ್ಣಿಮೆಯನ್ನು ಅತ್ಯಂತ ಸಡಗರ–ಸಂಭ್ರಮದಿಂದ ಆಚರಿಸಲಾಯಿತು. ಹಿರಿಯರು ಹಾಗೂ ಕಿರಿಯರು ಪರಸ್ಪರ ಬಣ್ಣ ಹಚ್ಚುವ ಮೂಲಕ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.

ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬಣ್ಣದ ಓಕುಳಿ ಆಡುತ್ತಾ ಸಾರ್ವಜನಿಕರು ಹರ್ಷ ವ್ಯಕ್ತಪಡಿಸಿದರು. ಹಿರಿಯ ಉದ್ಯಮಿಗಳಾದ ರಾಜಕುಮಾರ ಶಿವಣಕರ ಹಾಗೂ ಯುವ ಮುಖಂಡರಾದ ಮಹೇಶ ರಾಂಪುರೆ ಅವರು ಪರಸ್ಪರ ಬಣ್ಣ ಹಚ್ಚಿ, ಹಬ್ಬದ ಸಂಭ್ರಮವನ್ನು ಹಂಚಿಕೊಂಡರು.

ಈ ಬಣ್ಣಗಳ ಹಬ್ಬವು ಜನರ ನಡುವೆ ಪ್ರೀತಿ ಮತ್ತು ಸಹೋದರತ್ವವನ್ನು ಹೆಚ್ಚಿಸಲಿ ಎಂದು ಗಣ್ಯರು ಹಾರೈಸಿದರು. ಬಣ್ಣಗಳ ಹಬ್ಬ ಹೋಳಿ, ಕಮಲನಗರದ ಜನರಲ್ಲಿ ಹೊಸ ಕಳೆ ತಂದಿತು.

# ರೈತ ಸಾಲ ಮನ್ನಾ ಮಾಡಿ ಕೃಷಿಗೆ ಆದ್ಯತೆ ಕೊಡಿ : ಕುಕನೂರು

• ಮಲ್ಲಮ್ಮ ನುಡಿವಾರ್ತೆ ಕೊಪ್ಪಳ



ರಾಜ್ಯದ ಮುಖ್ಯಮಂತ್ರಿಗಳು ಈ ಬಾರಿಯ ಮುಂಗಡಪತ್ರಮಂಡನೆಯಲ್ಲಿ ರೈತರ ಸಾಲ ಸಂಪೂರ್ಣ ಮನ್ನ ಮಾಡಿ ಕೃಷಿಗೆ ಆದ್ಯತೆ ನಿಧಿ ತಾವು ರೈತಪರ ಎಂಬುದನ್ನು ಸಾಬೀತುಪಡಿಸಬೇಕು ಎಂದು ಭಾರತೀಯ ಕ್ರಾಂತಿಕಾರಿ ಕಿಸಾನ್ ಸೇನಾ ಸಂಸ್ಥಾಪಕ ರಾಷ್ಟ್ರೀಯ ಅಧ್ಯಕ್ಷ ಎಂ ಎನ್ ಕುಕನೂರು ಹೇಳಿದರು

ನಗರದಲ್ಲಿ ಜಿಲ್ಲಾ ಘಟಕ ಮತ್ತು ಯಲಬುರ್ಗಾ ತಾಲೂಕಿನ ಹಾಗೂ ಗ್ರಾಮ ಘಟಕದ ನೂತನ ಪದಾಧಿಕಾರಿಗಳ ಆಯ್ಕೆ ಸಂದರ್ಭದಲ್ಲಿ ಎಂ ಎಂ ಕುಕುನೂರು ಮಾತನಾಡುತ್ತಾ ರೈತರ ಸಾಲ ಸಂಪೂರ್ಣ ಮನ್ನಾ ಮಾಡಿ, ಕೃಷಿಗೆ ಆದ್ಯತೆ ನೀಡಬೇಕು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೈತರ ಕುರಿತು ಮಾತನಾಡುವಾಗ ತಾವು ರೈತನಾಯಕ ಪ್ರೊ.ನಂಜುಂಡಸ್ವಾಮಿ ಅವರ ಶಿಷ್ಯ, ನಾನೂ ರೈತಸಂಘದಲ್ಲಿ ಇದ್ದೆ, ನನಗೂ ರೈತರ ಕಷ್ಟ ಗೊತ್ತು ತಾವು ರೈತಪರ, ರೈತಪರ ಎಂದು ಎಲ್ಲಾ ವೇದಿಕೆಗಳಲ್ಲಿ ಹೇಳಿಕೊಳ್ಳುತ್ತಿರುವುದು ಸರಿ, ಆದರೇ, 2026–27ನೇ ಸಾಲಿನ ಬಜೆಟ್‌ನಲ್ಲಿ ರಾಜ್ಯದ ರೈತರ ಸಂಪೂರ್ಣ ಸಾಲವನ್ನು ಮನ್ನಾ ಮಾಡುವ ಮೂಲಕ ತಾವು ನಿಜವಾಗಿಯೂ ರೈತಪರ ಎಂದು ಸಾಬೀತು ಮಾಡಬೇಕು.

ಒಂದು ಕಡೆ ಅತೀವೃಷ್ಟಿ, ಮತ್ತೊಂದು ಕಡೆ ಅನಾವೃಷ್ಟಿ, ಜತೆಗೆ ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಲೆ ಸಿಗದೆ, ರೈತರು ಸಾಕಷ್ಟು ಸಂಕಷ್ಟದಲ್ಲಿ ಇದ್ದು, ಸರ್ಕಾರ ರಾಜ್ಯದ ರೈತರ ಸಂಪೂರ್ಣ ಸಾಲಮನ್ನಾ ಮಾಡುವುದರಿಂದ ಅವರು ಚೇತರಿಸಿಕೊಳ್ಳಲು ಸಾಧ್ಯವಾಗುತ್ತದೆ. ಈ ಕಾರಣದಿಂದ 2026–27ನೇ ಸಾಲಿನ ಬಜೆಟ್‌ನಲ್ಲಿ ರೈತರ ಸಾಲ ಮನ್ನಾ ಘೋಷಣೆ ಮಾಡಬೇಕು.

ಹೊಸ ಸಾಲಗಳಿಗೆ ಪ್ರತಿ ಎಕರೆಗೇ 1 ಲಕ್ಷ ರೂಪಾಯಿ ಶೂನ್ಯ ಬಡ್ಡಿದರವನ್ನು ಜಾರಿಗೊಳಿಸಬೇಕು. ಇದರಿಂದ ರೈತರ ಆತ್ಮಹತ್ಯೆಗಳನ್ನು ತಡೆಯುವಂತಾಗುತ್ತದೆ. ಮತ್ತು ಆರ್ಥಿಕ ಸ್ಥಿರತೆ ಸಾಧ್ಯವಾಗುತ್ತದೆ.

ಕರ್ನಾಟಕದ ಲಕ್ಷಾಂತರ ಬಡ ರೈತರು ನಮೂನೆ 50, 53 ಮತ್ತು 57ರ ಅಡಿಯಲ್ಲಿ ಬಗರ್ ಹುಕುಂ ಭೂಮಿ ಸಕ್ರಮಗೊಳಿಸಲು ಅರ್ಜಿ ಸಲ್ಲಿಸಿ ವರ್ಷಗಳಿಂದ ಕಾಯುತ್ತಿದ್ದಾರೆ. ಅನೇಕ ವರ್ಷಗಳಿಂದ ಅರ್ಹರಿಗೆ ನ್ಯಾಯ ದೊರಕದೇ ಇರುವುದರಿಂದ, ಮುಂದಿನ ಬಜೆಟ್‌ನಲ್ಲಿ ಈ ಅರ್ಜಿಗಳ ಶೀಘ್ರ ವಿಲೇವಾರಿ, ಅರ್ಹ ರೈತರಿಗೆ ಭೂ ಹಕ್ಕು ಮಂಜೂರಾತಿ ಮತ್ತು ಬಗರ್ ಹುಕುಂ ಡಿಜಿಟಲ್ ಪ್ರಕ್ರಿಯೆಗೆ ವಿಶೇಷ ನಿಧಿ ಮತ್ತು ಕಟ್ಟುನಿಟ್ಟಿನ ನಿರ್ದೇಶನಗಳನ್ನು ಒದಗಿಸಬೇಕು. ಇದರಿಂದ ರಾಜ್ಯದ ರೈತರ ಜೀವನೋಪಾಯ ಸುಧಾರಿಸಿ, ರಾಜ್ಯದ ಕೃಷಿ ಅಭಿವೃದ್ಧಿಗೆ ದೊಡ್ಡ ಕೊಡುಗೆ ನೀಡಿದಂತಾಗುತ್ತದೆ.

ಸರ್ಕಾರ ಬಜೆಟ್‌ನಲ್ಲಿ ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಬೇಕು, ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಮೇಕೆದಾಟು, ಕಳಸ ಬಂಡೋರಿ, ಸಿಂಗಟಲೂರು ಏತನೀರಾವರಿ, ಕೃಷ್ಣ ಎಡದಂಡೆ ಮತ್ತು ಬಲದಂಡೆ ಕಾಲುವೆ ಯೋಜನೆ, ಯಲಬುರ್ಗಾ ಕುಕನೂರ್ ಮತ್ತು ಕುಷ್ಟಗಿ ತಾಲೂಕು ಗಳಿಗೆ ಸಮಗ್ರ ನೀರಾವರಿ, ಇನ್ನು ಮುಂತಾದ ರಾಜ್ಯದಲ್ಲಿ ಯೋಜನೆಯನ್ನು ಜಾರಿ ಮಾಡಬೇಕು.

ಎಲ್ಲಾ ಬೆಳೆಗಳಿಗೆ ಎಂಎಸ್‌ಪಿ ಜಾರಿ ಮಾಡಿ, ಸರ್ಕಾರಿ ಖರೀದಿ ಕೇಂದ್ರಗಳನ್ನು ಹೆಚ್ಚಿಸಬೇಕು. ಅಲ್ಲದೆ, ರೈತರಿಗೆ ನೇರ ಮಾರುಕಟ್ಟೆ ಕಲ್ಪಿಸಬೇಕು.

ರಾಜ್ಯದಲ್ಲಿ ಪ್ರತಿ ತಾಲೂಕ ಕೇಂದ್ರ ಮತ್ತು ಹೋಬಳಿ ಕೇಂದ್ರಗಳಲ್ಲಿ ರೈತ ಭವನವನ್ನು ನಿರ್ಮಿಸಬೇಕು ಎಂದರು. ರಾಷ್ಟಮಟ್ಟದಲ್ಲಿ ಇದೆ 19 ರಿಂದ ಹೋರಾಟದ ಬಗ್ಗೆ ಚರ್ಚೆ ಮಾಡಲಾಯಿತು.

ಕೇಂದ್ರ ಸರ್ಕಾರದಿಂದ ಜಾರಿ ಆಗಿರುವ ಮಾನಂತಿಕ ಕೃಷಿ ಕಾಯ್ದೆ ಎಪಿಎಂಸಿ ಕಾಯ್ದೆ ಖಾಸಗಿಕರಣ ವಿರುದ್ಧ ರಾಷ್ಟಮಟ್ಟದಲ್ಲಿ ಇದೇ ಮಾರ್ಚ್ ತಿಂಗಳಿನಲ್ಲಿ ಹೋರಾಟ. ನೆನೆಗುದಿಗೆ ಬಿದ್ದಿರುವಂತಹ ಏತ ನೀರಾವರಿ ಯೋಜನೆ ಕೆರೆ ತುಂಬವ ಯೋಜನೆ ಇದರ ಬಗ್ಗೆ ತಾಲೂಕು ರಾಜ್ಯ ಜಿಲ್ಲೆ ಎಲ್ಲಾ ಕೇಂದ್ರದಲ್ಲಿ ಹೋರಾಟ ಮಾಡಲಾಗುವುದು.

ರಾಜ್ಯ ಸರ್ಕಾರದ ಬಜೆಟಿನಲ್ಲಿ ರೈತರ ಸಂಪೂರ್ಣ ಸಾಲಮನ್ನಾ, ಅಸಲೀಕರಣದ ವಿರುದ್ಧ ಹೋರಾಟ ಯುವಕರಿಗೆ ಉದ್ಯೋಗ ಸೃಷ್ಟಿಸುವುದು, ರಾಜ್ಯ ಸರ್ಕಾರ ಆದೇಶ ಮಾಡುವ ಕುರಿತು. ರೈತರ ಬೆಳೆದ ಎಲ್ಲಾ ಬೆಳೆಗಳಿಗೆ ಪ್ರೋತ್ಸಾಹಧನದ ಜೊತೆಗೆ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಬೇಕು. ಸ್ವಾಮಿನಾಥನ ವರದಿ ಜಾರಿ ಆಗಬೇಕು. ರಾಜ್ಯದಲ್ಲಿ ಎಲ್ಲಾ ತಾಲೂಕು ಜಿಲ್ಲಾ ಕೇಂದ್ರಗಳಲ್ಲಿ ಶಾಶ್ವತ ನೀರಾವರಿ ಕಲ್ಪಿಸಬೇಕು. ಸಾವಯವ ಕೃಷಿಗೆ ಹೆಚ್ಚು ಹೊತ್ತನ್ನು ನೀಡುವುದು ಇನ್ನು ಮುಂತಾದ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ರಾಷ್ಟ್ರೀಯ ಅಧ್ಯಕ್ಷರು ಎಂ ಎನ್ ಕುಕನೂರ್, ಜಿಲ್ಲಾ ಅಧ್ಯಕ್ಷರಾದ ಫಿಡ್ಡ ನಗೌಡ, ವಿಜಯಕುಮಾರ್, ರಾಜೇಶ್ ಸಣ್ಣಕ್ಕಿ, ದೊಡ್ಡಪ್ಪ ಬಾವಿಕಟ್ಟಿ, ಮಾಜಿದ್ ಖಾನ್ ಮುಲ್ಲಾ, ದುರ್ಗಪ್ಪ ಎಚ್ ಮಾದಾರ್, ಶರಣಪ್ಪ ಚನ್ನಪ್ಪನಹಳ್ಳಿ, ಮರಿಯಪ್ಪ ಬಾವಿಮನಿ, ರವಿಚಂದ್ರನ್ ರೇವಡಿ, ನೀಲಪ್ಪ ಮೇಟಿ, ದ್ಯಾಮಣ್ಣ ಮುರುಡಿ, ಆನಂದ್, ಹೇಮಣ್ಣ ಕಂಬಳಿ, ಶರಣಯ್ಯ, ಪ್ರಜ್ವಲ್, ಭೀಮಪ್ಪ, ಕೃಷ್ಣಪ್ಪ, ಯಲ್ಲಪ್ಪ, ಶರಣಪ್ಪ ಪೊಲೀಸ್ ಪಾಟೀಲ್, ಶರಣಪ್ಪ, ಆನಂದ್ ಕಂಬಳಿ, ಶಿವು ಕೂನಸಾಗರ, ಶರಣಪ್ಪ ಹಿರೇಕೊಪ್ಪ, ಖಾಜಾವಲಿ ಮಲಕ್ ಸಮುದ್ರ, ಮೇಘರಾಜ್ ಕೋನ ಸಾಗರ್, ಇನ್ನು ಮುಂತಾದ ಸದಸ್ಯರು ಉಪಸ್ಥಿತರಿದ್ದರು.

# ಯೋಗಿನಾರಾಯಣ ಯತಿಂದ್ರ ಜಯಂತಿ




ಬಳ್ಳಾರಿ / ಕಂಪ್ಲಿ : ಯೋಗಿನಾರಾಯಣ ಯತಿಂದ್ರ ಪ್ರಸಿದ್ದ ಸಂತ, ಕವಿ, ಕನ್ನಡ ತೆಲುಗು ಭಾಷೆಗಳಲ್ಲಿ ಕೀರ್ತನೆ ತತ್ವಜ್ಞಾನದ ಕೃತಿಗಳನ್ನು ರಚಿಸಿದ ಜೊತೆಗೆ ಸಮಾಜ ಸುಧಾರಕರಾಗಿದ್ದಾರೆ ಎಂದು ತಹಶೀಲ್ದಾರ್ ಜೂಗಲ್ ಮಂಜುನಾಥ ನ್ಯಾಯ ಹೇಳಿದರು. ಪಟ್ಟಣದ ತಹಶೀಲ್ದಾರ್ ಕಛೇರಿಯ ಸಭಾಂಗಣದಲ್ಲಿ ಆಯೋಜಿಸಿದ್ದ ಯೋಗಿನಾರಾಯಣ ಯತಿಂದ್ರರವರ ಜಯಂತ್ಯೋತ್ಸವದಲ್ಲಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದ ನಂತರ ಮಾತನಾಡಿ ಯೋಗಿನಾರಾಯಣ ರವರ ತತ್ವಾದರ್ಶಗಳು ನಮ್ಮ ನಿತ್ಯದ ಬದುಕಿಗೆ ಮಾರ್ಗದರ್ಶಕಗಳಾಗಿವೆ ಅವುಗಳನ್ನು ಅಳವಡಿಸಿಕೊಳ್ಳಿ ಎಂದರು. ಬಲಿಜ ಸಮಾಜದ ಅಧ್ಯಕ್ಷ ಡಿ.ಶ್ರೀನಿವಾಸ ಮಾತನಾಡಿ ಶೈಕ್ಷಣಿಕ ಸಾಮಾಜಿಕ ಆರ್ಥಿಕವಾಗಿ ಹಿಂದುಳಿದ ಸಮುದಾಯವಾಗಿದ್ದ ಸರ್ಕಾರ ನಮ್ಮ ಸಮುದಾಯಕ್ಕೆ ಸೌಲಭ್ಯ ನೀಡಲು ಮುಂದಾಗಬೇಕು ಎಂದರು. ಬಲಿಜ ಸಮಾಜದ ಉಪಾಧ್ಯಕ್ಷ ಎಂ ಮಲ್ಲಿಕಾರ್ಜುನ, ಖಜಾಂಚಿ ಕವಿತಾಳ ಶಿವಕುಮಾರ, ಕಾರ್ಯದರ್ಶಿ ತಿರುಮಲ, ಉಪ ತಹಸಿಲ್ದಾರ್ ಬಿ.ರವೀಂದ್ರಕುಮಾರ್, ಶೀರೆಸ್ತದಾರ ಪಂಪಾಪತಿ,ಟಿ. ಎಂ. ಬಸವರಾಜ, ರಮೇಶ ಎಫ್ ಡಿ.ಸಿ ಮಾಲತೇಶ ಮುಖಂಡರಾದ ವೆಂಕೋಬಣ್ಣ, ಪ್ರಕಾಶ, ಲೋಕೇಶ, ಯಮನೂರಪ್ಪ, ಇಂಗಳಗಿ ನಾರಾಯಣಪ್ಪ, ಸುನಂದಮ್ಮ, ನಾಗಭೂಷಣ ಹಾಗೂ ಸಮಾಜದವರು ಉಪಸ್ಥಿತರಿದ್ದರು.

# ಕೋತಿ ಕಾಟಕ್ಕೆ ಬೇಸತ್ತ ಸಾರ್ವಜನಿಕರು

• ಮಲ್ಲಮ್ಮ ನುಡಿ ವಾರ್ತೆ ಮುದಗಲ್



ಕಿಲ್ಲಾ ಸೇರಿದಂತೆ ವಿವಿಧ ಬಡಾವಣೆಗಳಲ್ಲಿ ಸಾರ್ವಜನಿಕರು ಮಂಗಗಳ ಕಾಟಕ್ಕೆ ಬೇಸತ್ತು ಹೋಗಿದ್ದಾರೆ.

ಪಟ್ಟಣದ ಐತಿಹಾಸಿಕ ಕೋಟೆ ಒಳಭಾಗದ ನಿವಾಸಿಗಳ ಮೇಲೆ ಮಂಗಗಳು ಮೈಮೇಲೆ ಎರಗಿ ಕಚ್ಚಿ ಗಾಯಗೊಳಿಸಿವೆ ಇದರಿಂದ ಜನ ಭಯಭೀತರಾದ ಸಾರ್ವಜನಿಕರು ಮನೆಯಿಂದ ಹೊರಬರಲು ಹಿಂದೇಟು ಹಾಕುತಿದ್ದಾರೆ. ಸಾರ್ವಜನಿಕರ ನಿವಾಸದ ಸುತ್ತಲೂ ಕೋಟೆ ಗೋಡೆ ಕವಚದೊಂದಿಗೆ ಗುಡ್ಡಗಾಡು ಪ್ರದೇಶವಾಗಿರುವುದರಿಂದ, ಸಾಕಷ್ಟು ಮಂಗಗಳು ವಾಸಿಸುವ ತಾಣವಾಗಿದೆ. ಕಳೆದ ಒಂದು ವಾರದಿಂದ ಕಿಲ್ಲಾ ನಿವಾಸಿಗಳಾದ ಸಜ್ಜನ ಕುಟುಂಬಸ್ಥರಾದ ಭಾಗ್ಯಶ್ರೀಯವರನ್ನು ಮಂಗ ಕಚ್ಚಿ ಗಾಯಗೊಳಿಸಿದೆ. ಹಾಗೂ ಮನೆಯ ಹಿರಿಯರಾದ ಶರಣಮ್ಮ ಹಾಗೂ ಅವರ ಸೊಸೆ, ಮೊಮ್ಮಕ್ಕಳಿಗೆ ಕೋತಿ ಅಟ್ಟಾಡಿಸಿದೆ. ಇದರಿಂದ ಕೆಲವರಿಗೆ ಮನೆಯಿಂದ ಆಚೆ ಬರದ ಸ್ಥಿತಿ ಉಂಟಾಗಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ಹಾಗೂ ಪಟ್ಟಣದ ವಿವಿಧ ಬಡಾವಣೆಗಳಲ್ಲಿ ಕೋತಿಗಳು ಕೈಗೆ ಸಿಕ್ಕಿದ್ದು ದೋಚುತ್ತಿವೆ. ಮತ್ತು ಮನೆಗಳಲ್ಲಿ ನುಗ್ಗಿ ಕೈಗೆ ಸಿಕ್ಕ ವಸ್ತು ಹಿಡಿದು ಸಾರ್ವಜನಿಕರನ್ನು ಭಯಭೀತರನ್ನಾಗಿಸಿವೆ. ಕೆಲವು ಮಕ್ಕಳ ಮೈ ಚುರಿವೆ ಎಂದು ಪಟ್ಟಣದ ಸಾರ್ವಜನಿಕರ ಮಾತಾಗಿದೆ.

(ಬೇಸಿಗೆ ಹೆಚ್ಚುತ್ತಿರುವುದರಿಂದ ಮನೆಯಲ್ಲಿರುವಂತ ವಸ್ತುಗಳನ್ನು ಕೋತಿಗಳು ಹಾಳು ಮಾಡುತ್ತಿವೆ. ಅವುಗಳಿಗೆ ತಿನ್ನಲು ಆಹಾರ ನೀರು ಸಿಗುತ್ತಿಲ್ಲ, ಮಕ್ಕಳ ಕೈಯಲ್ಲಿರುವ ತಿನಿಸು ವಸ್ತು ಕಸಿದುಕೊಳ್ಳುತ್ತಿವೆ. ಈ ಹಿಂದೆ ಕೆಲವು ಮಕ್ಕಳಿಗೆ ಕಚ್ಚಿದ ಘಟನೆಗಳು ಸಂಭವಿಸಿವೆ ಕೋತಿಗಳ ಕಾಟ ತಪ್ಪಲು ಅರಣ್ಯ ಅಧಿಕಾರಿಗಳು ಕೋತಿಗಳನ್ನು ಸಂರಕ್ಷಿತ ಪ್ರದೇಶದಲ್ಲಿ ಬಿಡುಬೇಕು; ಎಸ್ಡಿಪೈ ಗ್ರಾಮಾಂತರ ಜಿಲ್ಲಾಧ್ಯಕ್ಷ ಎಂ.ಡಿ ರಫೀಕ್ ಖಾಜಿ ಮಂಗಗಳ ಹಾವಳಿಗೆ ನಿಗಾವಹಿಸಿ ಸಾರ್ವಜನಿಕರ ರಕ್ಷಣೆಗೆ ಮುಂದಾಗಬೇಕು ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು. ಅವುಗಳನ್ನು ಅರಣ್ಯ ಪ್ರದೇಶದಲ್ಲಿ ಬಿಟ್ಟು ಪ್ರಾಣಿಗಳ ಸಂಕುಲತೆ ನಮ್ಮೆಲ್ಲರ ಹೊಣೆ : ಬಸವರಾಜ ಬಂಕದ ಮನೆ




ಹಳಿಯಾಳ ಪಟ್ಟಣದ ತಾಲೂಕಾ ಆಸ್ಪತ್ರೆಯಲ್ಲಿ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಜರುಗಿದ ಆರೋಗ್ಯ ರಕ್ಷಾ ಸಮಿತಿ ಸಭೆಯಲ್ಲಿ ಆಸ್ಪತ್ರೆಯ ಸೌಲಭ್ಯಗಳು,ಒಳ ಹಾಗೂ ಹೊರ ರೋಗಿಗಳ ಸೇವಾ ಗುಣಮಟ್ಟ,ಔಷಧಿಗಳ ಲಭ್ಯತೆ ಹಾಗೂ ಮೂಲಸೌಕರ್ಯ ಸೇರಿದಂತೆ ವಿವಿಧ ವಿಷಯಗಳ ಕುರಿತು ಆರೋಗ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಆಸ್ಪತ್ರೆಯಲ್ಲಿ ಸಾರ್ವಜನಿಕರಿಗೆ ಇನ್ನಷ್ಟು ಪರಿಣಾಮಕಾರಿ ಮತ್ತು ತ್ವರಿತ ಆರೋಗ್ಯ ಸೇವೆಗಳನ್ನು ಒದಗಿಸುವ ಬಗ್ಗೆ ಶಾಸಕರು ಸೂಕ್ತ ಮಾರ್ಗದರ್ಶನ ನೀಡಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.ಈ ಸಭೆಯಲ್ಲಿ ತಹಸೀಲ್ದಾರ್,ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು,ತಾಲೂಕು ವೈದ್ಯಾಧಿಕಾರಿಗಳು,ಆರೋಗ್ಯ ರಕ್ಷಾ ಸಮಿತಿ ಸದಸ್ಯರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಮಸ್ಕಿ : ಕನಕಗಿರಿ , ಮೆದಿಕಿನಾಳ ಸುವರ್ಣಗಿರಿ ವಿರಕ್ತಮಠ ಶ್ರೀಗಳಾದ ಡಾಕ್ಟರ್ ಶ್ರೀ ಚೆನ್ನ ಮಲ್ಲಿಕಾರ್ಜುನ ಶ್ರೀ ಚನ್ನಮಲ್ಲ ಶಿವಯೋಗಿ ಶ್ರೀಗಳು ಮಲ್ಲಮ್ಮ ನುಡಿ ಕನ್ನಡ ಪ್ರಾದೇಶಿಕ ದಿನಪತ್ರಿಕೆ ರಾಜ್ಯಾದ್ಯಂತ ಪ್ರಕಟವಾಗುತ್ತಿದ್ದು ಓದಿ ಪತ್ರಿಕೆಗೆ ಹಾಗೂ ಪತ್ರಿಕಾ ಎಲ್ಲಾ ಬಳಗದವರಿಗೆ ಶುಭ ಕೋರಿ ಆಶೀರ್ವದಿಸಿದರು.

# ಬಣ್ಣದಂತೆ ಜೀವನ ಕಲರ್ ಫುಲ್ ಆಗಿರಲಿ: ಶಿಲ್ಪಾ ಪಟ್ಟೇದ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಕುಷ್ಟಗಿ ಪ್ರತಿಯೊಬ್ಬರ ಜೀವನದಲ್ಲಿ ಕಷ್ಟ ಸು:ಖ ಎನ್ನುವದು ಇದ್ದೇ ಇರುತ್ತದೆ ಅದರಂತೆ ಎಲ್ಲಾ ನೋವುಗಳನ್ನು ಮರೆತು ಸುಖದಿಂದ ಜೀವನ ಸಾಗಿಸಲು ಈ ಹಬ್ಬ ಮಾದರಿಯಾಗಿದೆ ಎಂದು ಶಿಕ್ಷಕಿ ಶಿಲ್ಪಾ ಪಟ್ಟೇದ ಹೇಳಿದರು.ತಾಲೂಕಿನ ಬಿಜಕಲ್ ಗ್ರಾಮದ ಸರಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರು ಹಾಗೂ ಮಕ್ಕಳೊಂದಿಗೆ ಹೋಳಿ ಹಬ್ಬ ಆಚರಿಸಿ ಅವರು ಮಾತನಾಡಿದರು.

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಅನೇಕ ಹಬ್ಬಗಳನ್ನ ಆಚರಣೆ ಮಾಡುತ್ತೇವೆ ಅದರಲ್ಲಿ ಅನೇಕ ಹಬ್ಬಗಳು ನಮ್ಮ ಸಂಪ್ರದಾಯ ಹಾಗೂ ನಮ್ಮ ಪೂರ್ವಜರ ಆಚರಣೆಗಳ ಬಗ್ಗೆ ವಿವರವಾಗಿ ತಿಳಿಯಲ್ಪಡುತ್ತವೆ ಹಾಗೂ ನಮ್ಮ ಕಲೆ, ಸಂಸ್ಕೃತಿ, ಹಾಗೂ ಸಂಪ್ರದಾಯಗಳ ಬಗ್ಗೆ ಇಂದಿನ ಯುವ ಪೀಳಿಗೆಗೆ ತಿಳಿಸುವ ಹಾಗೂ ಅವುಗಳನ್ನು ಮುಂದುವರೆಸಿಕೊಂಡು ಹೋಗುವ ಜವಾಬ್ದಾರಿ ನಮ್ಮ ಮೇಲಿದೆ ಆದ್ದರಿಂದ ಎಲ್ಲರೂ ನಮ್ಮ ದೇಶದ ಎಲ್ಲಾ ಹಬ್ಬಗಳ ಹಾಗೂ ದೇಶಾಭೀಮಾನ ಬೇಳೆಸಿಕೊಂಡು ಮುಂದಿನ ಪೀಳಿಗೆಗೆ ನಮ್ಮ ಕೊಡುಗೆ ನೀಡುವದು ಅವಶ್ಯಕವಾಗಿದೆ ಎಂದರು.ನಂತರ ಶಾಲಾ ಆವರಣದಲ್ಲಿ ಮಕ್ಕಳಿಗೆ ಹೋಳಿ ಹಬ್ಬದ ವಿಶೇಷತೆ ಹಾಗೂ ಅದರ ಮಹತ್ವವನ್ನು ತಿಳಿಸಿಕೊಟ್ಟರು.

ಈ ಸಂದರ್ಭದಲ್ಲಿ ಶಿಕ್ಷಕಿಯರಾದ ಲತಾ ಹರಳಿಕಟ್ಟಿ, ಸಂಗೀತಾ, ಮುತ್ತಮ್ಮ,ವಿಜಯಲಕ್ಷ್ಮಿ,ಸೇರಿದಂತೆ ಇನ್ನಿತರ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

# ರಾಷ್ಟ್ರ ಮಟ್ಟಕ್ಕೆ ಆಯ್ಕೆ ವಿದ್ಯಾಶ್ರೀ

• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ



ಪಟ್ಟಣದ ಸಮೀಪ ಇರುವ ಮಾಲಹಳ್ಳಿ ಗ್ರಾಮದ ರೈತ ಸಾಹೇಬಗೌಡ ಪೋಲೀಸ್ ಪಾಟೀಲ್ ಇವರ ಸುಪುತ್ರಿ ವಿದ್ಯಾಶ್ರೀ ಪಾಟೀಲ್ ವಿಜಯಪುರದ ಎಕ್ಸಲೆಂಟ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ 8 ನೇ ತರಗತಿ ಓದುತ್ತಿದ್ದ, ಇತ್ತೀಚೆಗೆ ಉತ್ಕರ್ಷ ಯೋಗಾ ಸ್ಟಡಿ ರಿಸರ್ಚ್ ಸೆಂಟರ್ ವತಿಯಿಂದ ಬೆಳಗಾವಿ ಜಿಲ್ಲೆಯ ಅಥಣಿಯಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಯೋಗ ಚಾಂಪಿಯನ್ ಶಿಪ್ ನಲ್ಲಿ ಭಾಗವಹಿಸಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿಯ ಸಾಧನೆಗೆ ಹಿರೇಮಠದ ಪೀಠಾಧಿಪತಿ ಷ ಬ್ರ ಶ್ರೀ ಚನ್ನಬಸವ ಶಿವಾಚಾರ್ಯರು, ಉಪನ್ಯಾಸಕ ಡಾ ಯಂಕನಗೌಡ ಪಾಟೀಲ್, ಪತ್ರಕರ್ತ ಸಾಹಿತಿ ವೀರಣ್ಣ ಕಲಕೇರಿ, ಶಿಕ್ಷಕ ಸಾಹಿತಿ ಶರಣಯ್ಯ ಹಾಗೂ ಶಾಲಾ ಆಡಳಿತ ಮಂಡಳಿಯ ಸದಸ್ಯರು, ಮುಖ್ಯ ಶಿಕ್ಷಕರು, ಸಹಶಿಕ್ಷಕರು, ಯೋಗ ಶಿಕ್ಷಕರು, ವಿದ್ಯಾರ್ಥಿಗಳು ಸೇರಿದಂತೆ ಕುಟುಂಬ ಸದಸ್ಯರು, ಗ್ರಾಮಸ್ಥರು ಅಭಿನಂದನೆ ಸಲ್ಲಿಸಿ ಹರ್ಷ ವ್ಯಕ್ತಪಡಿಸಿದ್ದಾರೆ.

# ಅದ್ದೂರಿಯಾಗಿ ನೆರವೇರಿದ ರಂಗಿನಾಟ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ನಗರದಲ್ಲಿ ಕಳೆದ ವರ್ಷದಂತೆ ಈ ಬಾರಿಯೂ ಸಹ ಎರಡನೇ ಬಾರಿಗೆ ಜಿಲ್ಲಾ ಅಥ್ಲೆಟಿಕ್ ಸಂಸ್ಥೆ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ತಾಲ್ಲೂಕು ಕ್ರೀಡಾಂಗಣದಲ್ಲಿ ಕೊಪ್ಪಳ ಹೋಳಿ ಉತ್ಸವ ಹಮ್ಮಿಕೊಂಡಿತ್ತು.ಕಣ್ಣು ಹಾಯಿಸಿದಷ್ಟೂ ದೂರ ಜನವೋ ಜನ. ಒಂದೆಡೆ ಯುವಕರ ತಂಡ, ಮತ್ತೊಂದೆಡೆ ಯುವತಿಯರ ತಂಡ, ಕಿವಿಗಡಚಿಕ್ಕುವ ಡಿ.ಜೆ. ಅಬ್ಬರದ ಸದ್ದಿನ ನಡುವೆ ಸುರಿಯುತ್ತಿದ್ದ ರೇನ್ ಡ್ಯಾನ್ಸ್‌ನಲ್ಲಿ ಕುಣಿತದ ಸಂಭ್ರಮ ಕಂಡುಬಂದಿತು. ಸಂಸದ ಕೆ.ರಾಜಶೇಖರ ಹಿಟ್ನಾಳ, ಶಾಸಕ ಕೆ.ರಾಘವೇಂದ್ರ ಹಿಟ್ನಾಳ, ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶ್ರೀನಿವಾಸ ಗುಪ್ತಾ, ಮಾಜಿ ಸಂಸದ ಸಂಗಣ್ಣ ಕರಡಿ, ಮಾಜಿ ಶಾಸಕ ಬಸವರಾಜ ಹಿಟ್ನಾಳ ಸೇರಿದಂತೆ ಅನೇಕರು ಬಣ್ಣದ ಸಡಗರದಲ್ಲಿ ಭಾಗಿಯಾದರು. ಅಭಿಮಾನಿಗಳು ಶಾಸಕ ಹಿಟ್ನಾಳ ಹಾಗೂ ಸಂಸದ ರಾಜಶೇಖರ ಅವರನ್ನು ಹೆಗಲ ಮೇಲೆ ಹೊತ್ತುಕೊಂಡು

ಕುಣಿಯಲಾಯಿತು ಇತ್ತ ಕಡೆ ಸಂಸದರ ಶ್ರೀಮತಿ ರಶ್ಮಿ ಹಿಟ್ನಾಳ ಡಿಜೆ ಸೌಂಡಿಗೆ ಹೆಜ್ಜೆ ಹಾಕಿ ಸಂಭ್ರಮಿಸಿದರು.

ಜನರಿಗೆ ಸಂಘಟಕರೇ ಬಣ್ಣ ಕೊಟ್ಟು, ಕೃತಕ ಮಳೆಯ ವ್ಯವಸ್ಥೆ ಮಾಡಿ, ಪಾನೀಯ ಹಾಗೂ ಊಟದ ವ್ಯವಸ್ಥೆಯನ್ನೂ ಮಾಡಿದ್ದರು. ಹಿಲಾಗಿ ಜಿಲ್ಲಾ ಕೇಂದ್ರದಲ್ಲಿ ಈ ಬಾರಿಯೂ ಹೋಳಿ ಹಬ್ಬದ ಪ್ರಮುಖ ಆಕರ್ಷಣೆಯ ಕೇಂದ್ರವಾಗಿ ಬದಲಾಯಿತು. ಕಾಮನಬಿಲ್ಲಿನ ಬಣ್ಣಗಳ ಹಾಗೆ ತರಹೇವಾರಿ ಬಟ್ಟೆಗಳಿಂದ ಹೋಳಿ ಆಡುವ ಪ್ರದೇಶವನ್ನು ಅಲಂಕರಿಸಲಾಗಿತ್ತು. ದೊಡ್ಡ ದೊಡ್ಡ ಕೊಳವೆಗಳಲ್ಲಿ ಬಣ್ಣದ ನೀರನ್ನು ತುಂಬ ಜನರಿಗೆ ಸಿಡಿಸಲಾಯಿತು.

ಅನೇಕ ಯುವಕರು ತಮ್ಮ ಗೆಳೆಯರ ಹೆಗಲ ಮೇಲೆ ಕುಳಿತು ಅವರತ್ತಲೇ ಬಣ್ಣದ ಹೊಗೆ ಸಿಡಿಸಿ ಮತ್ತಷ್ಟು ಹುಮ್ಮಸ್ಸು ತುಂಬುತ್ತಿದ್ದರು. ಪುಂಡಾಟಕ ಪ್ರದರ್ಶಿಸಿದವರ ಮೇಲೆ ಪೊಲೀಸರು ಚಾಟಿ ಬೀಸಿದರು. ಒಟ್ಟಾರೆ ಕೊಪ್ಪಳ ಜಿಲ್ಲೆಯಲ್ಲಿ ಸಂಭ್ರಮದಿಂದ ಹೋಳಿ ರಂಗಿನಾಟವನ್ನು ಆಚರಣೆ ಮಾಡಲಾಯಿತು.

# ಮಕ್ಕಳ ಕಲಿಕೆ ಪರಿಶೀಲನೆ : ಬಿಇಒ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

:ಲಿಂಗಸುಗೂರು ಕ್ಷೇತ್ರಶಿಕ್ಷಣಾಧಿಕಾರಿ ಸುಜಾತ ಹೂನೂರು ಪಟ್ಟಣ ಸಮೀಪದ ಜಾನತಾಪೂರು ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ, ಮಕ್ಕಳ ಕಲಿಕೆ ಪರಿಶೀಲನೆ ಮಾಡಿದರು.

ಶಾಲಾ ಪ್ರತಿ ತರಗತಿ ಕೊಠಡಿಗಳಿಗೆ ಭೇಟಿ ನೀಡಿ ಮಕ್ಕಳ ಕಲಿಕೆಯನ್ನು ಪರಿಶೀಲಿಸಿ, ಮಕ್ಕಳ ಕಲಿಕೆ ಹಾಗೂ ಶಾಲಾ ವಾತಾವರಣದ ಉತ್ತಮವಾಗಿರುವದರ ಬಗ್ಗೆ ಸಂತಸ ವ್ಯಕ್ತಪಡಿಸಿದರು. ಶಿಕ್ಷಣಕ್ಕೆ ಪೂರಕವಾಗುವ ಹಲವು ಸಲಹೆ, ಸೂಚನೆ & ಮಾರ್ಗದರ್ಶನಗಳನ್ನು ಶಾಲಾ ಶಿಕ್ಷಕ ಸಿಬ್ಬಂದಿಗಳಿಗೆ ಸೂಚಿಸಿದರು. ಸಿಬ್ಬಂದಿ ವರ್ಗದಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸನ್ಮಾನ ಮಾಡಿ ಗೌರವಿಸಿದರು. ಶಾಲೆಯ ಮುಖ್ಯಗುರು ಗುರುಬಸಪ್ಪ, ಸಹಶಿಕ್ಷಕ ಮೌನೇಶ ವಿಶ್ವಕರ್ಮ,

ರವಿಕುಮಾರ, ಅತಿಥಿ ಶಿಕ್ಷಕಿಯರು ಕುಮಾರಿ ಗೀತಾ ಗೌಡಪ್ಪನವರ ಜ್ಯೋತಿ ಸೇರಿದಂತೆ ಶಾಲಾ ವಿದ್ಯಾರ್ಥಿಗಳು ಇದ್ದರು.

# ಬಲ್ಡೋಟ ಹಟಾವೋ, ಜೀವ ಉಳಿಸಿಕೊಳ್ಳುವ ದಕ್ಕೆ ಹೋರಾಟ: ಸಿದ್ದನಗೌಡ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ಇದರ ಜಂಟಿ ಕ್ರಿಯಾ ವೇದಿಕೆ ನೇತೃತ್ವದಲ್ಲಿ ನಡೆಸಿರುವ 125ನೇ ದಿನದ ಬಲ್ಡೋಟ ವಿರೋಧಿ ಹೋರಾಟ ಬೆಂಬಲಿಸಿ ಬೆಂಗಳೂರು ವೈಚಾರಿಕ ಮಾಸಿಕ 'ಹೊಸತು' ಪತ್ರಿಕೆಯ ಸಂಪಾದಕರಾದ ಸಿದ್ದನಗೌಡ ಪಾಟೀಲ್ ಅವರು ಕಾರ್ಖಾನೆ ಬಾಧಿತ ಹಿರೇಬಗನಾಳ ಗ್ರಾಮಕ್ಕೆ ಭೇಟಿ ನೀಡಿ, 125ನೇ ದಿನದ ಧರಣಿ ಸತ್ಯಾಗ್ರಹದಲ್ಲಿ ಮಾತನಾಡಿದರು. ಇಷ್ಟೊಂದು ಸುದೀರ್ಘ ಕಾಲದಿಂದ ಹೋರಾಟ ಮಾಡುವದು ಸಣ್ಣ ಸಂಗತಿಯಲ್ಲ. ಇಲ್ಲಿ ನಡೆಸಿರುವ ಹೋರಾಟ ಪರಿಸರ ಸಾಮಾಜಿಕ, ಜೀವ ಕಳಕಳಿಯ ಹೋರಾಟವಾಗಿದೆ. ಕೊಪ್ಪಳ ಜನ ಬಲ್ಡೋಟ ವಿಸ್ತರಣೆಯಿಂದಾಗುವ ಅಪಾಯ ಮೊದಲೇ ಕಂಡುಕೊಂಡಿದ್ದೀರಿ. ಸಂಡೂರು ಸುತ್ತ ಮುತ್ತ ಜಿಂದಾಲ್ ಕಾರ್ಖಾನೆ ಮತ್ತು ಗಣಿಗಾರಿಕೆಯಿಂದ ಅಲ್ಲಿನ ಭೂಮಿ ಸಂಪೂರ್ಣ ಬಂಜರಾಗುತ್ತಿದೆ. ಅದರ ಸತ್ಯ ಕಂಡುಕೊಂಡು ಈ ನಿಮ್ಮ ಕೂಗನ್ನು ಸರ್ಕಾರಕ್ಕೆ, ಕಾರ್ಖಾನೆಗಳಿಗೆ ತಲುಪಿಸಿದ್ದೀರಿ.

ವಿರೋಧ ಪಕ್ಷಗಳೂ ಕಾರ್ಪೊರೇಟ್ ಕಂಪನಿಗಳನ್ನು ವಿರೋಧಿಸುತ್ತಿಲ್ಲ.

ಬಾಧಿತ ಪ್ರದೇಶದ ಪರಿಸರ ಹಾಳಾಗಿದೆ. ಜನರ ಆರೋಗ್ಯ ಹಾಳಾಗಿದೆ. ಈ ಪರಿಸ್ಥಿತಿಯಲ್ಲಿ ಉದ್ಯೋಗ ಕುರಿತು ಮಾತನಾಡುವುದು ಸೂಕ್ತವಲ್ಲ. ಜೀವ ರಕ್ಷಿಸಿಕೊಳ್ಳಲು ಒದ್ದಾಡುತ್ತಿರುವ ಬಾಧಿತರ ನೆರವಿಗೆ ಎಲ್ಲ ವಲಯದ ಸಂಘಟನೆಗಳ, ಸಾಮಾಜಿಕ ಕಾರ್ಯಕರ್ತರು ಈ ಹೋರಾಟದಲ್ಲಿ ಧುಮುಕಬೇಕು.

ರಾಜ್ಯದ ಪರಿಸರ ತಜ್ಞರು, ಆರೋಗ್ಯ ತಜ್ಞರನ್ನು, ಕೃಷಿ ತಜ್ಞರನ್ನು ಕರೆಸಿ ವಿಚಾರ ಸಂಕಿರಣ ನಡೆಸಬೇಕು ಎಂದು ಸಲಹೆ ನೀಡಿದರು.

ಜಂಟಿ ಕ್ರಿಯಾ ವೇದಿಕೆ ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ, ನಾವು ಸರ್ಕಾರದ ಮುಂದೆ ನಿಯೋಗ ಕರೆದುಕೊಂಡು ಹೋಗುವುದನ್ನು ಕಾಯುತ್ತಿದ್ದೇವೆ. ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಮತ್ತು ಸರ್ವಪಕ್ಷದ ಮುಖಂಡರು ಇದಕ್ಕೆ ಮಹತ್ವ ಕೊಡಬೇಕು. ಯಾವುದೇ ಕಾರಣ–ಕ್ಕೂ ಈ ಗಂಭೀರ ಪರಿಸ್ಥಿತಿಯನ್ನು ಹಗುರವಾಗಿ ಪರಿಗಣಿಸಬಾರದು ಎಂದರು. ಕರ್ನಾಟಕ ರೈತ ಸಂಘ (ಎಐಯುಕೆಎಸ್) ರಾಜ್ಯಾಧ್ಯಕ್ಷರಾದ ಡಿ.ಎಚ್. ಪೂಜಾರ ಮಾತನಾಡಿದರು. ಧರಣಿಯಲ್ಲಿ ಸಂಚಾಲಕರಾದ ಮಲ್ಲಿಕಾರ್ಜುನ ಬಿ. ಗೋನಾಳ, ಮಹಾಂತೇಶ ಕೊತಬಾಳ, ಮಂಜುನಾಥ ಜಿ. ಗೊಂಡಬಾಳ, ವಿಜಯ ಮಹಾಂತೇಶ ಹಟ್ಟಿ, ಎಸ್.ಬಿ.ರಾಜೂರು, ಮೂಕಪ್ಪ ಮೇಸ್ತ್ರಿ ಬಸಾಪುರ, ಜಿ.ಬಿ.ಪಾಟೀಲ್, ಗಂಗಾಧರ ಖಾನಾಪೂರ, ರಾಜಶೇಖರ ಏಳುಬಾವಿ, ಎಸ್. ಮಹಾದೇವಪ್ಪ ಮಾವಿನಮಾಡು, ಬಸವರಾಜ ನರೇಗಲ್, ಶರಣು ಪಾಟೀಲ್, ವೈ. ಸತ್ಯನಾರಾಯಣ, ಗಂಗಮ್ಮ ಕೊಡೇಕಲ್ ಇದ್ದರು.

### ಬಳ್ಳಾರಿಯಲ್ಲಿ ಬೃಹತ್ ಉದ್ಯೋಗ ಮೇಳಕ್ಕೆ ಚಾಲನೆ

# ರಾಜ್ಯ ಸರ್ಕಾರ ಉದ್ಯೋಗಾಕಾಂಕ್ಷಿಗಳ ಪರ: ನಾಗರಾಜ್

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**



ಮುಖ್ಯಮಂತ್ರಿಸಿದ್ದರಾಮಯ್ಯನವರ ನೇತೃತ್ವದ ರಾಜ್ಯ ಸರ್ಕಾರವು ಉದ್ಯೋಗಾಕಾಂಕ್ಷಿಗಳ ಪರವಾಗಿದೆ ಎಂದು ಡಾ.ಬಾಬು ಜಗಜೀವನ್‌ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಸಂಜೀವಿನಿ – ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ, ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ ಹಾಗೂ ಶ್ರೀಮತಿ ಸರಳಾದೇವಿ ಸತೀಶ್ಚಂದ್ರಅಗರ್ವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ) ಬಳ್ಳಾರಿ ಇವರುಗಳ ಸಂಯುಕ್ತಾಶ್ರಯದಲ್ಲಿಡಿಡಿಯು–ಜಿಕೆವೈ ಯೋಜನೆಯಡಿ ನಗರದ ಶ್ರೀಮತಿ ಸರಳಾದೇವಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ಏರ್ಪಡಿಸಿದ್ದ ಬಳ್ಳಾರಿ ಉದ್ಯೋಗ ಮೇಳಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.ಒಳಮೀಸಲಾತಿ ಜಾರಿ ಅನುಷ್ಠಾನದಿಂದ ಹುದ್ದೆ ಭರ್ತಿ ಪ್ರಕ್ರಿಯೆ ತಡೆಹಿಡಿಯಲಾಗಿತ್ತು. ಈಗ ಮುಖ್ಯಮಂತ್ರಿಸಿದ್ದರಾಮಯ್ಯನವರ ನೇತೃತ್ವದ ಸಚಿವ ಸಂಪುಟದ ನಿರ್ಧಾರದಂತೆ ಸದ್ಯದಲ್ಲೇ 52,000 ಕ್ಕೂಹೆಚ್ಚು ಸರ್ಕಾರಿ ಉದ್ಯೋಗಗಳನ್ನು ಭರ್ತಿ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ರಾಜ್ಯಸರ್ಕಾರದ ನಿರ್ದೇಶನದಂತೆ ಜಿಲ್ಲಾಡಳಿತವತಿಯಿಂದ ಬಳ್ಳಾರಿಯಲ್ಲಿ ಆಯೋಜಿಸಿರುವ ಈ ಉದ್ಯೋಗ ಮೇಳವು ನಿರುದ್ಯೋಗಿ ಯುವಕರಲ್ಲಿ ಹೊಸ ಭರವಸೆಯನ್ನು ಮೂಡಿಸಿದೆ. ಮೇಳದಲ್ಲಿ ಸುಮಾರು 60ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಿದ್ದು, ಸುಮಾರು 6,000ಕ್ಕೂ ಅಧಿಕ ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ ಎಂದು ಅವರು ತಿಳಿಸಿದರು.2017–18ರಲ್ಲಿ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರದಲ್ಲಿ ಬಳ್ಳಾರಿಯ ಜಿಂದಾಲ್ ಬಳಿ ನಡೆದ ಮೂರು ದಿನಗಳ ಮೇಳದಲ್ಲಿ 350 ಕಂಪನಿಗಳು ಭಾಗವಹಿಸಿ,30,000ಕ್ಕೂಹೆಚ್ಚು ಜನರಿಗೆ ಉದ್ಯೋಗ ದೊರಕಿಸಿಕೊಡಲಾಗಿತ್ತು ಎಂಬುದನ್ನು ಈ ಸಂದರ್ಭದಲ್ಲಿ ಸ್ಮರಿಸಿದರು.ಕಲ್ಯಾಣ ಕರ್ನಾಟಕ ಭಾಗದಲ್ಲಿ ಈಗಾಗಲೇ ಇತ್ತೀಚೆಗೆ ಕಲಬುರಗಿಯಲ್ಲಿ ನಡೆದ ವಿಭಾಗ ಮಟ್ಟದ ಮೇಳದಲ್ಲಿ ಸಾವಿರಾರು ಜನರಿಗೆ ಕೆಲಸ ಸಿಕ್ಕಿದೆ. ಉದ್ಯೋಗ ಸಿಗದ ಪದವೀಧರರಿಗೆ ಆಸರೆಯಾಗಲು ಸರ್ಕಾರ 'ಯುವನಿಧಿ' ಯೋಜನೆಯಡಿ ಆರ್ಥಿಕ ನೆರವು ನೀಡುತ್ತಿದೆ ಎಂದು ಹೇಳಿದರು.

ಬಳ್ಳಾರಿ ಜಿಲ್ಲೆಯು ಕೈಗಾರಿಕಾ ಹಬ್ ಆಗಿರುವುದರಿಂದ, ಮುಂದಿನ ದಿನಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಜಮೀರ್ ಅಹ್ಮದ್ ಖಾನ್ ಹಾಗೂ ಸ್ಥಳೀಯ ಶಾಸಕರೊಂದಿಗೆ ಚರ್ಚಿಸಿ, ವಿವಿಧ ದೊಡ್ಡ ಕೈಗಾರಿಕೆಗಳ ಸಹಯೋಗದೊಂದಿಗೆ ಇನ್ನೂ ಬೃಹತ್ ಮಟ್ಟದ ಉದ್ಯೋಗ ಮೇಳವನ್ನು ಆಯೋಜಿಸುವ ಕುರಿತು ಚರ್ಚಿಸಲಾಗುವುದು ಎಂದು ಅವರು ತಿಳಿಸಿದರು.ಮಹಾನಗರ ಪಾಲಿಕೆ ಮಹಾಪೌರರಾದ ಪಿ.ಗಾದೆಪ್ಪ ಅವರು ಮಾತನಾಡಿ, ಬಳ್ಳಾರಿ ಜಿಲ್ಲೆಯು ಕಲ್ಯಾಣ ಕರ್ನಾಟಕ ಭಾಗ ದಲ್ಲೇ ಅತಿ ಹೆಚ್ಚು ಕೈಗಾರಿಕೆ ಕಂಪನಿಗಳನ್ನು ಹೊಂದಿರುವ ಜಿಲ್ಲೆಯಾಗಿದೆ. ಯುವಕರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಒದಗಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತದ ಈ ಮಹತ್ವದ ಕಾರ್ಯ ಶ್ಲಾಘನೀಯವಾಗಿದೆ ಎಂದು ಹೇಳಿದರು.

## ಶ್ರೀ ಯೋಗಿನಾರೇಯಣ ಯತೀಂದ್ರರ ಜಯಂತಿ




ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಕೊಪ್ಪಳ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಶ್ರೀ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ರವರ ಜಯಂತಿಯನ್ನು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಸರಳವಾಗಿ ಆಚರಿಸಲಾಯಿತು.

ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ಸಮಾಜದ ಬಂಧುಗಳು ಜೊತೆಯಲ್ಲಿ ಶ್ರೀ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಗೌರವ ನಮನ ಸಲ್ಲಿಸಿದರು.

ಬಳಿಕ ಜಿಲ್ಲಾ ಚುನಾವಣಾ ಶಾಖೆಯ ತಹಾಸೀಲ್ದಾರ್ ರವಿಕುಮಾರ ವಸ್ತ್ರದ್ ಅವರ ಮಾತನಾಡಿ, ಕರ್ನಾಟಕದ ಪ್ರಸಿದ್ಧ ಸಂತರಲ್ಲಿ ಶ್ರೀ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ನವರು ಪ್ರಮುಖರು. ಇವರು ಸುಮಾರು 18ನೇ ಶತಮಾನದಲ್ಲಿ ಕರ್ನಾಟಕದ ಚಿಕ್ಕಬಳ್ಳಾಪುರ ಜಿಲ್ಲೆಯ ಕೈವಾರ ಗ್ರಾಮದಲ್ಲಿ ಜನಿಸಿದರು. ಕೈವಾರ ತಾತಯ್ಯನವರು ಧಾರ್ಮಿಕ ಜಾಗೃತಿ ಮೂಡಿಸಿದ ಮಹಾನ್ ಸಂತರು. ಅವರ ಉಪದೇಶಗಳು ಮಾನವ ಜೀವನಕ್ಕೆ ದಾರಿ ದೀಪವಾಗಿವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕರ್ಣಕುಮಾರ, ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಸುರೇಶ ಜಿ., ಬಲಿಜ ಸಮಾಜದ ಮುಖಂಡರಾದ ಕೆ.ಶ್ರೀನಿವಾಸ ಕಟ್ಟಿಮನಿ, ನಾಗರಾಜ ಕನಕಗಿರಿ, ಸಹಕಾರ್ಯದರ್ಶಿ ಗೀರಿಶ್ ಕನಕಗಿರಿ, ಅಶೋಕ ಉಣಿಸಿಗಿಡ, ವಿನಯ ಕಟ್ಟಿಮನಿ, ತಿಪ್ಪಯ್ಯ ನಾಯ್ಡು ಎನ್., ವರಲಕ್ಷ್ಮೀ ಚಿಂತಪಲ್ಲಿ, ಲತಾ, ಸುವರ್ಣ, ನಾಗರತ್ನ, ರೇಖಾ, ಸರೋಜ, ರಕ್ಷಿತ್ ಸೇರಿದಂತೆ ಮತ್ತಿತರರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ಮಹಿಳಾ ಮತ್ತು ಮಕ್ಕಳ ಗ್ರಾಮ ಸಭೆ




• **ಮಲ್ಲಮ್ಮ ನುಡಿ ವಾರ್ತೆ ಮುದಗಲ್**

ಸಮೀಪದ ಮಟ್ಟೂರ ಗ್ರಾಮದ ಗ್ರಾಮ ಪಂಚಾಯತಿಯಲ್ಲಿ ಬುಧವಾರ ಮಹಿಳಾ ಮತ್ತು ಮಕ್ಕಳ ಗ್ರಾಮ ಸಭೆ ಜರುಗಿತು . ಕಾರ್ಯಕ್ರಮವನ್ನು ವಲಯ ಅರಣ್ಯ ಅಧಿಕಾರಿ ಭೀಮರಾವ್ ಉದ್ಘಾಟಿಸಿದ ಬಳಿಕ ಮಾತನಾಡಿದ ಅವರು ಬಾಲ್ಯ ವಿವಾಹ, ವರದಕ್ಷಿಣೆ ಕಿರುಕುಳ, ಸರಾಯಿ ನಿಷೇಧ ಸೇರಿದಂತೆ ವಿವಿಧ ವಿಷಯಗಳ ಮಾಹಿತಿ ತಿಳಿಸಿದರು. ಮಹಿಳಾ ಮತ್ತು ಮಕ್ಕಳ ಗ್ರಾಮ ಸಭೆಯು ಪಂಚಾಯತ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ಸಂರಕ್ಷಣೆ, ಶಿಕ್ಷಣ, ಆರೋಗ್ಯ ಮತ್ತು ಸುರಕ್ಷತೆಯ ಬಗ್ಗೆ ಚರ್ಚಿಸಲು ಮತ್ತು ನಿರ್ಧಾರ ತೆಗೆದುಕೊಳ್ಳಲು ಮಕ್ಕಳಿಗೆ ವೇದಿಕೆ ಕಲ್ಪಿಸುವ ಪ್ರಜಾಪ್ರಭುತ್ವದ ಪ್ರಮುಖ ಪ್ರಕ್ರಿಯೆಯಾಗಿದೆ.

ಇದು ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ಧತಿ ತಡೆಗಟ್ಟಲು ಮತ್ತು ಮಕ್ಕಳ ಸಮಸ್ಯೆಗಳಿಗೆ ಸ್ಥಳೀಯವಾಗಿ ಪರಿಹಾರ ಕಂಡುಕೊಳ್ಳಲು, ಮಕ್ಕಳನ್ನು ಸಕ್ರಿಯವಾಗಿ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿಸುತ್ತದೆ. ಹಾಗೂ ಸುಸಜ್ಜಿತ ವಾತಾವರಣದಲ್ಲಿ ಅಕ್ರಮ ಚಟುವಟಿಕೆಗಳು ಕಂಡು ಬಂದಲ್ಲಿ ಮಹಿಳಾ ಸಹಾಯವಾಣಿಗೆ ಕರೆ ಮಾಡಿ ಎಂದು ಅಭಿಪ್ರಾಯಪಟ್ಟರು.

ಗ್ರಾಮೀಣ ಅಭಿವೃದ್ಧಿ ಅಧಿಕಾರಿ ತಿಮ್ಮನಗೌಡ ಪೊಲೀಸ್ ಪಾಟೀಲ್ ಮಾತನಾಡಿ ಯುವಕರಿಂದ ದೇಶ ಕಟ್ಟುವ ಕೆಲಸವಾಗಬೇಕಿದೆ. ಚಿಣ್ಣರಿಗೆ ಪ್ರಾರಂಭಿಕ ಹಂತದಲ್ಲಿ ಅಕ್ಷರಾಭ್ಯಾಸ ಮಾಡಿಸುವ ಜವಾಬ್ದಾರಿಯು ತಾಯಿ ಹಾಗೂ ಅಂಗನವಾಡಿ ಶಿಕ್ಷಕರದ್ದು.

ನೀವು ಹಾಕುವ ಭದ್ರ ಬುನಾದಿ ಮುಂದೊಂದು ದಿನ ವಿಶ್ವನಾಯಕರ ಹುಟ್ಟಿಗೆ ಕಾರಣವಾಗುತ್ತದೆ ಎಂದರು.

ಶಾಲಾ ಮುಖ್ಯಗುರುಗಳು ಶಿವಕುಮಾರ ಕಣ್ಣೂರ, ಕಾರ್ಯದರ್ಶಿ ಸೋಮಣ್ಣ, ಮಹಾಂತೇಶ್ ಹಿರೇಮಠ, ಅಮರೇಗೌಡ ಸೇರಿದಂತೆ, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಗ್ರಾಮಸ್ಥರು ಉಪಸ್ಥಿತರಿದ್ದರು.

# ಕುಡಿತಿನಿ: 11ನೇ ವಾರ್ಷಿಕ ದಿಂಡಿ ಉತ್ಸವ



• **ಮಲ್ಲಮ್ಮ ನುಡಿ ವಾರ್ತೆ ಕುರುಗೋಡು**

ಶ್ರೀ ಪಾಂಡುರಂಗ ಸ್ವಾಮಿ ರುಕ್ಮಿಣಿಯವರ 11ನೇ ವಾರ್ಷಿಕ ದಿಂಡಿ ಉತ್ಸವವು ದೇವರಿಗೆ ವಿಶೇಷ ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಹಾಗೂ ವೇದ ಮಂತ್ರ ಪಠಣ ಗಳೊಂದಿಗೆ ಮಹಾಮಂಗಗೊಂಡಿತು.

ಇಲ್ಲಿಗೆ ಸಮೀಪದ ಕುಡತಿನಿ ಪಟ್ಟಣ ಇಂದಿರಾನಗರದ ಶ್ರೀ ಪಾಂಡುರಂಗ ರುಕ್ಮಿಣಿ ಹಾಗೂ ಶ್ರೀ ಶಿರ್ಡಿ ಸಾಯಿಬಾಬಾ ಮಂದಿರದಲ್ಲಿ ಜಗದ್ಗುರು ಶ್ರೀ ಸಂತ ತುಕಾರಾಮ ಮಹಾರಾಜರ ವಿದ್ಯಾವಂಶಜರಾದ ಚೈತನ್ಯ ಶ್ರೀ ಗುರು ಗೋಪಾಲ ಅಣ್ಣಾ ವಾಸಕರ ಮಹಾರಾಜರ ನೇತೃತ್ವದಲ್ಲಿ ದಿ. 28.02.2026 ಶನಿವಾರದಿಂದ ದಿ.02.03.2026 ಸೋಮವಾರದ ವರೆಗೆ ಮಂದಿರದ 11ನೇ ವಾರ್ಷಿಕ ದಿಂಡಿ ಮಹೋತ್ಸವ ನಿಮಿತ್ತ ವಿವಿಧ ವಾರಕರೀ ಸಂಪ್ರದಾಯಿಕ ಕಾರ್ಯಕ್ರಮ ಸರ್ವ ಭಕ್ತರ ಸಮ್ಮುಖದಲ್ಲಿ ಸೋಮವಾರ ಮಂಗಲಗೊಂಡಿತು.

ಸತತವಾಗಿ 3ದಿನಗಳ ಕಾಲ ಜರುಗುವ ಈ ಜ್ಞಾನ ದಾಸೋಹ ಹಾಗೂ ಅನ್ನದಾಸೋಹ ಸೇವೆಯಲ್ಲಿ ಕುಡತಿನಿ ಸುತ್ತಮುತ್ತಲಿನ ಸರ್ವ ಭಕ್ತಾದಿಗಳು ಭಾಗವಹಿಸಿ ತನು ಮನ ಧನ ಧಾನ್ಯಗಳಿಂದ ಸಹಕರಿಸಿ ಈ ಉತ್ಸವವನ್ನು ಯಶಸ್ವಿಗೊಳಿಲಾಗಿ ಸರ್ವ ಭಕ್ತರಿಗೆ ಶ್ರೀ ರುಕ್ಮಿಣಿ ಸಮೇತ ಪಾಂಡುರಂಗ ಸ್ವಾಮಿ ಸಕಲವನ್ನು ಕರುಣಿಸಿ ಸನ್ಮಾರ್ಗದಲ್ಲಿ ನಡೆಸಲಿ ಎಂದು ದೇವಸ್ಥಾನದಲ್ಲಿ ಸಾನಿಧ್ಯ ವಹಿಸಿದ್ದ ಶ್ರೀಗಳು ಆಶೀರ್ವಚನ ನೀಡಿದರು.

ಈ ವೇಳೆ ಶಿರಡಿ ಸಾಯಿಬಾಬಾ ಮಂದಿರದ ಹಾಗೂ ಪಾಂಡುರಂಗ ದೇವಸ್ಥಾನದ ಆಡಳಿತ ಮಂಡಳಿ ಶ್ರೀ ಮಾವುಲೀ ತುಕಾರಾಂ ಸೇವಾ ಟ್ರಸ್ಟ್ ಮತ್ತು ಕುಡಿತಿನಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ನೂರಾರು ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು.

# ವ್ಯಕ್ತಿ ಕಾಣೆ: ಪತ್ತೆಗೆ ಮನವಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನಗರದ ಗಾಂಧಿನಗರ ಪೊಲೀಸ್ ಠಾಣೆ ವ್ಯಾಪ್ತಿಯ ಸಿದ್ದಾರ್ಥ ಕಾಲೋನಿಯ ನಿವಾಸಿಯಾದ ಕೆ.ಶಿವಕುಮಾರ ಎನ್ನುವ 48 ವರ್ಷದ ವ್ಯಕ್ತಿಯು 2013ರ ಜೂ.12 ರಂದು ಮನೆಯಿಂದ ಹೋದವನು ಮನೆಗೆ ಬಾರದೇ ಕಾಣೆಯಾಗಿರುವ ಕುರಿತು ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದು ಸಹಾಯಕ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮನವಿ ಮಾಡಿದ್ದಾರೆ.

ವ್ಯಕ್ತಿಯ ಚಹರೆ:

ಎತ್ತರ ಸುಮಾರು 5.3 ಅಡಿ, ಕಪ್ಪು ಮೈಬಣ್ಣ ಮತ್ತು ದುಂಡು ಮುಖ ಹೊಂದಿದ್ದು, ಎಡಗೈ ಮೆಲೆ ಹಳೆ ಗಾಯದ ಗುರುತು ಇರುತ್ತದೆ. ಕಾಣೆಯಾದ ಸಂದರ್ಭದಲ್ಲಿ ಬಿಳಿ ತುಂಬು ತೋಳಿನ ಶರ್ಟ್ ಮತ್ತು ನೀಲಿ ಪ್ಯಾಂಟ್ ಧರಿಸಿರುತ್ತಾನೆ. ಕನ್ನಡ, ತೆಲುಗು ಭಾಷೆಗಳನ್ನು ಮಾತನಾಡುತ್ತಾನೆ.

ಕಾಣೆಯಾದ ವ್ಯಕ್ತಿ ಬಗ್ಗೆ ಮಾಹಿತಿ ಸಿಕ್ಕಲ್ಲಿ ಗಾಂಧಿನಗರ ಪೊಲೀಸ್ ಠಾಣೆಯ ದೂ. 08392272192, ಪಿಎಸ್‌ಐ ಮೊ.9480803082, ಪಿ.ಐ ಮೊ.9480803046, ಬಳ್ಳಾರಿ ಕಂಟ್ರೋಲ್ ರೂಂ ಸಂ.08392–258100 ಗೆ ಕರೆಮಾಡಿ ಮಾಹಿತಿ ನೀಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯುತ್ ವ್ಯತ್ಯಯ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಕಂಪ್ಲಿ ಜೆಸ್ಕಾಂ ವ್ಯಾಪ್ತಿಯ ಮೆಟ್ರಿ 110ಕೆವಿ ಉಪ ಕೇಂದ್ರದಲ್ಲಿ ವಿದ್ಯುತ್ ನಿರ್ವಹಣೆ ಕಾರ್ಯ ಕೈಗೊಳ್ಳುತ್ತಿರುವುದರಿಂದ ಮಾ.06 ರಂದು ಬೆಳಿಗ್ಗೆ 09 ರಿಂದ ಸಂಜೆ 05 ಗಂಟೆಯವರೆಗೆ ಮೆಟ್ರಿ, ದೇವಲಾಪುರ, ಸುಗ್ಗೇನಹಳ್ಳಿ ಪಂಚಾಯತಿಯ ಎಲ್ಲ ಗ್ರಾಮಗಳು ಮತ್ತು ಹಂಪಾದೇವನಹಳ್ಳಿ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಮೆಟ್ರಿ ಉಪ ಕೇಂದ್ರಕ್ಕೆ ಸಂಬಂಧಿಸಿದ ಐಪಿ ಸೆಟ್ ಮಾರ್ಗಗಳಲ್ಲಿ ಅಂದು ಬೆಳಿಗ್ಗೆ 04 ರಿಂದ 09 ಗಂಟೆಯವರೆಗೆ ಬಾಕಿ ಉಳಿದ ಸಮಯವನ್ನು ಸಂಜೆ 05 ಗಂಟೆಯ ನಂತರ ಸರಬರಾಜು ಮಾಡಲಾಗುವುದು.

ವಿದ್ಯುತ್ ಗ್ರಾಹಕರು ಹಾಗೂ ಸಾರ್ವಜನಿಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಫಲಿತಾಂಶ ಸುಧಾರಣೆಗೆ ಅಗತ್ಯ ತಯಾರಿ ಕೈಗೊಳ್ಳಲು ಸೂಚನೆ



• **ಮಲ್ಲಮ್ಮ ನುಡಿ, ಹುಣಸಗಿ**

ಪಟ್ಟಣದ ಸರಕಾರಿ ಬಾಲಕಿಯರ ಪ್ರೌಢಶಾಲೆ ಹುಣಸಗಿಗೆ ಜಿಲ್ಲಾಡಯಟ್ ಉಪನಿರ್ದೇಶಕ ವೃಷಬೇಂದ್ರಯ್ಯ ಹಿರೇಮಠ ಭೇಟಿ ನೀಡಿ, ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಈ ವೇಳೆ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ, ಮಾದರಿ ಪರೀಕ್ಷೆಗಳ ಅನುಭವ ಹಾಗೂ ಸವಾಲುಗಳ ಬಗ್ಗೆ ಮಾಹಿತಿ ಪಡೆದರು. ನಂತರ ಶಿಕ್ಷಕರ ಸಭೆ ನಡೆಸಿ, ಇತ್ತೀಚಿನ ಮಾದರಿ ಪರೀಕ್ಷಾ ಫಲಿತಾಂಶಗಳನ್ನು ಪರಿಶೀಲಿಸಿದರು. ಪ್ರತಿಯೊಬ್ಬ ವಿದ್ಯಾರ್ಥಿಯೂ ಉತ್ತೀರ್ಣರಾಗುವಂತೆ ಸಮಗ್ರ ತಯಾರಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಶಿಕ್ಷಕರಿಗೆ ಸೂಚಿಸಿದರು.

ವಿದ್ಯಾರ್ಥಿಗಳ ಅಂಕಪಟ್ಟಿಯನ್ನು ವಿಶ್ಲೇಷಿಸಿ, ದುರ್ಬಲ ವಿಷಯಗಳಲ್ಲಿ ಹೆಚ್ಚುವರಿ ಅಭ್ಯಾಸ ತರಗತಿಗಳು, ವೈಯಕ್ತಿಕ ಮಾರ್ಗದರ್ಶನ ಹಾಗೂ ವಿಶೇಷ ಕೋಚಿಂಗ್ ವ್ಯವಸ್ಥೆ ಮಾಡಬೇಕು ಎಂದು ಸಲಹೆ ನೀಡಿದರು. ಪರೀಕ್ಷಾ ಭಯ ನಿವಾರಣೆಗೂ ವಿಶೇಷ ಗಮನ ಹರಿಸುವಂತೆ ಹೇಳಿದರು.

"ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸಲು ಶಿಕ್ಷಕರಿಗೆ ಸೂಕ್ತ ಮಾರ್ಗದರ್ಶನ ನೀಡುವುದು ಹಾಗೂ ಶಾಲಾ ಶಿಕ್ಷಣದ ಗುಣಮಟ್ಟವನ್ನು ಬಲಪಡಿಸುವುದು ಮುಖ್ಯ. ಸಮರ್ಪಕ ತಯಾರಿ ಇದ್ದರೆ ಈ ವರ್ಷ ಉತ್ತಮ ಫಲಿತಾಂಶ ಸಾಧ್ಯ," ಎಂದು ವೃಷಬೇಂದ್ರಯ್ಯ ವರದಿಗಾರರಿಗೆ ತಿಳಿಸಿದರು.

ಶಾಲಾ ಪ್ರಾಚಾರ್ಯ ವಿಠಲ್ ಬಿ. ಚವ್ಹಾಣ ಸೇರಿದಂತೆ ಶಿಕ್ಷಕರಾದ ಭೀಮಣ್ಣ ವಾಲ್ಮೀಕಿ, ಬಸವರಾಜ ತೆಗ್ಗಳ್ಳಿ, ವಿಜಯಲಕ್ಷ್ಮೀ ಕುಂಬಾರ, ಲಾಲ್ ಬಿ, ಗುರುರಾಜ ಜೋಶಿ, ಮಶಾಕ್ ಯಾಳಗಿ, ಯುನಿಸ್ ಕೋತ್ವಾಲ್, ಲಲಿತಾಬಾಯಿ ಮಠ, ಅರ್ಪಿತಾ ಪೊಲೀಸ್ ಪಾಟೀಲ್, ನಾಗನಗೌಡ ಪಾಟೀಲ್, ಸೋಮನಗೌಡ ಬಳವಾಟ ಹಾಗೂ ಇತರರು ಉಪಸ್ಥಿತರಿದ್ದರು.

# ಅಧ್ಯಕ್ಷೆಯಾಗಿ ಸುಜಾತ ರವಿಚಂದ್ರ ನೇಮಕೆ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ರಾಷ್ಟ್ರೀಯ ಬಿಸಿ ಚೇತನ ಸಮಿತಿಯ ಬಳ್ಳಾರಿ ಜಿಲ್ಲಾ ನೂತನ ಅಧ್ಯಕ್ಷೆಯಾಗಿ ಸುಜಾತ ರವಿಚಂದ್ರ ಅವರನ್ನು ನೇಮಕ ಮಾಡಲಾಗಿದೆ. ಜೊತೆಗೆ ಜಿಲ್ಲಾ ಕಾರ್ಯದರ್ಶಿ ಸೇರಿದಂತೆ ಇತರ ಮಹಿಳಾ ಪದಾಧಿಕಾರಿಗಳನ್ನೂ ನೇಮಕ ಮಾಡಲಾಗಿದೆ. ನೇಮಕಾತಿ ಪತ್ರಗಳನ್ನು ಸಂಸ್ಥಾಪಕ ರಾಷ್ಟ್ರೀಯ ಅಧ್ಯಕ್ಷ ಬಿಸಿ ರಮಣ ಅವರು ಶನಿವಾರ ವಿತರಿಸಿದರು.

ನಗರದ ಗಾಂಧೀನಗರ ಪೊಲೀಸ್ ಠಾಣೆ ಎದುರಿನ ಜಿ ಟಿವಿ ಸಾಕ್ಷಿ ಕಚೇರಿಯಲ್ಲಿ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಬಿಸಿ ರಮಣ ಅವರು, ಬಿಸಿ ಸಮುದಾಯಕ್ಕೆ ವಿಧಾನಸಭೆ ಹಾಗೂ ಲೋಕಸಭೆಯಲ್ಲಿ ಮೀಸಲಾತಿ ಕಲ್ಪಿಸಬೇಕೆಂದು ಆಗ್ರಹಿಸಿದರು. ಸಮಿತಿ ವತಿಯಿಂದ ಶೀಘ್ರದಲ್ಲೇ "ಚಲೋ ದೆಹಲಿ" ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು. 2027ರಲ್ಲಿ ನಡೆಯಲಿರುವ ಜನಗಣತಿಯಲ್ಲಿ ಒಬಿಸಿ ಕಾಲಮ್ ಕಡ್ಡಾಯವಾಗಿ ಸೇರಿಸಬೇಕೆಂದು ಒತ್ತಾಯಿಸಿದರು.

ಸಭೆಯಲ್ಲಿ ರಾಷ್ಟ್ರೀಯ ಉಪಾಧ್ಯಕ್ಷ ಗಿರಿ ಯಾದವ್, ಕರ್ನಾಟಕ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಬಳ್ಳಾರಿ ಜಿಲ್ಲಾ ಅಧ್ಯಕ್ಷ ಕೆ.ಇ. ಚಿದಾನಪ್ಪ, ಜಿಲ್ಲಾ ಇಂಚಾರ್ಜ್ ಉಪ್ಪರ ಮಲ್ಲಪ್ಪ, ಒಬಿಸಿ ನಾಯಕ ಪ್ರಭಾಕರ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಈ ವೇಳೆ ಸುಧಾ, ವನಜಾಕ್ಷಿ, ಸುಜಾತ, ಮಮತಾ, ವಿಜಯಲಕ್ಷ್ಮಿ, ರೇಖಾ, ಈರಮ್ಮ, ದರ್ಜಿ ಮಮತಾ ಸೇರಿದಂತೆ ಅನೇಕರು ಸಮಿತಿಗೆ ಸೇರ್ಪಡೆಯಾಗಿ ನೇಮಕಾತಿ ಪತ್ರಗಳನ್ನು ಸ್ವೀಕರಿಸಿದರು.

# ಬಣ್ಣ ಬಣ್ಣದ ಹೋಳಿ ಹಬ್ಬ ಆಚರಣೆ



• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ**

ದೀಪಾವಳಿಯು ಕತ್ತಲೆಯ ಮೇಲೆ ಬೆಳಕು, ಅಜ್ಞಾನದ ಮೇಲೆ ಜ್ಞಾನ ಮತ್ತು ಕೆಟ್ಟದ್ದರ ಮೇಲೆ ಒಳ್ಳೆಯದ ಜಯವನ್ನು ಸಂಕೇತಿಸುವ ಪ್ರಮುಖ ಬೆಳಕಿನ ಹಬ್ಬವಾದ ಹೋಳಿ ಹಬ್ಬದ ಪ್ರಯುಕ್ತ ಪಟ್ಟಣದ ಘಾತ್ಮಪುರನಲ್ಲಿ ರಂಗು ರಂಗಿನ ಹೋಳಿ ಹಬ್ಬವನ್ನು ಪರಸ್ಪರ ಒಬ್ಬರದು ಒಬ್ಬರು ಬಣ್ಣ ಹಚ್ಚಿಕೊಂಡು ಅದ್ದೂರಿಯಾಗಿ ನರಸಪ್ಪ ಎಂ. ನರನಾಳ, ರಾಜಕುಮಾರ ಆರ್. ಹಡಪದ, ಮಾಣಿಕರೆಡ್ಡಿ ರಾಂಪುರ, ರಾಜು ಪೂಜಾರಿ, ದತ್ತಾತ್ರಿ ಪೂಜಾರಿ, ಬಸಪ್ಪ ಯಲಮಡಗಿ, ಸಿದ್ದು ಹೊಸಳ್ಳಿ ಸೇರಿದಂತೆ ಅನೇಕ ಯುವಕರು, ಮಕ್ಕಳು ಬಣ್ಣದ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಿದರು.

# ಪತ್ರಕರ್ತೆಯರ ತರಬೇತಿಗೆ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಕರ್ನಾಟಕ ಮಾಧ್ಯಮ ಅಕಾಡೆಮಿಯು ಇನ್ಫೋಸಿಸ್ ಸ್ಪ್ರಿಂಗ್‌ಬೋರ್ಡ್ ಸಿ.ಎಸ್. ಆರ್ ಕಾರ್ಯಕ್ರಮದಡಿ ಮಹಿಳಾ ಪತ್ರಕರ್ತೆಯರಿಗಾಗಿಯೇ ವಿಶೇಷವಾಗಿ ತರಬೇತಿ ಆಯೋಜಿಸಿದ್ದು, ಪತ್ರಕರ್ತೆಯರಿಂದ ಅರ್ಜಿ ಆಹ್ವಾನಿಸಿದೆ.

ತರಬೇತಿಯು ಮಾರ್ಚ್ 25 ರಿಂದ 27ರ ವರೆಗೆ ಮೈಸೂರಿನ ಇನ್‌ಫೋಸಿಸ್ ಕ್ಯಾಂಪಸ್‌ನಲ್ಲಿ ನಡೆಯಲಿದೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಮಾಧ್ಯಮ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕನಿಷ್ಠ 5 ವರ್ಷ ಸೇವಾನುಭವ ಹೊಂದಿರುವ ಪತ್ರಕರ್ತೆಯರು ಅರ್ಜಿ ಸಲ್ಲಿಸಬಹುದು.

ಆಸಕ್ತ ಪತ್ರಕರ್ತೆಯರು ಗೂಗಲ್ ಫಾರ್ಮ್‌ ಃಣಣಠಿ://ಜಿಂಡಿಟ.ರಟಜ/ ಣಂದಡಿ4ಉಥಗಕುಭಆಲೂಃತಇ9 ನಲ್ಲಿ ಮಾಹಿತಿ ಹಾಗೂ ದಾಖಲೆಗಳನ್ನು ಒದಗಿಸುವ ಮೂಲಕ ತರಬೇತಿಗೆ ನೋಂದಾಯಿಸಬಹುದಾಗಿದೆ.

ಅರ್ಜಿ ನಮೂನೆಯಲ್ಲಿ ಸೂಚಿಸಿರುವಂತೆ ಪತ್ರಕರ್ತೆಯರು ಭಾವಚಿತ್ರ, ವಯಸ್ಸಿನ ದಾಖಲೆ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಮಾಧ್ಯಮ ಸಂಸ್ಥೆಯ ಮುಖ್ಯಸ್ಥರ ದೃಢೀಕರಣ ಅಥವಾ ಕಚೇರಿಯ ಅಧಿಕೃತ ಗುರುತಿನ ಚೀಟಿ, ಆ ಮಾಧ್ಯಮ ಸಂಸ್ಥೆಯು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿ ಸೇರ್ಪಡೆಯಾಗಿರುವ ಕುರಿತ ದಾಖಲೆ ಹಾಗೂ ಕನಿಷ್ಠ 5 ವರ್ಷ ಸೇವೆ ಸಲ್ಲಿಸಿರುವ ಕುರಿತು ಸೇವಾನುಭವ ದಾಖಲೆಗಳನ್ನು ಸಲ್ಲಿಸಬೇಕು.

ಇದು ಮೂರು ದಿನಗಳ ವಸತಿಯುತ ತರಬೇತಿಯಾಗಿದ್ದು, ಪತ್ರಕರ್ತೆಯರಿಗೆ ನಿಯಮಾನುಸಾರ ಪ್ರಯಾಣ ಭತ್ಯೆ ನೀಡಲಾಗುವುದು. ಈ ತರಬೇತಿ ಕಾರ್ಯಕ್ರಮದಲ್ಲಿ ಡಿಜಿಟಲ್ ಮಾಧ್ಯಮ, ಎಐ ಬಳಕೆ ಹಾಗೂ ಸಾಫ್ಟ್‌ಸ್ಕಿಲ್ ಅಭಿವೃದ್ಧಿ ಮತ್ತು ನಾಯಕತ್ವ ತರಬೇತಿ ನೀಡಲಾಗುವುದು.

ಪತ್ರಕರ್ತೆಯರ ಆಯ್ಕೆ ಕುರಿತ ಅಂತಿಮ ನಿರ್ಧಾರ ಅಕಾಡೆಮಿಯದ್ದೇ ಆಗಿರುತ್ತದೆ. ಅರ್ಜಿ ಸಲ್ಲಿಸಲು ಮಾರ್ಚ್ 10, 2026 ಕೊನೆಯ ದಿನವಾಗಿದೆ ಎಂದು ಕರ್ನಾಟಕ ಮಾಧ್ಯಮ ಅಕಾಡೆಮಿಯು ಪ್ರಕಟಣೆಯಲ್ಲಿ ತಿಳಿಸಿದೆ.


# ರಸ್ತೆ ನಿರ್ಮಿಸುವಂತೆ ಮಂಜುನಾಥ್ ಸಲಹೆ



• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು**


ನಗರದ ಕಲ್ಕುಣಿಕೆ ಸರಕಾರಿ ಶಾಲಾ ಕಟ್ಟಡ ಉಳಿಸಲೇಬೇಕು, ಕೋರ್ಟ್ ವೃತ್ತದ ಬಳಿ ಅಂಡರ್ ಪಾಸ್, ಐಟಿಐ ಕಾಲೇಜು ಎದುರಿನ ಬಡಾವಣೆ ಬಳಿ ಹಳೇ ಮೈಸೂರು ರಸ್ತೆಯಿಂದ ಸಂಪರ್ಕ ರಸ್ತೆ ನಿರ್ಮಿಸುವಂತೆ ಹೆದ್ದಾರಿ ಎಂಜಿನಿಯರ್‌ಗಳಿಗೆ ಮಾಜಿ ಶಾಸಕ ಹಾಗೂ ಸ್ನೇಹಜೀವಿ ಎಚ್.ಪಿ. ಮಂಜುನಾಥ್ ಸಲಹೆ ನೀಡಿದರು.

ಹುಣಸೂರು ಬೈಪಾಸ್ ಹೆದ್ದಾರಿ ಅಗಲೀಕರಣ ವೇಳೆ ಕಲ್ಕುಣಿಕೆ ಸರಕಾರಿ ಶಾಲಾ ಕಟ್ಟಡ ತೆರವುಗೊಳಿಸುವ ಸಂಬಂಧ ಪೋಷಕರು, ಹಳೇ ವಿದ್ಯಾರ್ಥಿಗಳ ಪ್ರತಿಭಟನೆ ನಡೆಸಿದ್ದ ಹಿನ್ನೆಲೆ ರಾಷ್ಟ್ರೀಯ ಹೆದ್ದಾರಿ ಇಲಾಖೆಯ ಎಇಇ ರೂಪಾ ಎರ್ ಅವರನ್ನು ಸ್ಥಳಕ್ಕೆ ಕರೆಸಿ ಯಾವುದೇ ಕಾರಣಕ್ಕೂ ಶಾಲಾ ಕಟ್ಟಡ ಒಡೆಯದಂತೆ ರಸ್ತೆ ನಿರ್ಮಿಸುವಂತೆಯೂ ಇದಲ್ಲದೆ ಕೋರ್ಟ್ ವೃತ್ತದ ಬಳಿ ಶಬ್ಬಿರ್ ನಗರಕ್ಕೆ ತೆರಳಲು ಅಂಡರ್ ಪಾಸ್ ನಿರ್ಮಿಸಬೇಕು. ಐಟಿಐ ಕಾಲೇಜು, ಅರಸು ವೃತ್ತದ ಬಳಿಯ ದೇವರಾಜ ಅರಸು ಕಾಲೇಜು, ಟ್ಯಾಲೆಂಟ್ ಶಾಲೆಗೆ ತೆರಳಲು ಅನುವಾಗುವಂತೆ ರಸ್ತೆ ನಿರ್ಮಾಣ ಮಾಡುವಂತೆ ಅಧಿಕಾರಿಗಳಿಗೆ ತಿಳಿಸಿದರು. ಹೆದ್ದಾರಿ ಎಇಇ ರೂಪಾ ಎರ್ ರಾಷ್ಟ್ರೀಯ ಹೆದ್ದಾರಿಯ ಉಪ ಇಂಜಿನಿಯರ್ ಸೈಯದ್ ತಬಸುಮ್ ಲೋಕೇಶ್ ಮಾಜಿ, ನಗರಸಭೆ ಸದಸ್ಯ ಸೈಯದ್ ಯೂನಸ್, ಇಮ್ರಾನ್ ಸಿಪಿಎಂ ಬಸವರಾಜ್, ಆನಂದ್, ಚಂದ್ರಶೇಖರ್, ರಾಘು, ಕುಮಾರ್ ಇದ್ದರು.




ಚಿತ್ರ ಸುದ್ದಿ ಮುದಗಲ್ : ಪುರಸಭೆ ವ್ಯವಸ್ಥಾಪಕ ಸುರೇಶ್ ಹೊನ್ನಳ್ಳಿ ಅವರು ಪ್ರತಿ ದಿನ ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನಪತ್ರಿಕೆ ಓದಿ ನಮ್ಮ ಪತ್ರಿಕೆ ಬೆಳವಣಿಗೆಗೆ ಸಹಕರಿಸುತ್ತಿರುವ ಸರ್ವರಿಗೂ ಧನ್ಯವಾದಗಳು.

# ಪಾಪದ ಕೆಲಸ ಮಾಡದೇ ಬದುಕು ಸಾಗಿಸಿ




• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ನಾವು ಕೆಟ್ಟ ಕೆಲಸ ಮಾಡಿದರೆ ಕೆಟ್ಟದ್ದೇ ಆಗುತ್ತದೆ. ಕಳ್ಳತನ, ಸುಳ್ಳು ಹೇಳುವುದು ಪಾಪದ ತವರು ಮನೆ ಇದ್ದಂತೆ. ಪ್ರತಿಯೊಬ್ಬರೂ ಒಳ್ಳೆಯದನ್ನೇ ಮಾಡಬೇಕು ಎಂದು ಪೂರ್ಣಾನಂದ ಆಶ್ರಮದ ಅನಸೂಯಾತಾಯಿ ಹೇಳಿದರು.

ಬೀಳಗಿ ತಾಲೂಕಿನ ಬನ್ನಿದಿನ್ನಿ ಗ್ರಾಮದಲ್ಲಿ ಸದ್ಗುರು ಶ್ರದ್ಧಾನಂದ ಬ್ರಹ್ಮ ವಿದ್ಯಾಶ್ರಮದಲ್ಲಿ ಜರುಗಿದ ವಿಶ್ವಶಾಂತಿಗಾಗಿ ಜಪಯಜ್ಞ,19ನೇ ವಾರ್ಷಿಕೋತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಪೂಜ್ಯರು, ಮನುಷ್ಯ ಒಳ್ಳೆಯದನ್ನು ಮಾಡದಿದ್ದರೂ ಪರವಾಗಿಲ್ಲ, ಕೆಟ್ಟದ್ದನ್ನು ಮಾತ್ರ ಮಾಡಬಾರದು ಎಂದರು.

ಯರಗೊಪ್ಪದಗುರುಪಾದೇಶ್ವರಸ್ವಾಮಿ ಮಾತನಾಡಿ, ಶರೀರ, ವಾಣಿ, ಮನಸ್ಸು ಕೂಡಿ ಮಾಡುವುದೇ ಕರ್ಮ. ಇವುಗಳಲ್ಲಿ ನಿಷಿದ್ಧ ಮತ್ತು ವಿಹಿತ ಕರ್ಮಗಳಿವೆ. ಪಾಪ ಮಾಡುವುದರಿಂದ 84 ಕೋಟಿ ಜೀವರಾಶಿಯಾಗಿ ಪುನಃ ಪುನಃ ಹುಟ್ಟಬೇಕಾಗುತ್ತದೆ ಎಂದು ಎಚ್ಚರಿಸಿದರು. ಯಾಳವಾರ ಕಾಶಿನಾಥ ಸ್ವಾಮಿಗಳು ಮಾತನಾಡಿ, ಕೆಟ್ಟ ಕೆಲಸ ಹಾಗೂ ದುಶ್ಚಟಗಳಿಗೆ ದಾನ ಮಾಡದೇ ಒಳ್ಳೆಯ ಕಾರ್ಯಕ್ಕೆ ದಾನ ಮಾಡಬೇಕು. ಪುಣ್ಯಕರ್ಮ ಮಾಡಿದರೆ ಮಾನವ ಜನ್ಮ ಸಾರ್ಥಕವಾಗುತ್ತದೆ ಎಂದರು.

ಚಿಕ್ಕಶೆಲ್ಲಿಕೇರಿಯ ಅಡವೇಶಶಾಸ್ತ್ರಿ ಮಾತನಾಡಿ, ಪಾಪ ಮಾಡಲು ಮೂಲ ಕಾರಣ ಕಾಮ. ಇಲ್ಲದ್ದನ್ನು ಪಡೆಯಬೇಕೆಂಬ ಉತ್ಕಟ ಇಚ್ಛೆಯೇ ಕಾಮ. ಸತ್ಸಂಗ, ಶರಣರ, ಮಹಾತ್ಮರ ಸಂಘ ಮಾಡಬೇಕು. ಕರ್ಮ ಮಾಡುವಾಗ ಸ್ವತಂತ್ರರು. ಬಳಿಕ ಕರ್ಮದ ಆಧೀನ ಆಗಬೇಕಾಗುತ್ತದೆ ಎಂದರು. ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ.ಎಂ.ಸಾವಕಾರ ಸನ್ಮಾನ ಸ್ವೀಕರಿಸಿ ಮಾತನಾಡಿ, ಮಕ್ಕಳು ತಪ್ಪು ಮಾಡಿದಾಗ ತಾಯಂದಿರು ಪ್ರೋತ್ಸಾಹ ನೀಡದೇ ಬುದ್ಧಿ ಹೇಳಿ ಸಂಸ್ಕಾರವಂತರನ್ನಾಗಿ ಮಾಡಿದಾಗ ಒಳ್ಳೆಯ ಪ್ರಜೆಯಾಗಲು ಸಾಧ್ಯ ಎಂದರು. ಹಿರಿಯರಾದ ಪಿ.ಎಚ್.ಗೌಡರ ಮಾತನಾಡಿದರು. ವೇದಿಕೆ ಮೇಲೆ ಮಹಾದೇವಿತಾಯಿ, ಅಮಲಝುರಿಯ ಶರೀಫ ಶಾಸ್ತ್ರಿ, ಜಿಪಂ ಮಾಜಿ ಸದಸ್ಯ ಸಿದ್ದಪ್ಪ ಛಬ್ಬಿ, ಶಿವು ರಾಠೋಡ, ಭರಮಪ್ಪ ಗೌಡರ, ಹನಮಂತಗೌಡ ಪಾಟೀಲ, ಅಶೋಕ ಗೌಡರ, ಪರಸಪ್ಪ ಪಾಟೀಲ, ರಂಗಪ್ಪ ಲೆಂಕೆಪ್ಪನವರ, ಹನಮಂತ ಕಟಗೇರಿ, ಪರಸಪ್ಪ ಗೌಡರ ಮತ್ತಿತರರಿದ್ದರು.

# ಪತ್ರಕರ್ತರ ವಿರುದ್ಧದ ಆರೋಪ ಪ್ರಕರಣ ದೂರುದಾರನಿಗೆ ದಂಡ ವಿಧಿಸಿದ ಕೋರ್ಟ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ನಗರದ ಪತ್ರಕರ್ತರ ವಿರುದ್ಧದ ಪ್ರಕರಣಕ್ಕೆ ಸಂಬಂಧಿಸಿ ಪೋಲಿಸರು ನೀಡಿದ್ದ ಬಿ ರಿಪೋರ್ಟನ್ನು ಅಂಗೀಕರಿಸಿರುವ ನಗರದ ಸಿಜೆಎಂ ನ್ಯಾಯಾಲಯ ಸುಳ್ಳು ದೂರು ದಾಖಲಿಸಿದ್ದ ಖಾಸಗಿ ಯುಟೂಬ್ ಚಾನಲೊಂದರ ಪ್ರತಿನಿಧಿಗೆ 50 ಸಾವಿರ ರೂ.ಗಳ ದಂಡ ವಿಧಿಸಿದೆ.

ಚಾನಲ್ ಪ್ರತಿನಿಧಿ ಬಸನಗೌಡ ಮಹಾಂತಗೌಡ ಪಾಟೀಲ ನಗರದ ಬಿಟಿಡಿಎ ಕಚೇರಿ ಮುಂದೆ 2023 ರ ಮಾರ್ಚ 14 ರಂದು ಪ್ರತಿಭಟನೆ ನಡೆಯುತ್ತಿದ್ದ ವೇಳೆ ಮಾಧ್ಯಮ ಪ್ರತಿನಿಧಿಗಳ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಲ್ಲದೇ, ನನ್ನ ಮೇಲೆ ಹಲ್ಲೆ ಮಾಡಲು ಮಾರಕಾಸ್ತ್ರಗಳಿಂದ ಸ್ಥಳಕ್ಕೆ ಬಂದಿದ್ದರು ಎಂದು ಮಾಧ್ಯಮ ಪ್ರತಿನಿಧಿಗಳ ವಿರುದ್ಧ ಸುಳ್ಳು ಆರೋಪ ಹೊರಿಸಿ ಪೋಲಿಸರಿಗೆ ದೂರು ದಾಖಲಿಸಲು ಮುಂದಾಗಿದ್ದರು.

ಇದಕ್ಕೆ ಯಾವುದೇ ಪುರಾವೆ ಇಲ್ಲ ಎಂಬ ಕಾರಣದಿಂದ ಪೊಲೀಸರು ಪ್ರಕರಣ ದಾಖಲಿಸಿಕೊಳ್ಳಲು ನಿರಾಕರಿಸಿದ್ದರಿಂದ ನೇರವಾಗಿ ನ್ಯಾಯಾಲಯಕ್ಕೆ ಕಲಂ 323, 324, 307, 120 ಬಿ, 506 ಮತ್ತು 109 ಕಲಂ ಅನ್ವಯ ಐದು ಜನ ಪತ್ರಕರ್ತರ ವಿರುದ್ಧ ಪೊಲೀಸರ ಮೂಲಕ ಕೇಸ್ ದಾಖಲಿಸಬೇಕೆಂದು ನ್ಯಾಯಾಲಯಕ್ಕೆ ಪಾಟೀಲ ದೂರು ನೀಡಿದ್ದರು.

ಈ ಪ್ರಕರಣಕ್ಕೆ ಸಂಬಂಧಿಸಿ ತನಿಖೆ ಕೈಗೊಂಡಿದ್ದ ಪೊಲೀಸರು ದೂರುದಾರ ಬಸನಗೌಡ ಪಾಟೀಲ ಆರೋಪಿಸಿದಂತೆ ಯಾವುದೇ ಘಟನೆಗಳು ಪ್ರತಿಭಟನೆಯ ವೇಳೆ ಜರುಗಿಲ್ಲ ಎಂದು ಹೇಳಿ ನ್ಯಾಯಾಲಯಕ್ಕೆ ಬಿ-ರಿಪೋರ್ಟ್ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಸಿಜೆಎಂ ನ್ಯಾಯಾಧೀಶರಾದ ಮಹೇಶ ಪಾಟೀಲ, ಪೊಲೀಸರು ಸಲ್ಲಿಸಿದ ಬಿ-ರಿಪೋರ್ಟ್ ಅಂಗೀಕರಿಸಿ ದೂರುದಾರ ಬಸನಗೌಡ ಪಾಟೀಲ ಸಲ್ಲಿಸಿದ್ದ ಖಾಸಗಿ ದೂರನ್ನು ತಿರಸ್ಕರಿಸಿದರಲ್ಲದೇ ದೂರುದಾರನಿಗೆ 50 ಸಾವಿರ ರೂ. ದಂಡ ವಿಧಿಸಿ 30 ದಿನದೊಳಗಾಗಿ ದಂಡ ಪಾವತಿಸಲು ಆದೇಶಿಸಿದ್ದಾರೆ.

ನಗರದ ಪತ್ರಕರ್ತರಾದ ಸಂತೋಷ ದೇಶಪಾಂಡೆ, ಅನಿರುದ್ಧ ಗಲಗಲಿ, ಆನಂದ ದಲಭಂಜನ, ಶಂಕರ ಕಲ್ಯಾಣಿ, ಮಹೇಶ ಅಂಗಡಿ ಹಾಗೂ ಮೃತ ರಾಮ ಮನಗೂಳಿ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು.

ಸುಳ್ಳು ಕೇಸ್ ಹಾಕಿ ನ್ಯಾಯಾಲಯದ ಅಮೂಲ್ಯ ಸಮಯ, ಹಣ ಮತ್ತು ಶ್ರಮ ವ್ಯರ್ಥ ಮಾಡಿದ್ದಾರೆ. ಯಾವುದೇ ಘಟನೆ ನಡೆಯದಿದ್ದರೂ ಆಪಾದಿತರು ನಿರೀಕ್ಷಣಾ ಜಾಮೀನು ಪಡೆಯುವಂತಾಗಿತ್ತು. ಆದ್ದರಿಂದ ದೂರುದಾರರು ಆಪಾದಿತರಿಗೆ ಪರಿಹಾರ ನೀಡಲು ಬಾಧ್ಯಸ್ಥರಾಗಿದ್ದಾರೆ ಎಂಬುದನ್ನು ಆದೇಶದಲ್ಲಿ ತಿಳಿಸಲಾಗಿದೆ ಎಂದು ಪತ್ರಕರ್ತರ ಪರ ವಕೀಲ ವಿಜಯ ಬರಗುಂಡಿ ತಿಳಿಸಿದ್ದಾರೆ.

# ಯಾತ್ರಿಗಳಿಗೆ ಬೀಳ್ಕೊಡುಗೆ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಶ್ರೀಶೈಲ ಮಲ್ಲಿಕಾರ್ಜುನ ದರ್ಶನಕ್ಕೆ ಬುಧವಾರ ಪಾದಯಾತ್ರೆ ಹೊರಟ ತಾಲೂಕಿನ ಹಳ್ಳೂರ ಗ್ರಾಮದ ಭಕ್ತರನ್ನು ಗ್ರಾಮಸ್ಥರು ಕಂಬಿ ಪೂಜೆ ನೆರವೇರಿಸಿ, ಪ್ರಸಾದ ವಿತರಣೆ ಮಾಡಿ ಬೀಳ್ಕೊಟ್ಟರು.

ಬಿಲ್‌ಕೆರೂರಿನ ಬಿಲ್ವಾಶ್ರಮ ಹಿರೇಮಠದ ಸಿದ್ಧಲಿಂಗ ಶಿವಾಚಾರ್ಯರ ನೇತೃತ್ವದಲ್ಲಿ ಸ್ಥಳೀಯ ಬಸವಣ್ಣ ದೇವರ ದೇವಸ್ಥಾನದಲ್ಲಿ ಕಂಬಿ ಪೂಜೆ ಹಾಗೂ ಬಸವಣ್ಣನ ಪೂಜೆ ನೆರವೇರಿಸಲಾಯಿತು. ಮೊದಲು ಬಾಜಾ ಭಜಂತ್ರಿ ಹಾಗೂ ಗ್ರಾಮದ ಮಹಿಳೆಯರ ಕಳಸಾರತಿಯೊಂದಿಗೆ ಪಾದಯಾತ್ರಿಗಳನ್ನು ದೇವಸ್ಥಾನಕ್ಕೆ ಕರೆತರಲಾಯಿತು.

ಪೂಜಾ ಕೈಕಂರ್ಯ ನೆರವೇರಿದ ನಂತರ ಮಲ್ಲಣ್ಣ ರಾಮನಗೌಡ ಪಾಟೀಲ ಕುಟುಂಬದವರು ಮಾಡಿಸಿದ್ದ ಪ್ರಸಾದ ಸ್ವೀಕರಿಸಲಾಯಿತು. 200 ಕ್ಕೂ ಹೆಚ್ಚು ಭಕ್ತರು ಗ್ರಾಮದಿಂದ ಶ್ರೀಶೈಲ ಯಾತ್ರೆ ಹೊರಟಿದ್ದು, ಇಬ್ಬರೂ ಯುವಕರು ಪ್ರಥಮ ಬಾರಿಗೆ ಮರಗಾಲು ಕಟ್ಟಿಕೊಂಡು ತೆರಳಿದರು.

ದಾರಿಯುದ್ದಕ್ಕೂ ಯಾವುದೇ ತೊಂದರೆಯಾಗದಿರಲಿ, ಮಲ್ಲಯ್ಯನ ಕೃಪೆ ತಮಗಿರಲಿ ಎಂದು ಸಿದ್ಧಲಿಂಗ ಸ್ವಾಮೀಜಿ ಪಾದಯಾತ್ರಿಗಳಿಗೆ ಹಾರೈಸಿದರು. ಬಸವೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಮಹಾಂತೇಶ ಮಣಿನಾಗರ, ಗ್ರಾಮದ ಹಿರಿಯರು, ಮಹಿಳೆಯರು, ಯುವಕರು ಇದ್ದರು.

# ಸುಶಿಕ್ಷಿತ ಸಮಾಜ ನಿರ್ಮಾಣ ಮಾಡುವುದೇ ವೀರೇಂದ್ರ ಹೆಗ್ಗಡೆಯವರ ಕನಸು: ಸುಧೀರ್ ಹಂಗಳೂರು

• ಮಲ್ಲಮ್ಮ ನುಡಿ ವಾರ್ತೆ ಸಿರುಗುಪ್ಪ



ಶ್ರೀಕ್ಷೇತ್ರಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಸಿರುಗುಪ್ಪ ತಾಲೂಕಿನ ಕರೂರು ಗ್ರಾಮದ ನೇತಾಜಿ ಪ್ರೌಢ ಶಾಲೆಯಲ್ಲಿ 10ನೇ ತರಗತಿಯ ವಿದ್ಯಾರ್ಥಿಗಳಿಗೆ 3 ತಿಂಗಳವರೆಗೆ ಉಚಿತ ಟ್ಯೂಷನ್ ಕ್ಲಾಸ್ ನಡೆಸಿದ್ದು ಈ ದಿನ ಟ್ಯೂಷನ್ ಕ್ಲಾಸ್ ಸಮಾರೋಪ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು, ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ತಾಲೂಕು ಕ್ಷೇತ್ರ ಯೋಜನಾಧಿಕಾರಿ ಸುಧೀರ್ ಹಂಗಳೂರು ಮಾತನಾಡಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಜನರಿಗೆ ಪ್ರಗತಿನಿಧಿ ನೀಡುವುದು ಮಾತ್ರವಲ್ಲದೆ ಹಲವಾರು ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಹೆಸರುವಾಸಿಯಾಗಿದೆ, ಸಮುದಾಯ ಅಭಿವೃದ್ಧಿ ಕಾಯ ಕ್ರಮದ ಜ್ಞಾನದೀಪ ಶಾಲಾ ಶಿಕ್ಷಣ ಕಾರ್ಯಕ್ರಮದಡಿಯಲ್ಲಿ 2025-26ನೇ ಸಾಲಿನ ಶೈಕ್ಷಣಿಕ ಸಾಲಿನಲ್ಲಿ ರಾಜ್ಯಾದ್ಯಾಂತ 1028 ಶಾಲೆಗಳಿಗೆ ಜ್ಞಾನದೀಪ ಅತಿಥಿ ಶಿಕ್ಷಕರ ನಿಯೋಜನೆ ಮಾಡಲಾಗಿದ್ದು, ಇದಕ್ಕಾಗಿ 4.25 ಕೋಟಿ ಅನುದಾನ ಮೀಸಲಿಡಲಾಗಿದೆ. ಈವರೆಗೆ 10234 ಗೌರವ ಶಿಕ್ಷಕರನ್ನು ಒದಗಿಸಿದ್ದು 29 ಕೋಟಿ 96 ಲಕ್ಷದ 97 ಸಾವಿರ ಮೊತ್ತವನ್ನು ವಿನಿಯೋಗಿಸಲಾಗಿದೆ.

ಶಾಲೆಗಳಿಗೆ ಪೀಠೋಪಕರಣ ಒದಗಿಸುವ ನಿಟ್ಟಿನಲ್ಲಿ ಪ್ರಸಕ್ತ ಸಾಲಿನಲ್ಲಿ ರಾಜ್ಯದ 508 ಶಾಲೆಗಳಿಗೆ ರೂ. 2.77 ಕೋಟಿ ಮೌಲ್ಯದ 4064 ಜೊತೆ ಬೆಂಚು-ಡೆಸ್ಕ್‌ಗಳನ್ನು ಒದಗಿಸಿದ್ದು ಇದರಿಂದ 20 ಸಾವಿರದ 320 ವಿದ್ಯಾರ್ಥಿಗಳಿಗೆ ಅನುಕೂಲವಾಗಿರುತ್ತದೆ. ಈವರೆಗೆ 11621 ಪೀಠೋಪಕರಣಗಳನ್ನು ಒದಗಿಸಿದ್ದು ಇದಕ್ಕಾಗಿ 28 ಕೋಟಿ 54 ಲಕ್ಷದ 83 ಸಾವಿರ ಮೊತ್ತ ವಿನಿಯೋಗಿಸಲಾಗಿರುತ್ತದೆ.

ಯೋಜನೆಯ ಪಾಲುದಾರ ಕುಟುಂಬಗಳ ಮಕ್ಕಳಿಗೆ ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣಕ್ಕೆ ಅನುಕೂಲವಾಗುವಂತೆ ಈ ತನಕ ಒಟ್ಟು 1,17,934 ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಿದ್ದು, ಪ್ರಸ್ತುತ ವರ್ಷ 60,531 ಮಕ್ಕಳಿಗೆ ರೂ. 32.44 ಕೋಟಿ ಮೌಲ್ಯದ ವಿದ್ಯಾರ್ಥಿ ವೇತನ ಒದಗಿಸಲಾಗಿದೆ. ಈವರೆಗೆ 1 ಲಕ್ಷ 25 ಸಾವಿರದ 10 ಜನ ವಿದ್ಯಾರ್ಥಿಗಳಿಗೆ 152 ಕೋಟಿ 74 ಲಕ್ಷದ 42 ಸಾವಿರ ಮೊತ್ತ ವಿನಿಯೋಗಿಸಲಾಗಿರುತ್ತದೆ.

ಇಷ್ಟು ಮಾತ್ರವಲ್ಲದೆ ಹಿಂದೂ ರುದ್ರಭೂಮಿ ಅಭಿವೃದ್ಧಿ, ಗ್ರಾಮ ಕಲ್ಯಾಣ ಯೋಜನೆ, ನವಚೇತನ ಕಾರ್ಯಕ್ರಮ, ಗೋ-ಶಾಲೆ ಅಭಿವೃದ್ಧಿ, ಜನಮಂಗಲ ಕಾರ್ಯಕ್ರಮ, ಶ್ರದ್ಧಾ ಕೇಂದ್ರಗಳ ಸ್ವಚ್ಚತಾ ಕಾರ್ಯಕ್ರಮ, ಪ್ರಕೃತಿ ವಿಕೋಪಕ್ಕೆ ಪರಿಹಾರ, ವಿಶೇಷಚೇತನರಿಗೆ ಸಲಕರಣೆಗಳ ವಿತರಣೆ, ನಿರ್ಗತಿಕರಿಗೆ ಮಾಸಾಶನ ವಿತರಣೆ, ನಿರ್ಗತಿಕರಿಗೆ ವಾತ್ಸಲ್ಯ ಕಿಟ್‌ಗಳ ವಿತರಣೆ, ವಾತ್ಸಲ್ಯ ಮನೆ ರಚನೆ, ಶುದ್ಧಗಂಗಾ ಘಟಕಗಳು, ಕೆರೆಗಳ ಹೂಳೆತ್ತುವುದು, ಹೀಗೆ ಹಲವು ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಯೋಜನೆಯು ಬಡವರ ಪಾಲಿನ ಆಶಾಕಿರಣವಾಗಿದೆ, ಈ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡಲು ಪೂಜ್ಯ ಡಾ ಡಿ ವೀರೇಂದ್ರ ಹೆಗ್ಗಡೆಯವರು ಮಾತೃಶ್ರೀ ಹೇಮಾವತಿ ವಿ ಹೆಗ್ಗಡೆಯವರ ಮಾಹಿತಿ ಮಾರ್ಗದರ್ಶನದಿಂದ ಮಾತ್ರ ಸಾಧ್ಯ ಎಂದು ತಿಳಿಸಿದರು.

ಟ್ಯೂಷನ್ ನಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಈ ವರ್ಷ ಉತ್ತಮ ಫಲಿತಾಂಶ ಪಡೆಯುವುದರೊಂದಿಗೆ ಶಾಲೆಗೆ ಹೆಸರು ತರುವಂತಾಗಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ನೇತಾಜಿ ಪ್ರೌಢಶಾಲೆಯ ಕಾರ್ಯದರ್ಶಿ ಜಯಲಕ್ಷ್ಮೀ, ಶಾಲಾ ಮುಖ್ಯಗುರುಗಳಾದ ರಾಮಕೃಷ್ಣ ಪೂಜಾರ, ಶಿಕ್ಷಕರಾದ ಸೋಮಲಿಂಗಪ್ಪ, ಭಾಗ್ಯಶ್ರೀ ಪಾಟೀಲ್, ಜಡೇಶ, ಅನ್ನಪೂರ್ಣ, ಪಲ್ಲವಿ, ಮಲ್ಲಯ್ಯ ಹಾಗೂ ವಲಯ ಮೇಲ್ವಿಚಾರಕ ಹನಮಪ್ಪ, ಸ್ಥಳೀಯ ಸೇವಾಪ್ರತಿನಿಧಿ ಲಕ್ಷ್ಮೀ, ದೇವಿ, ವಿದ್ಯಾರ್ಥಿ ವಿದ್ಯಾರ್ಥಿನೀಯರು ಉಪಸ್ಥಿತರಿದ್ದರು.

# ಕಾಕುಬಾಳ ಗ್ರಾಮದಲ್ಲಿ ಅಕ್ರಮ ಪಡಿತರ ಅಕ್ಕಿ ಜಪ್ತಿ

• ಮಲ್ಲಮ್ಮ ನುಡಿ ವಾರ್ತೆ ಹೊಸಪೇಟೆ

ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ವಿಜಯನಗರ ಹೊಸಪೇಟೆ ಮಾರ್ಚ್ 3 ರಂದು ತಾಲ್ಲೂಕಿನ ಕಾಕುಬಾಳ ಗ್ರಾಮದ ಜೋಳದ ರಸ್ತೆ ಕರಿಯಮ್ಮನ ಗುಡಿ ಹತ್ತಿರವಿರುವ ಮನೆಯೊಂದರ ಮುಂದೆ ಅಕ್ರಮವಾಗಿ ಸಂಗ್ರಹಿಸಿಡಲಾಗಿದ್ದ ಪಡಿತರ ಅಕ್ಕಿಯನ್ನು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳು ದಾಳಿ ನಡೆಸಿ ಜಪ್ತಿ ಮಾಡಿದ್ದಾರೆ.

ಖಚಿತ ಮಾಹಿತಿಯ ಮೇರೆಗೆ ದಾಳಿ ನಡೆಸಿದ ಸಂದರ್ಭದಲ್ಲಿ, ಯಾವುದೇ ಪರವಾನಗಿ ಇಲ್ಲದೆ ಅನಾಧಿಕೃತವಾಗಿ ಸಂಗ್ರಹಿಸಿಟ್ಟಿದ್ದ ಅಂದಾಜು 60.80 ಕ್ವಿಂಟಲ್ ಪಡಿತರ ಅಕ್ಕಿ ಪತ್ತೆಯಾಗಿದೆ. ಜಪ್ತಿ ಮಾಡಲಾದ ಅಕ್ಕಿಯ ಮೌಲ್ಯ ಅಂದಾಜು ರೂ. 2,10,368 ಎಂದು ಅಂದಾಜಿಸಲಾಗಿದೆ.

ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಕ್ಕಿಯನ್ನು ದುರುಪಯೋಗಪಡಿಸಿಕೊಂಡು, ಅಕ್ರಮವಾಗಿ ಸಂಗ್ರಹಿಸಿರುವ ಹಿನ್ನೆಲೆಯಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗಿದೆ. ಈ ಕುರಿತು ಹೊಸಪೇಟೆ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ: 0039/2026 ರಂತೆ ಪ್ರಕರಣ ದಾಖಲಿಸಲಾಗಿರುತ್ತದೆ.

ಪಡಿತರ ಅಕ್ಕಿಯ ಅಕ್ರಮ ದಾಸ್ತಾನು ಮತ್ತು ಸಾಗಾಣಿಕೆ ಕಂಡುಬಂದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕರು ಇಂತಹ ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಬೇಕು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ರಿಯಾಜ್ ತಿಳಿಸಿದ್ದಾರೆ.

# ಪ್ರವೇಶಾತಿಗೆ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಪ್ರಸಕ್ತ ಸಾಲಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರ ಕನ್ನಡ ವಿಶ್ವವಿದ್ಯಾಲಯ ದೂರ ಶಿಕ್ಷಣ ಕೇಂದ್ರದಿಂದ ಸ್ನಾತಕ, ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಮುಕ್ತ ವಿಶ್ವವಿದ್ಯಾಲಯದಲ್ಲಿ ಬಿ.ಎ, ಬಿ.ಕಾಂ, ಬಿ.ಬಿ.ಎ, ಬಿ.ಸಿ.ಎ, ಬಿ.ಎಸ್ಸಿ(ಐ.ಟಿ), ಬಿ.ಎಸ್ಸಿ, ಬಿ.ಎಸ್.ಡಬ್ಲ್ಯೂ, ಬಿ.ಎಲ್.ಐ.ಎಸ್ಸಿ, ಎಂ.ಎ, ಎಂಕಾಂ, ಎಂಬಿಎ, ಎಂಸಿಎ, ಎಂ.ಎಸ್. ಡಬ್ಲ್ಯೂ, ಪಿಜಿ, ಸರ್ಟಿಫಿಕೇಟ್ ಪ್ರೋಗ್ರಾಮ್, ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಪ್ರೋಗ್ರಾಮ್‌ಗಳಿಗೆ ಪ್ರವೇಶಾತಿಗೆ ಅವಕಾಶ ಕಲ್ಪಿಸಲಾಗಿದೆ.

ಆಸಕ್ತ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಧಿಕೃತ ವೆಬ್‌ಸೈಟ್ www.ksoumysuru.ac.in ನ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡಿ, ನಂತರ ಪ್ರಾದೇಶಿಕ ಕೇಂದ್ರಕ್ಕೆ ಭೇಟಿ ನೀಡಿ ಪ್ರವೇಶಾತಿ ಪಡೆಯಬಹುದಾಗಿದೆ. ವಿಶೇಷವಾಗಿ ಬಿ.ಪಿ.ಎಲ್ ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿಗಳಿಗೆ, ಡಿಫೆನ್ಸ್ ಹಾಗೂ ಮಾಜಿ ಸೈನಿಕರಿಗೆ, ಆಟೋ, ಕ್ಯಾಬ್ ಚಾಲಕರ ಮಕ್ಕಳಿಗೆ, ಕೆ.ಎಸ್.ಆರ್.ಟಿ.ಸಿ ನೌಕರರಿಗೆ ಭೋದನಾ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುತ್ತದೆ. ಅದರಂತೆಯೇ ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ತುತ್ತಾದ ಪೋಷಕರ ಮಕ್ಕಳಿಗೆ ಹಾಗೂ ತೃತಿಯ ಲಿಂಗ ಮತ್ತು ದೃಷ್ಟಿಹೀನ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ನೀಡಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿಜಯನಗರ ಪ್ರಾದೇಶಿಕ ಕೇಂದ್ರ ಕನ್ನಡ ವಿಶ್ವವಿದ್ಯಾಲಯ ಆವರಣ ಅಥವಾ ದೂರವಾಣಿ ಸಂಖ್ಯೆ : 8088457148, 8296680114, 8088681698 ಸಂಪರ್ಕಿಸಬಹುದು ಎಂದು ಪ್ರಾದೇಶಿಕ ನಿರ್ದೇಶಕರಾದ ಡಿ.ಎಸ್.ಮೈತ್ರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶ್ರೀಶೈಲ ಪಾದಯಾತ್ರಿಗಳಿಗೆ ಉಚಿತ ಆರೋಗ್ಯ ಸೇವೆ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ನಗರದ ಬಿ.ವಿ.ವಿ ಸಂಘದ ಎಸ್.ನಿಜಲಿಂಗಪ್ಪ ಮೆಡಿಕಲ್ ಕಾಲೇಜು ಮತ್ತು ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಯ ಸಮುದಾಯ ಆರೋಗ್ಯ ವಿಭಾಗದ ತಜ್ಞ ವೈದ್ಯರಿಂದ ಶ್ರೀಶೈಲಕ್ಕೆ ತೆರಳುವ ಸಹಸ್ರಾರು ಪಾದಯಾತ್ರಿಗಳಿಗೆ ಉಚಿತವಾಗಿ ಆರೋಗ್ಯ ತಪಾಸಣೆ ನಡೆಸಿ ಔಷಧಿ ವಿತರಣೆ ಮಾಡಲಾಯಿತು. ಮಾರ್ಚ್ 4 ಮತ್ತು 5 ಎರಡು ದಿನಗಳ ಕಾಲ ಆಯೋಜಿಸಲಾಗಿರುವ ಉಚಿತ ಆರೋಗ್ಯ ಸೇವಾ ಶಿಬಿರಕ್ಕೆ ಬಿ.ವಿ.ವಿ ಸಂಘದ ಹಣಕಾಸು ಅಧಿಕಾರಿ ಅನಂತ ಓಂಕಾರ ಚಾಲನೆ ನೀಡಿದರು. ಉಚಿತ ಆರೋಗ್ಯ ಸೇವಾ ಶಿಬಿರವನ್ನು ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಸಿ.ಚರಂತಿಮಠ ಅಪೇಕ್ಷೆ ಮೇರೆಗೆ ಆಯೋಜಿಸಲಾಗಿದ್ದು, ಬೆಳಗ್ಗೆ 6 ಗಂಟೆಯಿಂದ ಪಾದಯಾತ್ರಿಗಳು ತಂಡತಂಡವಾಗಿ ಆಗಮಿಸಿ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಅಗತ್ಯ ಔಷಧಿಗಳನ್ನು ಪಡೆದರು. ಶಿಬಿರದ ನೇತೃತ್ವವನ್ನು ಡಾ.ಸಂತೋಷ ನಾಯಕ್ ವಹಿಸಿದ್ದರು. ಕುಮಾರೇಶ್ವರ ಆಸ್ಪತ್ರೆ, ಆಯುರ್ವೇದ ಕಾಲೇಜಿನ ವೈದ್ಯರು, ಫಾರ್ಮಸಿ ಕಾಲೇಜ್ ಸಿಬ್ಬಂದಿ, ನರ್ಸಿಂಗ್ ಸಿಬ್ಬಂದಿ, ವೈದ್ಯಕೀಯ ವಿದ್ಯಾರ್ಥಿಗಳು ಪಾದಯಾತ್ರಿಗಳ ಆರೋಗ್ಯ ತಪಾಸಣೆ ಮಾಡಿ ಅಗತ್ಯ ಚಿಕಿತ್ಸೆ ನೀಡಿದರು.

# ಕಾಳಿಂಗವರ್ಧನ ಗೌರವ ಡಾಕ್ಟರೇಟ್ ಸೇವಾ ರತ್ನ ಪ್ರಶಸ್ತಿ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ / ಕಂಪ್ಲಿ




ತಾಲೂಕು ರೈಲ್ವೆ ಮಾರ್ಗಕ್ಕಾಗಿ ಕ್ರಿಯಾಸಮಿತಿ ಕಾರ್ಯದರ್ಶಿ ರಾಮಸಾಗರದ ಗ್ರಾಮೀಣ ಭಾಗದ ಹಾದಿಮನಿ ಕಾಳಿಂಗವರ್ಧನ ಇವರ ವ್ಯವಹಾರ ಮತ್ತು ಸಾಮಾಜಿಕ ಸೇವಕ ವಿವಿಧ ಕ್ಷೇತ್ರದಲ್ಲಿ ಸಾಧನೆ ಜೊತೆಗೆ ಸಮಾಜದ ಸೇವೆ ಗುರುತಿಸಿ, ಈ ಅಕಾಡೆಮಿಯು ಏಷಿಯಾ ಇಂಟರ್ ನ್ಯಾಷನಲ್ ಕಲ್ಚರ್ ರಿಸರ್ಚ್ ಯೂನಿವರ್ಸಿಟಿಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ ಮತ್ತು ಇದು ಭಾರತ ಸರ್ಕಾರದ ನೀತಿ ಆಯೋಗದಡಿ ನೋಂದಾಯಿತ ಸಂಸ್ಥೆಯಾಗಿದೆ.

ಸಮಾಜದ ವಿವಿಧ ಕ್ಷೇತ್ರಗಳಲ್ಲಿ (ಶಿಕ್ಷಣ, ಸಮಾಜ ಸೇವೆ, ಸಂಶೋಧನೆ) ಅತ್ಯುತ್ತಮ ಸಾಧನೆ ಮಾಡಿದ ವ್ಯಕ್ತಿಗಳನ್ನು ಗುರುತಿಸಿ ಈ ಗೌರವ ಪದವಿಯನ್ನು ನೀಡಲಾಗುತ್ತದೆ ಹಾಗೆಯೇ ಹೊಸೂರಿನ ಏಷಿಯಾ ಇಂಟರ್ ನ್ಯಾಷನಲ್ ರಿಸರ್ಚ್ ಅಕಾಡೆಮಿಯವರು ಶನಿವಾರ ಗೌರವ ಡಾಕ್ಟರೇಟ್‌ನೊಂದಿಗೆ, 2026ರ ಗೋಲ್ಡನ್ ಐಕಾನಿಕ್ ಮತ್ತು ಸೇವಾ ರತ್ನ ಅವಾರ್ಡ್ ನೀಡಿ ಗೌರವಿಸಿದ್ದಾರೆ. ಪ್ರಮುಖರಾದ ಕೆ.ಎ.ಮನೋಕಾರನ್, ಡಾ.ಕೃಷ್ಣಮೂರ್ತಿ ಮಹಾಸ್ವಾಮೀಜಿ, ಡಾ.ಎ.ಶ್ರೀಧರ್, ಡಾ.ಕೆ.ಎಸ್.ಸುಬ್ರಹ್ಮಣ್ಯಂ, ಆರ್.ಬಿ.ಪಾಟೀಲ್, ಡಾ.ವೈಭವ್ ಗುಣಶೇಖರ, ಡಾ.ಕರುಪಣ್ಣ ಸ್ವಾಮೀಜಿ ಸೇರಿದಂತೆ ಕುಟುಂಬ ವರ್ಗದವರು ಇದ್ದರು.

# 34 ವಿದ್ಯಾರ್ಥಿಗಳು ಗೈರು

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ನಡೆಯುತ್ತಿದ್ದು, ಇಂದು ಉರ್ದು ಭಾಷ ವಿಷಯಕ್ಕೆ 02 ವಿದ್ಯಾರ್ಥಿಗಳು ಹಾಗೂ ಸಂಸ್ಕೃತ ವಿಷಯಕ್ಕೆ 34 ವಿದ್ಯಾರ್ಥಿಗಳು ಗೈರಾಗಿದ್ದಾರೆ.

ಉರ್ದು ವಿಷಯಕ್ಕೆ 63 ವಿದ್ಯಾರ್ಥಿಗಳು ನೊಂದಣಿ ಮಾಡಿಕೊಂಡಿದ್ದು, ಇದರಲ್ಲಿ 61 ವಿದ್ಯಾರ್ಥಿಗಳು ಹಾಜರಾಗಿದ್ದಾರೆ. ಸಂಸ್ಕೃತ ಭಾಷಾ ವಿಷಯ ಪರೀಕ್ಷೆಗೆ 605 ವಿದ್ಯಾರ್ಥಿಗಳು ನೊಂದಣಿಯಾಗಿದ್ದು, ಈ ಪೈಕಿ 571 ವಿದ್ಯಾರ್ಥಿಗಳು ಹಾಜರಾಗಿದ್ದಾರೆ ಎಂದು ಪದವಿ ಪೂರ್ವ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ನಾಗರಾಜ್ ಹವಾಲ್ದಾರ್ ತಿಳಿಸಿದ್ದಾರೆ.

## ಪುರಸಭೆ ಕಸ ವಿಲೇವಾರಿ ಹೋಗುವ ರಸ್ತೆ ಬದಿಯಲ್ಲಿ ಕಲ್ಮಶ

# ಇಲಾಖೆಯ ಗಮನಕ್ಕೆ ಇದ್ದರೂ ಕಣ್ಮುಚ್ಚಿ ಕುಳಿತ ಅಧಿಕಾರಿ

• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ

ತಾಲೂಕಿನ 6ನೇ ವಾರ್ಡ್ ಕೊಟ್ಟಾಲ್ ರಸ್ತೆ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಹತ್ತಿರದ ಕಾಲುವೆ ದುರಸ್ತಿ ಮತ್ತು ಕಸ ವಿಲೇವಾರಿ ಘಟಕಕ್ಕೆ ಹೋಗುವ ರಸ್ತೆಯಲ್ಲೇ ಪ್ರತಿ ದಿನ ಕಸವಿಲೇವಾರಿ ಆಟೋಗಳು ಚಲಿಸುತ್ತಿದ್ದು, ಆಟೋ ಚಾಲಕರು ಹಾಗೂ ಕಸವಿಲೇವಾರಿ ಮೇಲಧಿಕಾರಿಗಳು ಹಾಗೂ ಪುರಸಭೆ ಇಲಾಖೆಯವ ಇದರ ದುರಸ್ತಿ ಬಗ್ಗೆ ಗಮನಕ್ಕೆ ಮೌಖಿಕ ಹಾಗೂ ದೂರಿನ ಮೂಲಕ 03-01-2026 ರಂದು ಮನವಿ ನೀಡಿದರು ಸಹ ಯಾವುದೇ ಪ್ರಯೋಜನವಾಗಿಲ್ಲ.

ಪ್ರತಿದಿನ ಇದರ ಬಗ್ಗೆ ಮಾಹಿತಿ ಕೊಟ್ಟಿದೆ ಆದರೆ ಕೊಟ್ಟಾಲ್ ರಸ್ತೆ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಹತ್ತಿರದಲ್ಲಿರುವ ಹಾಗೂ ಕಸವಿಲೇವಾರಿ ಘಟಕದ ರಸ್ತೆಯಲ್ಲಿರುವ ಕಾಲುವೆಯ ತಡೆಗೋಡೆಗಳು ಸಂಪೂರ್ಣವಾಗಿ ಶಿಥಿಲಗೊಂಡು ಭೂ ಕುಸಿತ ಸರಿಪಡಿಸಲು, ಮತ್ತು ಅಯ್ಯಪ್ಪ ಸ್ವಾಮಿಯ ದೇವಾಲಯದಲ್ಲಿ ಕಸ ವಿಲೇವಾರಿಗೆ ನಿರ್ಲಕ್ಷತೋರುತ್ತಿರುವುದಕ್ಕೆ ಮನವಿ ಕೊಟ್ಟರು ಕ್ರಮ ಕೈಗೊಳ್ಳದ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಕಾಲುವೆ ಸರಿಪಡಿಸಲು ದೂರಿನ ಮುಖಾಂತರ ಭೂ ಕುಸಿತ ಉಂಟಾದ ಸ್ಥಳದಲ್ಲಿ ಕಟ್ಟಿಗೆಗಳನ್ನು ನೆಟ್ಟು ಅದಕ್ಕೆ ಕೆಂಪು ರಿಬ್ಬನ್ನಿನ ಬಟ್ಟೆಯನ್ನು ಸುತ್ತಿ ಸಾಧನೆಗೈದಿದ್ದು ಬಿಟ್ಟರೆ ಮತ್ತೇನನ್ನು ಮಾಡಿಲ್ಲ..! ಮುಂಬರುವ ಮಳೆಗಾಲದಲ್ಲಿ ಕಾಲುವೆಗಳಿಗೆ ನೀರು ಹರಿದರೆ ಪುರಸಭೆಯ ಕಸ ವಿಲೇವಾರಿ ಘಟಕಕ್ಕೆ ಹೋಗಿ ಬರುವ ಟ್ರ್ಯಾಕ್ಟರ್, ಮ್ಯಾಕ್ಸಿ ಕ್ಯಾಬ್, ಗೂಡ್ಸ್, ವಾಹನ ಮತ್ತು ಅಯ್ಯಪ್ಪ ಸ್ವಾಮಿ ದೇವಸ್ಥಾನಕ್ಕೆ ಹೋಗಿ ಬರುವ ಭಕ್ತಾದಿಗಳ ವಾಹನಗಳು ತಿರುಗಾಡುತ್ತಿದ್ದು ಹಾಗೂ ಸಾಯಿಬಾಬ ಗುಡಿಯ ಪುರಸಭೆಯ ಉದ್ಯಾನದಲ್ಲಿ ಮಕ್ಕಳು ಆಟವಾಡುವ ಸಂದರ್ಭದಲ್ಲಿ ಇನ್ನಷ್ಟು ಅನಾಹುತಕ್ಕೆ ಕಾರಣವಾಗುತ್ತದೆ. ಹಾಗೆಯೇ ಇದರ ಪಕ್ಕದಲ್ಲಿ ಖಾಸಗಿ ಶಾಲೆಯು ಸಹ ಇದ್ದು ಶಾಲಾ ವಾಹನಗಳು ಸಂಚರಿಸುತ್ತಿರುತ್ತವೆ, ಅದು ಅಲ್ಲದೆ ನಮ್ಮ ಪುರಸಭೆಯ ಮುಖ್ಯ ಅಧಿಕಾರಿಗಳು ಹಾಗೂ ತಹಸಿಲ್ದಾರರು ಮತ್ತು ಹಾವೇರಿಯ ವಿಶೇಷ ತಹಸಿಲ್ದಾರರು ಸಹ ಬಂದು ಹೋಗುತ್ತಿರುವುದು ಕಂಡುಬಂದಿದ್ದು ಆದರೂ ಸಹ ಇದಕ್ಕೂ ನಮಗೂ ಸಂಬಂಧವಿಲ್ಲವೆಂದು ಕೈಕಟ್ಟಿ ಕುಳಿತಿದ್ದಾರೆ, ಹಾಗೆಯೇ ಇದರ ಬಗ್ಗೆ ಗಮನ ಹರಿಸದೆ ಇರುವುದು ದುರ್ದೈವ ಆದ್ದರಿಂದ ತಾವುಗಳು ಸ್ಥಳ ಪರಿಶೀಲಿಸಿ, ವಿಶೇಷ ಇಲ್ಲ ತುರ್ತು ಅನುದಾನದಲ್ಲಿ ದುರಸ್ತಿಗೊಳಿಸಲು ಆದೇಶಿಸಬೇಕೆಂದು ದಕ್ಷತೆಗೆ ಹೆಸರಾದ ತಮಗೆ ವೇದಿಕೆಯ ರಾಜ್ಯಾಧ್ಯಕ್ಷರಾದ ಚೆನ್ನಯ್ಯ ವಸ್ತ್ರದ್ ರಾಜ್ಯ ಕಾರ್ಯಧ್ಯಕ್ಷರಾದ ಟಿ ಎಚ್ ರಾಜಕುಮಾರ್ ಪ್ರಧಾನ ಕಾರ್ಯದರ್ಶಿಯಾದ ರಾಮಕೃಷ್ಣ ಸಂಘಟನಾ ಕಾರ್ಯದರ್ಶಿಯಾದ ಮನೋಜ್ ರಾಜ್ಯ ಪದಾಧಿಕಾರಿಗಳು ಮತ್ತು ಜಿಲ್ಲಾ ಹಾಗೂ ತಾಲೂಕು ಪದಾಧಿಕಾರಿಗಳ ಸಾರ್ವಜನಿಕರ



ಹಾಗೂ ಅಯ್ಯಪ್ಪ ಸ್ವಾಮಿ ಭಕ್ತಾದಿಗಳ ಖಾಸಗಿ ಶಾಲೆಯ ಆಡಳಿತ ಮಂಡಳಿ ಮತ್ತು ವಿದ್ಯಾರ್ಥಿಗಳ ಪರವಾಗಿ ದೂರಿನ ಮುಖಾಂತರ ಮನವಿಯನ್ನು ಮಾನ್ಯ ಆಡಳಿತ ಅಧಿಕಾರಿಗಳು ಮತ್ತು ಸಹಾಯಕ ಆಯುಕ್ತರು ಬಳ್ಳಾರಿ ಹಾಗೂ ಮಾನ್ಯ ಜಿಲ್ಲಾ ಅಧಿಕಾರಿಗಳು ಬಳ್ಳಾರಿ ಇವರಿಗೆ ಮತ್ತೊಮ್ಮೆ ನಿರ್ಲಕ್ಷ್ಯವಯಿಸಿದ ಸರ್ಕಾರಿ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿದ್ದೇವೆ ಮುಂದಿನ ಕ್ರಮಕ್ಕಾಗಿ ಕಾದು ನೋಡಬೇಕಿದೆ

ವಿಶೇಷ ವರದಿ ಸಿ ಡಿ ಚೆನ್ನಕೇಶವ ಕಂಪ್ಲಿ ಮಲ್ಲಮ್ಮ ನುಡಿ ಕನ್ನಡ ದಿನಪತ್ರಿಕೆ

## ವಿಜಯಪುರದಲ್ಲಿ ಚಿಣ್ಣರಿಂದ ಬಣ್ಣದಾಟ..!



**ವಿಜಯಪುರ:** ನಗರದ ಗೋಪಾಲಪುರ ಗಲ್ಲಿಯಲ್ಲಿ ಮಂಗಳವಾರ ಹೋಳಿ ಹಬ್ಬವನ್ನು ಮಕ್ಕಳು ಅತ್ಯಂತ ಉತ್ಸಾಹ ಮತ್ತು ಸಂಭ್ರಮದಿಂದ ಆಚರಿಸಿದರು. ಬೆಳಿಗ್ಗೆಯಿಂದಲೇ ಗೋಪಾಲಪುರ ಬೀದಿಯ ಇಳಿಜಾರು ಮಾರ್ಗಗಳಲ್ಲಿ ನಗುವಿನ ಸದ್ದು ತೇಲಿತು.. ಮಕ್ಕಳು ಸಂಪ್ರದಾಯಬದ್ಧ ಹಾಗೂ ಹರ್ಷಭರಿತ ವಾತಾವರಣದಲ್ಲಿ ಗುಂಪುಗೂಡಿ ಹೋಳಿ ಹಬ್ಬವನ್ನು ಆಚರಿಸಿದರು. ಬಣ್ಣದ ಪುಡಿ, ನೀರಿನ ಬಲೂನುಗಳು ಮತ್ತು ಪಿಚಕಾರಿಗಳೊಂದಿಗೆ ಪರಸ್ಪರ ಗುಲಾಲ್ ಹಚ್ಚಿಕೊಂಡು ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು ಸಂಭ್ರಮಿಸಿದರು. ಇದರಿಂದ ನೆರೆಹೊರೆಯಲ್ಲೆಲ್ಲಾ ಸಂತೋಷ ಮತ್ತು ಏಕತೆಯ ವಾತಾವರಣ ಮೂಡಿತು. ಮಕ್ಕಳು ಪರಿಸರ ಸ್ನೇಹಿ ಬಣ್ಣದಿಂದ ಸ್ನೇಹಪೂರ್ಣ ವಾತಾವರಣದಲ್ಲಿ ಹಬ್ಬವನ್ನು ಆನಂದಿಸುತ್ತಿರುವುದನ್ನು ಕಂಡು ಪಾಲಕರು ಹಾಗೂ ಹಿರಿಯರು ಸಂತಸಪಟ್ಟರು.

## ರೈತರ ಜಮೀನಲ್ಲಿ ಗಾಯಗೊಂಡ ನರಿ ಪತ್ತೆ



**ಯಲಬುರ್ಗಾ:** ತಾಲೂಕಿನ ಕುಡಗುಂಟಿ ಗ್ರಾಮದ ರೈತರ ಜಮೀನುಗಳಲ್ಲಿ ಗಾಯಗೊಂಡ ನರಿ ಪತ್ಯವಾಗಿದೆ, ತೋಟದಲ್ಲಿ ಬೆಳಿಗ್ಗೆ ನೀರುಹಾಯಿಸುವಾಗ ಗಾಯಗೊಂಡ ವನ್ಯ ಜೀವಿ ನರಿ ಪತ್ತೆಯಾಗಿರುವ ಮಾಹಿತಿಯನ್ನು ಯಲಬುರ್ಗಾ ಅರಣ್ಯ ಇಲಾಖೆಯ ವಲಯ ಅರಣ್ಯ ಅಧಿಕಾರಿಗಳಿಗೆ ಕರೆ ಮಾಡಿ, ಪ್ರಥಮ ಚಿಕಿತ್ಸೆ ಕೊಡಿಸಿ ಸುರಕ್ಷಿತವಾಗಿ ಕುಕನೂರ ತಾಲೂಕಿನ ಚಂಡೂರು ಗ್ರಾಮದ ಮೀಸಲು ಅರಣ್ಯ ಪ್ರದೇಶಕ್ಕೆ ಕೊಂಡೊಯ್ಯಲಾಯಿತು ಎಂದು ಕುಡಗುಂಟಿ ಗ್ರಾಮದ ಬಸವರಾಜ ಬೊಮ್ಮನಾಳ ಪತ್ರಿಕಾ ಪ್ರತಿನಧಿಗೆ ತಿಳಿಸಿದ್ದಾರೆ. ಉಪ ವಲಯ ಅರಣ್ಯಾಧಿಕಾರಿ ಲಿಂಗರಾಜ ಕನ್ನಾಳ ಅವರು ಮಾತನಾಡಿ ಇಂದಿನ ದಿಮಾನದಲ್ಲಿ ಮನುಷ್ಯನ ಕ್ರೌರ್ಯದಿಂದಾಗಿ ವನ್ಯಜೀವಿಗಳು ವಿನಾಶದತ್ತ ಸಾಗುತ್ತಿದ್ದು, ಅವುಗಳ ರಕ್ಷಣೆ ನಮ್ಮೆಲ್ಲರದಾಗಬೇಕು ಎಂದರು. ಅರಣ್ಯ ಇಲಾಖೆಯ ಸಿಬ್ಬಂದಿಗಳಾದ ಜಗದೀಶ ಮರಡಿ,ಶರಣಪ್ಪ ರಾಜೂರ, ಯಮನೂರಪ್ಪ ಬೊಮ್ಮನಾಳ ಇದ್ದರು.



**ಹುಮ್ನಾಬಾದ್‌ನಲ್ಲಿ ಇಂದು ಪ್ರೇಮಾ ಪಾಟೀಲ್ ವಿದ್ಯಾಪಾಟೀಲ್, ಜೈ ಶ್ರೀ ಪಾಟೀಲ್ ಸುಜಾತಾ ದೇವಣಿ, ಕಲ್ಪನಾ ಜ್ಯೋತಿ ಅಶ್ವಿನಿ ಶ್ರೀದೇವಿ ಸುವರ್ಣ ಸುರೇಖಾ ಶಶಿಕಲಾ ಗಂಗಮ್ಮ ಜಗದೇವಿ ರೇಖಾ ಶೃತಿ ರೇಣುಕಾ ಜಗದೇವಿ ನಿವೇದಿತಾ ಸುಜಾತ ಸುನೀತಾ ಸಂಜನಾ ಶಾಂಭವಿ ಕಮಲಬಾಯ್ ಇವರೆಲ್ಲಾ ಸೇರಿ ಹೋಳಿ ಆಚರಿಸಿದ್ದಾರೆ.**

## ನಾರಾಯಣ ಜಯಂತಿ ಆಚರಣೆ



**ಹಗರಿಬೊಮ್ಮನಹಳ್ಳಿ:** ಕೈವಾರು ತಾತಯ್ಯ ಇಂದು ಕಳೆಯಲ್ಪಡುವ ಶ್ರೀ ಯೋಗಿ ನಾರಾಯಣ ಯತೀಂದ್ರ ರವರು ದಕ್ಷಿಣ ಭಾರತದ ಪ್ರಸಿದ್ಧ ಸಂತ ಕಾಲಜ್ಞಾನಿಯಾಗಿದ್ದರು ಅವರ ಜಯಂತಿಯನ್ನು ಪಾಲ್ಗುಣ ಮಾಸದ ಹುಣ್ಣಿಮೆಯ ಪ್ರತಿ ವರ್ಷ ಆಚರಿಸಲಾಗುವುದೆಂದು ಬಲಿಜ ಸಂಘದ ಅಧ್ಯಕ್ಷರಾದ ಪಿ. ಸೂರ್ಯಬಾಬು ಅವರು ಹೇಳಿದರು.

ಪಟ್ಟಣದ ತಾಲೂಕ ಕಚೇರಿ ಮಿನಿ ವಿಧಾನಸೌಧ ದಲ್ಲಿ ಆಯೋಜಿಸಿದ್ದ ಯೋಗಿ ನಾರಾಯಣ ತಾತಯ್ಯನವರ ಜಯಂತಿಯ ಕಾರ್ಯಕ್ರಮವನ್ನು ಭಾಗವಹಿಸಿ ಅವರು ಮಾತನಾಡಿ ಅವರ ಆಧ್ಯಾತ್ಮಿಕ ಹಾಗೂ ಸಮಾಜ ಸುಧಾರಣಾ ಸಂದೇಶಗಳು ಇಂದಿಗೂ ನಮಗೆಲ್ಲ ಮಾರ್ಗದರ್ಶನವಾಗಿವೆ.

ತಾತಯ್ಯನವರ ಕಾಲಜ್ಞಾನ, ಭಕ್ತಿ ಮಾರ್ಗ, ಮತ್ತು ಸಮಾಜದಲ್ಲಿನ ಜಾತಿಭೇದಗಳನ್ನು ಖಂಡಿಸಿ ಸಂದೇಶಗಳನ್ನು ಸಾರಿದ್ದಾರೆ.

ನೂರು ತಮ್ಮ ತ್ರಿಪದಿಗಳು ಹಾಗೂ ಕಾಲಜ್ಞಾನದ ಮೂಲಕ ಜನಜನಿತ ರಾಗಿದ್ದರು ಅಂತಹ ಕೈವಾರ ತಾತಯ್ಯನವರ ಸಂದೇಶಗಳು ಇಂದಿನ ಪೀಳಿಗೆ ಮಾರ್ಗದರ್ಶನವಾಗಿವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರುಗಳಾದ ಶುಭಾಷ್ ಪೂಜಾರ್ ಖಜಾಂಜಿ, ರಾಮಾಂಜನಿ ಉಪಾಧ್ಯಕ್ಷರು, ಚಂದ್ರಶೇಖರ್ ಲೆಕ್ಕಪರಿಶೋಧಕರು, ಉಮೇಶ್ ಬಳೆಗಾರ,ಹನುಮಂತಪ್ಪ, ವೆಂಕಟೇಶ್ ಫ್ಲೋರ್ ಮಿಲ್, ಶ್ರೀನಿವಾಸ್ ತಾಲೂಕ್ ಆಸ್ಪತ್ರೆ, ಸಮಾಜದ ಮುಖಂಡರು ಹಾಗೂ ತಾಲೂಕ ಕಚೇರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಆಧುನಿಕ ಪರೀಕ್ಷೆ ಮೂಲಕ ಆರಂಭ ಹಂತದ ಕ್ಯಾನ್ಸರ್ ಕಾಯಿಲೆ ಗುಣ

• ಮಲ್ಲಮ್ಮ ನುಡಿ ವಾರ್ತೆ ಚಿಕ್ಕಬಳ್ಳಾಪುರ




ಈ ಹಿಂದೆ ಕ್ಯಾನ್ಸರ್ ಕಾಯಿಲೆಯನ್ನು ಗುರುತಿಸುವುದೇ ಕಷ್ಟವಾಗಿದ್ದು ಇಂದು ಆಧುನಿಕ ಪರೀಕ್ಷೆಗಳ ಮೂಲಕ ಕ್ಯಾನ್ಸರ್ ಖಾಯಿಲೆಯನ್ನು ಗುರುತಿಸಬಹುದಾಗಿದೆ ಹಾಗೂ ಆರಂಭದ ಹಂತದ ಕ್ಯಾನ್ಸರ್ ಕಾಯಿಲೆ ಗುಣಪಡಿಸಲೂಬಹುದಾಗಿದೆ ಎಂದು ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಪ್ರಾಧ್ಯಾಪಕಿ ಡಾ. ಉಷಾ ಜಿ ಶಾನಾಯಿ ತಿಳಿಸಿದರು.

ಅವರು ಪೆರೇಸಂದ್ರದ ಶಾಂತ ಅಲೈಡ್ ಆರೋಗ್ಯ ವಿಜ್ಞಾನ ಕಾಲೇಜು ಆಯೋಜಿಸಿದ್ದ ಕ್ಯಾನ್ಸರ್ ಅರಿವು ಮತ್ತು ಜಾಗೃತಿ ಬಗೆಗಿನ ವಿಚಾರ ಸಂಕೀರ್ಣವನ್ನು ಉದ್ಘಾಟಿಸಿ ಮಾತನಾಡಿ, ಒಂದು ಕಾಲದಲ್ಲಿ ಕ್ಯಾನ್ಸರ್ ಕಾಯಿಲೆಯನ್ನು ಗುರುತಿಸುವುದೇ ಕಷ್ಟವಾಗಿದ್ದು ಕ್ಯಾನ್ಸರ್ ರೋಗ ಪೀಡಿತರು ಸೂಕ್ತ ಚಿಕಿತ್ಸೆ ಇಲ್ಲದೆ ಜೀವನವಿಡಿ ನರಳುತ್ತಿದ್ದರು ಆದರೆ ಇಂದು ಕ್ಯಾನ್ಸರ್ ಲಕ್ಷಣಗಳವುಳ್ಳವರು ಪ್ರಾಥಮಿಕ ಹಂತದಲ್ಲೇ ಪರಿಣಿತ ವೈದ್ಯರಿಂದ ತಪಾಸಣೆ ಹಾಗೂ ಚಿಕಿತ್ಸೆ ಪಡೆದು ಅದನ್ನ ತಡೆಯಬಹುದಾಗಿದೆ ಈ ಹಿಂದೆ ಯಾರಲ್ಲಾದರೂ ಕ್ಯಾನ್ಸರ್ ಸಮಸ್ಯೆ ಕಾಣಿಸಿಕೊಂಡರೆ ಪತ್ತೆ ಹಚ್ಚುವ ಆಧುನಿಕ ಪರೀಕ್ಷೆಗಳಿಲ್ಲದೆ ನರಳಬೇಕಿತ್ತು ಅಲ್ಲದೆ ಕ್ಯಾನ್ಸರ್ ಬಗ್ಗೆ ಭಯದ ಭಾವನೆ ಮೂಡುತಿತ್ತು ಇದಲ್ಲದೆ ಔಷಧಿ ಹಾಗೂ ಚಿಕಿತ್ಸೆ ಆಧುನಿಕ ಔಷಧಿಗಳು ಕ್ಯಾನ್ಸರ್ ಚಿಕಿತ್ಸಾ ಉಪಕರಣಗಳು ಲಭ್ಯವಿರಲಿಲ್ಲ .ರೋಗ ಹುಟ್ಟುವ ಬಗ್ಗೆ ತಿಳುವಳಿಕೆ ಸೂಕ್ತ ತಪಾಸಣೆ ಇಲ್ಲದೆ ಕಾಯಿಲೆಯನ್ನು ಶೀಘ್ರವಾಗಿ ಗುರುತಿಸುತ್ತಿರಲಿಲ್ಲ ಆದರೆ ಇಂದು ಕ್ಯಾನ್ಸರ್ ಬಗ್ಗೆ ಪ್ರಾಥಮಿಕ ತಿಳುವಳಿಕೆ ಮತ್ತು ಮಾಹಿತಿಯ ಜಾಗೃತಿಯ ಕೊರತೆ ಇದೆ ಶ್ವಾಸಕೋಶದ ಕ್ಯಾನ್ಸರ್, ಮೂತ್ರಜನಕಾಂಗ, ಲಿವರ್, ಗರ್ಭಕೋಶ, ರಕ್ತ ಕ್ಯಾನ್ಸರ್,ಸ್ತನ ಕ್ಯಾನ್ಸರ್, ಗಂಟಲು ಕ್ಯಾನ್ಸರ್ ಗಳು ಸಾಮಾನ್ಯವಾಗಿದ್ದು. ಮದ್ಯಪಾನ ,ತಂಬಾಕು ,ಸೇವನೆ ಧೂಮಪಾನ, ಮಾದಕ ವಸ್ತುಗಳ ಬಳಕೆ ,ವ್ಯಕ್ತಿಗತ ಸ್ವಚ್ಛತೆ ಇಲ್ಲದಿರುವುದು ಮುಂತಾದ ಸಾಮಾನ್ಯ ಕಾರಣಗಳು ಕ್ಯಾನ್ಸರ್ ಹುಟ್ಟಿಗೆ ಕಾರಣವಾಗುತ್ತಿದೆ. ಇದಕ್ಕಾಗಿ ಪ್ರತಿಯೊಬ್ಬರೂ ಬಹು ಮುಖ್ಯವಾಗಿ ಮಹಿಳೆಯರು ಸಂತಾನೋತ್ಪತ್ತಿ ಆರೋಗ್ಯ , ವೈಯಕ್ತಿಕ ಸ್ವಚ್ಛತೆಗೆ ಕಡ್ಡಾಯವಾಗಿ ಗಮನಕೊಡಬೇಕು. ಹಾನಿಕಾರಕ ವಸ್ತುಗಳಾದ ತಂಬಾಕು ಮದ್ಯಪಾನಗಳ ಬಗ್ಗೆ ಜಾಗೃತಿ ಹೊಂದಬೇಕು. ಸ್ತನ ಕ್ಯಾನ್ಸರ್, ಗರ್ಭಕೋಶ ,ಶ್ವಾಸಕೋಶ ಕ್ಯಾನ್ಸರಗಳ ಬಗ್ಗೆ ನಿಯಮಿತ ತಪಾಸಣೆಗೆ ಒಳಗಾಗಬೇಕೆಂದು ಕಿವಿಮಾತು ಹೇಳಿದರು.

**ಕ್ಯಾನ್ಸರ್ ಅಂಟು ರೋಗವಲ್ಲ:** ಶಾಂತ ಶಿಕ್ಷಣ ಸಂಸ್ಥೆಗಳ ನಿರ್ದೇಶಕ ಡಾ. ಕೋಡಿರಂಗಪ್ಪ ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಕ್ಯಾನ್ಸರ್ ಅಂಟು ರೋಗವಲ್ಲವಾದರೂ ಸಾಮಾನ್ಯ ಜನರು ಜನ ಭಯಪಡುತ್ತಾರೆ. ಇದರಿಂದಾಗಿ ಕ್ಯಾನ್ಸರ್ ರೋಗಿಗಳು ಅಳುಕಿನಿಂದ ಸಾಮಾಜಿಕ ಕಳಂಕಕ್ಕೆಗುರಿಯಾಗುತ್ತಾರೆ. ಈ ಬಗ್ಗೆ ಭಯ,ಗೊಂದಲ ಆವರಿಸಿದಾಗ ಅಂತಹವರ ರೋಗ ನಿರೋಧಕ ಶಕ್ತಿ ಕ್ಷೀಣಿಸಿ ಹಲವು ತೊಂದರೆಗಳಿಗೆ ಕಾರಣವಾಗುತ್ತದೆ. ಆದ್ದರಿಂದ ಕ್ಯಾನ್ಸರ್ ರೋಗದ ಬಗ್ಗೆ ಪೂರ್ಣ ಅರಿವನ್ನು ಪಡೆಯಬೇಕು. ವೈದ್ಯಕೀಯ, ಆರೋಗ್ಯ ವಿಜ್ಞಾನ ಕಾಲೇಜುಗಳು, ಆಸ್ಪತ್ರೆಗಳು ಈ ಬಗ್ಗೆ ವೈಜ್ಞಾನಿಕ ಮಾಹಿತಿ ನೀಡಬೇಕು. ಕ್ಯಾನ್ಸರ್ ರೋಗ ಲಕ್ಷಣಗಳು ತಪಾಸಣೆ, ಚಿಕಿತ್ಸೆ ಹಾಗೂ ತಡೆಗಟ್ಟುವ ಜೀವನವನ್ನು ದೃಢವಾಗಿ ಕಟ್ಟಿಕೊಳ್ಳುವ ಬಗ್ಗೆ ಇಂತಹ ವಿಚಾರ ಸಂಕೀರ್ಣಗಳು ವಸ್ತು ಪ್ರದರ್ಶನಗಳು, ಮಾಹಿತಿ ಪತ್ರಗಳು ನೆರವಾಗುತ್ತವೆ ಎಂದರು.

ಇದೇ ವೇಳೆ ಕ್ಯಾನ್ಸರ್ ಲಕ್ಷಣಗಳು ತಪಾಸಣೆಗೆ ಶೀಘ್ರ ಗುರುತಿಸುವಿಕೆ, ಲಭ್ಯವಿರುವ ಚಿಕಿತ್ಸೆಗಳು ವಿವಿಧ ರೀತಿಯ ಯೋಗ್ಯ ಜೀವನ ವಿಧಾನ ಕ್ಯಾನ್ಸರ್ ಬಗೆಗೆ ಇರುವ ತಪ್ಪು ಕಲ್ಪನೆಗಳು ಹಾಗೂ ತಪ್ಪು ಗ್ರಹಿಕೆಗಳ ಬಗ್ಗೆ ವಿಷಯ ನಿರೂಪಣೆ, ಭಾಷಣ, ರಸಪ್ರಶ್ನೆ ಮೂಕಅಭಿನಯ ಮೂಲಕ ವಿದ್ಯಾರ್ಥಿಗಳು ಪ್ರದರ್ಶಿಸಿದರು.

ಕಾರ್ಯಕ್ರಮದಲ್ಲಿ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಗೋಪಿನಾಥ್, ಪ್ರಾಂಶುಪಾಲರಾದ ವಿಜಯಲಕ್ಷ್ಮಿ, ಪ್ರಸೀತಾಸಾಯಿ, ಹರಿಣಿ, ಮುದಾಸಿರ್, ಅನುಷ್, ಸಾಯಿಕೃಷ್ಣ, ಪವನ್, ರೇವತಿ, ವಾಸು ಹಾಗೂ ಅಲೈಡ್ ಆರೋಗ್ಯ ವಿಜ್ಞಾನ ಹಾಗೂ ಅರೆ ವೈದ್ಯಕೀಯ ಆರೋಗ್ಯ ವಿಜ್ಞಾನ ವಿಭಾಗಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಕುಂದು ಕೊರತೆಗಳ ಬಗೆಹರಿಸಲು ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಪೀಣ್ಯ ದಾಸರಹಳ್ಳಿ



ಬಾಗಲಗುಂಟೆ ವಾರ್ಡ್ ಸೌಂದರ್ಯ ಬಡಾವಣೆಯ ಅನೇಕ ಕುಂದು ಕೊರತೆಗಳನ್ನು ಬಗೆರಿಸಲು ಎಲ್ಲಾ ವಿಭಾಗದ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆಗಳಿಗೆ ಸೂಕ್ತಕ್ರಮ ವಹಿಸಬೇಕು' ಎಂದು ಶಾಸಕ ಎಸ್. ಮುನಿರಾಜು ಅಧಿಕಾರಿಗಳಿಗೆ ಸೂಚಿಸಿದರು.

ಸೌಂದರ್ಯ ಬಡಾವಣೆನಿವಾಸಿಗಳಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ನೀಡಿದ ದೂರಿನ ಮೇರೆಗೆ ಶಾಸಕ ಮುನಿರಾಜು ಅವರು ಸಭೆ ನಡೆಸಿ ಮಾತನಾಡಿದರು.

ಸಭೆಯಲ್ಲಿ ಬೀದಿ ನಾಯಿ ಮತ್ತು ಕೋತಿಗಳ ಹಾವಳಿ, ಕಸದ ಸಮಸ್ಯೆ ನೂತನ ಮನೆ ಕಟ್ಟುವವರು ಚರಂಡಿಯಲ್ಲಿ ಮಣ್ಣು ಸುರಿದು ಚರಂಡಿ ಮುಚ್ಚುತ್ತಾರೆ ಅಂತಹವರ ವಿರುದ್ಧ ಕ್ರಮ, ವಾಹನಗಳಿಗೆ ಅಡ್ಡಿಪಡಿಸುವ ಮರದ ಕೊಂಬೆಗಳ ಕತ್ತರಿಸುವಿಕೆ' ಪ್ರಕೃತಿ ಬಡಾವಣೆಯಲ್ಲಿನ ಮೋರಿಯ ನೀರು ಸೌಂದರ್ಯ ಬಡಾವಣೆಗೆ ಬರೆದಂತೆ ಸೂಕ್ತ ಕ್ರಮ, ಎಲ್ಲಿಂದರಲ್ಲಿ ವಾಹನ ನಿಲ್ಲಿಸಿ ಟ್ರಾಫಿಕ್ ಸಮಸ್ಯೆ ಮಾಡುವವರ ವಿರುದ್ಧ ಕ್ರಮ, ವಿದ್ಯಾರ್ಥಿಗಳು ವೀಲಿಂಗ್ ಮಾಡುತ್ತಾ ಬೇರೆಯವರಿಗೆ ತೊಂದರೆ ನೀಡುವವರ ವಿರುದ್ಧ ಕ್ರಮ, ಸೂಕ್ತ ಸ್ಥಳದಲ್ಲಿ ರಸ್ತೆ ಉಬ್ಬು ಹಾಕುವಿಕೆ, ವಿದ್ಯುತ್ ದೀಪದ ಸಮಸ್ಯೆ' ಜಲ್ಲಿಕಲ್ಲು ಮತ್ತು ಮರಳು ತುಂಬಿದ ಲಾರಿಗಳು ಹೈವೇನಲ್ಲಿ ತಡೆಗಟ್ಟುವುದರಿಂದ ಈ ಬಡಾವಣೆಯ ಮಾರ್ಗವಾಗಿ ಚಲಿಸಿ ರಸ್ತೆ ಹಾಳು ಮಾಡುತ್ತಿವೆ ಅಂತಹ ಲಾರಿಗಳಿಗೆ ಕಡಿವಾಣ ಇನ್ನು ಮುಂತಾದ ಅನೇಕ ಸಮಸ್ಯೆಗಳನ್ನು ಬಗೆಹರಿಸಲು ಆಯಾ ವಿಭಾಗದ ಅಧಿಕಾರಿಗಳಿಗೆ ಶಾಸಕ ಎಸ್. ಮುನಿರಾಜು ಸೂಚಿಸಿದರು.

## ನೂತನ ರಾಜ್ಯಾಧ್ಯಕ್ಷರಾಗಿ ಅವಿರೋಧ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ



ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭೆಯ 2026 ರಿಂದ 2028 ನೇ ಸಾಲಿಗೆ ರಾಜ್ಯಾಧ್ಯಕ್ಷರ ಸ್ಥಾನಕ್ಕೆ ಸ್ಪರ್ಧಿಸಿದ್ದ ಹಗರಿಬೊಮ್ಮನಹಳ್ಳಿ ಯುವ ಮುಖಂಡ ಭೀಮರಾಜ ಗಂಗಾವತಿ ಅವರು ಅವಿರೋಧವಾಗಿ ಆಯ್ಕೆಯಾಗುವ ಮೂಲಕ ನೂತನ ರಾಜ್ಯಾಧ್ಯಕ್ಷರಾಗಿದ್ದಾರೆ,

ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭೆಯ ನಿರ್ದೇಶಕರಾಗಿ, ವಿಭಾಗೀಯ ಉಪಾಧ್ಯಕ್ಷರಾಗಿ, ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸಿದ್ದರು. ಹಗರಿಬೊಮ್ಮನಹಳ್ಳಿಯ ವಾಸವಿ ಯುವಜನ ಸಂಘದಲ್ಲಿ ಸುಮಾರು 20 ವರ್ಷಗಳಿಂದ ಸಕ್ರೀಯವಾಗಿ ತೊಡಗಿಸಿಕೊಂಡು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಿದ್ದರು,

ರಾಜ್ಯ ಮಟ್ಟದ ಅತ್ಯುತ್ತಮ ವಿಭಾಗೀಯ ಉಪಾಧ್ಯಕ್ಷ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ,

ಪತ್ರಿಕೆಗೆ ಪ್ರತಿಕ್ರಿಯಿಸಿದ ಭೀಮರಾಜ್ ಗಂಗಾವತಿ ಅವರು ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭೆಗೆ ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡುವ ಮೂಲಕ ಇನ್ನೂ ಹೆಚ್ಚಿನ ಸಮಾಜದ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಟ್ಟಿರುವುದಕ್ಕೆ ಪ್ರತ್ಯಕ್ಷ, ಪರೋಕ್ಷವಾಗಿ ಬೆಂಬಲಿಸಿದ ಎಲ್ಲರಿಗೂ ಪ್ರೀತಿಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ ಎಂದರು.

# ಶ್ರೀಶೈಲಕ್ಕೆ ನಂದಿ ಸೇನೆ ರಥಯಾತ್ರೆ..!

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ



ನಂದಿ ಕೂಗು ಅಭಿಯಾನ ಹಾಗೂ ನಂದಿ ಸೇನೆ ಸಂಘಟನೆಯ ಅಡಿಯಲ್ಲಿ ಶ್ರೀ ಶ್ರೀಶೈಲ ಜಗದ್ಗುರುಗಳ ದಿವ್ಯ ಮಾರ್ಗದರ್ಶನದಲ್ಲಿ ಜರಗುವ ನಂದಿ ಸೇನೆ ರಥಯಾತ್ರೆಯನ್ನು ಭಾರತದ ಉಪರಾಷ್ಟ್ರಪತಿಗಳಾದ ಸನ್ಮಾನ್ಯ ಶ್ರೀ ಸಿ ಪಿ ರಾಧಾಕೃಷ್ಣನ್ ಅವರು ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲೂಕಿನ ಯಡೂರು ಶ್ರೀ ವೀರಭದ್ರೇಶ್ವರ ದೇವಸ್ಥಾನದಿಂದ ದಿನಾಂಕ 5-03-2026 ರಂದು ಚಾಲನೆ ನೀಡಲಿದ್ದಾರೆ.

ನಂದಿ ಸೇನೆ ರಥಯಾತ್ರೆ ಸಾಗುವ ಮಾರ್ಗದಲ್ಲಿ ಬರುವ ಪ್ರಮುಖ ಸ್ಥಳಗಳಲ್ಲಿ ರೈತ ಸಮಾವೇಶಗಳು ಜರಗುತ್ತಿದ್ದು ಮಾರ್ಚ್ 5 ಕಾಗವಾಡ, ಮಾರ್ಚ್ 6 ಅಥಣಿ, ಮಾರ್ಚ್ 7 ಹೊನವಾಡ, ಮಾರ್ಚ್ 8 ವಿಜಯಪುರ ಮತ್ತು ಮನಗೂಳಿ, ಮಾರ್ಚ್ 9 ಬಸವನಬಾಗೇವಾಡಿ ಮತ್ತು ಹೂವಿನ ಹಿಪ್ಪರಗಿ, ಮಾರ್ಚ್ 10 ತಾಳಿಕೋಟಿ ಮತ್ತು ಹುಣಸಗಿ, ಮಾರ್ಚ್ 11 ದೇವದುರ್ಗ ಹಾಗೂ ಮಾರ್ಚ್ 12 ರಂದು ರಾಯಚೂರ ದಲ್ಲಿ ರೈತ ಸಮಾವೇಶಗಳು ಜರುಗಲಿವೆ. ಕೊನೆಗೆ ಶ್ರೀಶೈಲಕ್ಕೆ 15-03-26 ರಂದು ನಂದಿ ಸೇನೆ ರಥಯಾತ್ರೆ ತಲುಪಿದೆ ಸಾವಿರಾರು ಗ್ರಾಮಗಳಿಂದ ಆಗಮಿಸಿದ ಜೋಡೆತ್ತಿನ ರೈತರ ಸಮ್ಮುಖದಲ್ಲಿ ಶ್ರೀಶೈಲ ಮಲ್ಲಯ್ಯನ ಸನ್ನಿಧಾನದಲ್ಲಿ ನಂದಿ ಸೇನೆ ರಥಯಾತ್ರೆಯ ಸಮಾರೋಪ ಸಮಾರಂಭ ಜರುಗಲಿದೆ.

ನಂದಿ ಸೇನೆ ರಥ ಯಾತ್ರೆ ಸಾಗುವ ದಾರಿಯಲ್ಲಿ ಬರುವ ಗ್ರಾಮಗಳ ರೈತರು ಜೋಡೆತ್ತಿನ ಬಂಡಿಗಳಿಂದ ನಂದಿ ಸೇನೆ ರಥಯಾತ್ರೆಯನ್ನು ಸ್ವಾಗತಿಸಿ ಬೀಳ್ಕೊಡುವ ಮೂಲಕ ಶ್ರೀಶೈಲ ಮಲ್ಲಯ್ಯನಿಗೆ ಭಕ್ತಿ ಸೇವೆ ಸಲ್ಲಿಸಲಿರುವ ಐತಿಹಾಸಿಕ ಕ್ಷಣಕ್ಕೆ ನಂದಿ ಸೇನೆ ರಥಯಾತ್ರೆ ಸಾಕ್ಷಿಯಾಗಲಿದೆ. ರಾಜ್ಯದಲ್ಲಿರುವ 20 ಲಕ್ಷ ಜೋಡೆತ್ತಿನ ಕೃಷಿಕರು ನಂದಿ ಸೇನೆ ಎಂಬ ಸಂಘಟನೆ ಮೂಲಕ ಪ್ರತಿ ಗ್ರಾಮಗಳಲ್ಲಿ ಒಂದಾಗಲು ನಂದಿ ಸೇನೆ ರಥಯಾತ್ರೆ ಪ್ರೇರಕ ಶಕ್ತಿಯಾಗಲಿದೆ. ನಂದಿ ಶಕ್ತಿಯಿಂದ ಭೂಮಿಯ ಜೀವಂತಿಕೆ ಹೆಚ್ಚಾಗುವುದು ತೈಲ ಶಕ್ತಿಯಿಂದ ಭೂಮಿಯ ಜೀವಂತಿಕೆ ನಾಶವಾಗುವುದು. ಕರ್ನಾಟಕ ರಾಜ್ಯದ 60 ಭೂಮಿಯ ಸತ್ವ ನಾಸವಾಗಿ ಜನರು ಅನಾರೋಗ್ಯಕ್ಕೆ ತುತ್ತಾಗುತ್ತಿರುವುದಕ್ಕೆ ಮೂಲ ಕಾರಣ ಕೇವಲ ತೈಲ ಶಕ್ತಿ ಅವಲಂಬಿತ ಕೃಷಿಗೆ ಆದ್ಯತೆ ನೀಡುತ್ತಿರುವುದಾಗಿದೆ. ತೈಲ ಶಕ್ತಿ ದೊರೆಯುವ ಪ್ರದೇಶದ ಜೀವಂತಿಕೆ ಕೂಡ ಕೊನೆಗೆ ನಾಶವಾಗುವುದು ಎಂಬುದು ಮಧ್ಯಪ್ರಾಚ್ಯದಲ್ಲಿ ಪ್ರಾರಂಬವಾದ ಯುದ್ಧದಿಂದ ತಿಳಿಯುತ್ತಿದೆ.

ಜೋಡೆತ್ತಿನ ಕೃಷಿ ಆಧಾರಿತ ಬಸವ ತತ್ವದಿಂದ ಸ್ವಾವಲಂಬಿ ಹಾಗೂ ಆರೋಗ್ಯವಂತ ರಾಷ್ಟ್ರನಿರ್ಮಿಸಲು ಸಾಧ್ಯವಿದೆ ಎನ್ನುವುದು ಇತಿಹಾಸ, ವಚನ ಸಾಹಿತ್ಯ ಹಾಗೂ ವಿಜ್ಞಾನದಿಂದ ತಿಳಿಯುತ್ತಿದೆ. ಅದಕ್ಕಾಗಿ, ಜೋಡೆತ್ತಿನ ರೈತರು ನಿರ್ವಹಿಸುತ್ತಿರುವ ಸಾಮಾಜಿಕ ಜವಾಬ್ದಾರಿ ಕುರಿತು ಜನರಲ್ಲಿ ಅರಿವು ಮೂಡಿಸಿ ಕರ್ನಾಟಕ ರಾಜ್ಯದಲ್ಲಿರುವ 20 ಲಕ್ಷ ಜೋಡೆತ್ತಿನ ಕೃಷಿಕರನ್ನು ಒಗ್ಗೂಡಿಸುವುದು. ಜೋಡೆತ್ತಿನ ಕೃಷಿಕರನ್ನು ಬಸವ ತತ್ವದ ಮೂಲ ಬೇರುಗಳೆಂದು ಗುರುತಿಸಿ ಬಸವ ತತ್ವ ಪುನರುತ್ಥಾನಕ್ಕಾಗಿ 10% ಬಡ್ಜೆಟ್ ಮೀಸಲಿಡುವ ಕಾನೂನು ಜಾರಿಗಾಗಿ ಹಾಗೂ ಜೋಡೆತ್ತಿನ ಕೃಷಿಕರಿಗೆ ಪ್ರತಿ ತಿಂಗಳು ರೂ. 11000 ಪ್ರೋತ್ಸಾಹ ಧನ ನೀಡುವ ಯೋಜನೆ ಜಾರಿಗಾಗಿ ರಾಜ್ಯದ ಬಹುಜನರ ಅಭಿಪ್ರಾಯ ಕ್ರೋಢೀಕರಿಸುವುದು ನಂದಿ ಸೇನೆ ರಥಯಾತ್ರೆಯ ಮೂಲ ಉದ್ದೇಶವಾಗಿದೆ. ಪತ್ರಿಕಾ ಗೋಷ್ಠಿಯು ನಿವೃತ್ತ ಸಹಾಯಕ ಕೃಷಿ ನಿರ್ದೇಶಕರಾದ ಶ್ರೀ ಎಸ್ ಜಿ ನಾಡಗೌಡ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ನಂದಿ ಕೂಗು ಅಭಿಯಾನದ ರೀವಾರಿಗಳಾದ ಬಸವರಾಜ ಬಿರಾದಾರ ಅವರು ನಂದಿ ಸೇನೆ ರಥಯಾತ್ರೆಯ ಉದ್ದೇಶದ ಕುರಿತು ವಿವರಿಸಿದರು.

# ಬಾಹ್ಯದ ಆಡಂಬರ ಮತ್ತು ಅಂತರಂಗದ ಅರಿವು



**ಭೋಗ-ಐಭೋಗ**

• ವೀರಣ್ಣ ಕಲಕೇರಿ

ಪತ್ರಕರ್ತ ಸಾಹಿತಿ, ಕೆಂಭಾವಿ




ಇಂದಿನ ಸ್ಪರ್ಧಾತ್ಮಕ ಬದುಕಿನಲ್ಲಿ ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯ ಸ್ಪರ್ಧೆಗೆ ಒಳಪಟ್ಟಿದ್ದಾರೆ ಎಂದರೆ ತಪ್ಪಾಗಲಾರದು. ಇಲ್ಲಿ ಅರಿವಿಲ್ಲದೆಯೇ ಇನ್ನೊಬ್ಬರನ್ನು ಅನುಕರಿಸುವ ಹೋರಾಟದಲ್ಲಿ ನಾವೆಲ್ಲರೂ ಲೀನವಾದಂತಾಗಿದೆ.

ಎಷ್ಟೇ ಕಷ್ಟವಾದರೂ ಪರವಾಗಿಲ್ಲ, ಇನ್ನೊಬ್ಬರು ಹೇಗೆ ಬದುಕುತ್ತಿದ್ದಾರೋ ಅವರನ್ನು ಸರಿಗಟ್ಟಬೇಕು ಅಥವಾ ಅವರಿಗಿಂತ ಒಂದು ಹೆಜ್ಜೆ ಮುಂದಿರಬೇಕು ಎನ್ನುವ ಹಂಬಲ ನಮ್ಮನ್ನು ಆಡಂಬರದ ಪ್ರಭಾವಕ್ಕೆ ದೂಡುತ್ತಿದೆ. ನಿಜವಾದ ಬದುಕಿನ ಸತ್ಯವಿರುವುದು ಬಾಂಧವ್ಯದ ಬೆಸುಗೆಯಲ್ಲಿ. ಸಂಬಂಧಗಳ ಮೌಲ್ಯವನ್ನು ಎತ್ತಿಹಿಡಿದು, ಬಂಧು-ಬಳಗ, ಸ್ನೇಹ ಹಾಗೂ ನೆರೆಹೊರೆಯವರೊಂದಿಗೆ ಪ್ರೀತಿ, ಕರುಣೆ ಮತ್ತು ಸಹಕಾರದ ನವೀರಾದ ಭಾವದಿಂದ ಸಂಭ್ರಮಿಸಿದಾಗ ಮಾತ್ರ ಬದುಕಿನ ಪರಿಪೂರ್ಣತೆ ಸಿದ್ಧಿಸುತ್ತದೆ. ಆದರೆ ಇಂದು ನಾವು ಅಂತಹ ಅರ್ಥಪೂರ್ಣ ಜೀವನವನ್ನು ಬಿಟ್ಟು, ಕೇವಲ ಪ್ರಭಾವಲಯದ ತೋರಿಕೆಯ ಬದುಕಿಗೆ ಮಾರುಹೋಗುತ್ತಿದ್ದೇವೆ ಎನಿಸುತ್ತಿದೆ.

ಸ್ಪರ್ಧೆಗಳು ಇರಲಿ, ಬೇಡ ಎಂದಲ್ಲ. ಆದರೆ ಅವು ಆರೋಗ್ಯಕರವಾಗಿರಲಿ. ಇನ್ನೊಬ್ಬರಿಗಿಂತ ಹೆಚ್ಚು ಪಡೆಯಬೇಕು ಎನ್ನುವ ಪೈಪೋಟಿಯಲ್ಲಿ, ನಮ್ಮ ಬಳಿ ಇರುವುದನ್ನು ಅನುಭವಿಸದೆ, ಸಿಗದೆ ಇರುವುದರ ಬೆನ್ನುಹತ್ತಿ ಸಹಜ ತೃಪ್ತಿಯಿಂದ ವಂಚಿತರಾಗುತ್ತಿದ್ದೇವೆ. ಪ್ರತಿಯೊಬ್ಬರಿಗೂ ಐಷಾರಾಮಿ ಜೀವನದ ಆಸೆ ಇರುವುದು ಸಹಜ. ಆದರೆ ಇಂದು ಐಷಾರಾಮಿ ಸೌಲಭ್ಯಗಳನ್ನು ಅನುಭವಿಸುವುದಕ್ಕಿಂತ ಹೆಚ್ಚಾಗಿ, ಅವುಗಳ ತೆ-ೂರಿಕೆಯ ವೈಭವಿಕ ಮಾಯಾಜಾಲಕ್ಕೆ ನಾವು ಸಿಲುಕಿದ್ದೇವೆ ಎನಿಸುತ್ತದೆ. ಇಂತಹ ಪ್ರದರ್ಶನ ಮನೋಭಾವದ ಬೆನ್ನುಹತ್ತಿ ಆರ್ಥಿಕ ಸಂಕಟಕ್ಕೆ ಈಡಾಗುವುದರ ಜೊತೆಗೆ, ಮಾನಸಿಕ ಶಾಂತಿಯನ್ನು ಕಳೆದುಕೊಂಡು ಬದುಕಿನ ಸಾರ್ಥಕತೆಯಿಂದ ದೂರವಾಗುತ್ತಿದ್ದೇವೆ ಎಂಬುದುಂತೂ ಕಹಿ ಸತ್ಯ.

ಶರಣರ "ಮನೆ ನೋಡಾ ಚಿಕ್ಕದು, ಮನ ನೋಡಾ ಘನಮನ ಸಂಪನ್ನರು" ಎನ್ನುವ ವಾಣಿಗೆ ತದ್ವಿರುದ್ಧವಾಗಿ ನಮ್ಮ ಇಂದಿನ ಜೀವನಶೈಲಿ ಸಾಗುತ್ತಿದೆ. ಮನದ ಸಂಸ್ಕಾರಕ್ಕೆ ನೀಡಬೇಕಾದ ಮಹತ್ವವನ್ನು ಕೇವಲ ಮೇಲ್ಪದರದ ಅಲಂಕಾರಕ್ಕೆ ನೀಡುತ್ತಿದ್ದೇವೆ. ಅರಿವಿನ ಅಂತರಂಗದ ಸೌಂದರ್ಯವನ್ನು ಮರೆತು, ಆಲಯದ ವೈಭವಕ್ಕೆ ಮನಸೋಲುತ್ತಿದ್ದೇವೆ. ಅತಿಯಾಸೆಯನ್ನು ಮಿತಗೊಳಿಸಿ ಅರಿವನ್ನು ಜಾಗೃತಗೊಳಿಸಿಕೊಂಡಾಗ ಮಾತ್ರ ಸರ್ವರಲ್ಲಿ ಸಮನ್ವಯದ ಭಾವ ಮೂಡಲು ಸಾಧ್ಯ. ಆದ್ದರಿಂದ, ಸರಿಯಾದ ಜ್ಞಾನದಿಂದ ಎಚ್ಚೆತ್ತುಕೊಂಡು ಯಾವುದೇ ಭೇದಭಾವವಿಲ್ಲದ 'ಅಭೇದ' ಮನಸ್ಥಿತಿಯಲ್ಲಿ, ಅಂದರೆ ಎಲ್ಲವನ್ನೂ ಸಮಚಿತ್ತದಿಂದ ಕಾಣುವ ಗುಣವನ್ನು ರೂಢಿಸಿಕೊಳ್ಳೋಣ. ಹೊರಗಿನ ಪ್ರಪಂಚದ ಮಿಥ್ಯೆಯನ್ನು ಅರ್ಥಮಾಡಿಕೊಂಡು, ಒಳಗಿನ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವತ್ತ ಹೆಜ್ಜೆ ಇಡುತ್ತಾ ಬದುಕಿನ ನಿಜವಾದ ಸವಿಯನ್ನು ಸವಿಯೋಣ ಎಂಬ ಸದಾಶಯದೊಂದಿಗೆ...

ಈ ಒಂದು ವಚನ

**ಪ್ರಭಾವಲಯದೋಳು ತೃಪ್ತಿಯ ಬಯಸಿ**
**ಪ್ರಾಪ್ತಿಗಾಗಿ ಹಂಬಲಿಸದಿರು**
**ಪ್ರಪಂಚದ ಪ್ರಲೋಭದಿಂದ**
**ಪ್ರಲಾಪದ ವೃದ್ಧಿ ಪ್ರಯೋಜನವೆಲ್ಲಿಹದು**
**ಪ್ರಮುಖನಕಾಣಲುಪ್ರಸಾಧನದಪ್ರಯೋಜನಗಳರಿತು**
**ಪ್ರಭೋಧನಗೊಂಡು ಅಭೇದನನಾಗಿ ನಡೆ ನೀ**
**ಸೃಷ್ಟಿಬಲೇಶ**

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)